ಪುಸ್ತಕ ಪ್ರಪಂಚ

ಜೂನ್-ಜುಲೈ-೧೯೯೮



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೮ ಸಂಚಿಕೆ ೯–೧೦

ಜೂನ್–ಜುಲೈ ೧೯೯೮

ಪರಿವಿಡಿ

ಹೆಚ್ಚುವರಿ ಪುಟಗಳನ್ನು ಸೇರಿಸಿ ಜೂನ್-ಜುಲೈ ಸಂಚಿಕೆ ಒಟ್ಟಾಗಿ ಪ್ರಕಟಿಸಿದೆ. ಮಾನ್ಯ ಓದುಗರು ಸಹಕರಿಸಬೇಕಾಗಿ ಕೋರಿಕೆ. ಸಂ

PUSTAKA PRAPANCHA : Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ ೬೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–೫೭೦ ೦೦೬

ಪೋಖ್ರಾನಿನ ಸುತ್ತ ಮುತ್ತ

ವಾಜಪೇಯಿ ಸರ್ಕಾರ ಅಸ್ತಿತ್ವಕ್ಕೆ ಬಂದು ಇಂದಿಗೆ (೪-೬-೯೮) ಎಪ್ಪತ್ತೇಳು ದಿನಗಳಾಗಿವೆ. ಅತಿ ಕೇಂದ್ರೀಕರಣ, ಔತ್ತರೇಯ ಯಜಮಾನ ಪ್ರವೃತ್ತಿ ಮತ್ತು ಪ್ರಾದೇಶಿಕಾವಶ್ಯಕತೆಗಳ ನಿರ್ಲಕ್ಷ್ಯದ ಕಾರಣದಿಂದಾಗಿ, ಜನರ ಒಲವು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳ ಕಡೆಗೆ, ಕೇಂದ್ರದಲ್ಲಿ ಸಂಯುಕ್ತ ಪಕ್ಷಗಳ ಕಡೆಗೆ ವಾಲಿದೆಯೆಂಬುದನ್ನು ಹನ್ನೆರಡನೆಯ ಲೋಕಸಭಾ ಚುನಾವಣೆಗಳು ಮತ್ತೊಮ್ಮೆ ರುಜುವಾತು ಪಡಿಸಿವೆ. ಹಿಂದಿನ ಸಂಯುಕ್ತ ರಂಗಕ್ಕಿಂತ, ವಾಜಪೇಯಿ ಸಂಯುಕ್ತ ಸರ್ಕಾರ ತೀರ ಭಿನ್ನವಾಗಿದೆ. ಹಿಂದೆ ದೊಡ್ಡದೊಂದು ಪಕ್ಷ ಸಣ್ಣ ಪಕ್ಷಗಳ ಒಕ್ಕೂಟ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ನೀಡುತ್ತಿತ್ತು. ಈಗಲಾದರೂ ದೊಡ್ಡ ಪಕ್ಷವೊಂದರ ಜತೆಗೆ ಹತ್ತಾರು ಪುಡಿ ಪಕ್ಷಗಳು ಸೇರಿಕೊಂಡಿವೆ. ಕೆಲವು ಪುಡಿ ಪಕ್ಷಗಳು ಹೊರಗಿನಿಂದ ವಿಷಯಾಧಾರಿತ ಬೆಂಬಲ ನೀಡುವುದಾಗಿ ಘೋಷಿಸಿವೆ. ಸಂಯುಕ್ತರಂಗದಲ್ಲಿ ಮುಖ್ಯ ಪಾತ್ರ ವಹಿಸುತ್ತಿದ್ದ ತೆಲುಗುದೇಶಂ ಪಕ್ಷ ಚುನಾವಣಾ ಕಾಲದಲ್ಲಿ ಭಾಜಪಕ್ಕೆ ವಿರೋಧವಾಗಿದ್ದರೂ, ಚುನಾವಣಾ ನಂತರ ಅದಕ್ಕೆ ಹೊರಗಿನಿಂದ ಬೆಂಬಲ ನೀಡುತ್ತಿದೆ. ಸರ್ಕಾರ ರಚನೆಯಾದ ಕೆಲವು ದಿನಗಳಲ್ಲಿಯೇ ಅಪರಾಧ ಹೊತ್ತವರೆಂದು ಮೂವರು ಮಂತ್ರಿಗಳು ರಾಜೀನಾಮೆ ನೀಡ ಬೇಕಾಗಿ ಬಂದದ್ದು ದುರ್ದೈವ. ದಿನ ಬೆಳಗಾದರೆ, ಮಮತಲಲಿತಾರು ಪ್ರಧಾನಿ ಗಳನ್ನು ಹಿಡಿದು ಎಳೆದಾಡುತ್ತಾರೆ; ಅವರನ್ನು ಹೆದರಿಸುತ್ತಾರೆ- ಇಬ್ಬರು ಮೂವರು ಹಿರಿಯ ಮಂತ್ರಿಗಳು ನೆರೆಹೊರೆಯ ರಾಷ್ಟ್ರಗಳೊಡನೆ ಕಾಲು ಕೆರೆಯುತ್ತಿದ್ದಾರೆ. ಅವರ ರೋಷಕ್ಕೆ ಕಾರಣವಿದ್ದರೂ, ರಾಜ ತಾಂತ್ರಿಕತೆ ಯನ್ನು ಗಾಳಿಗೆ ತೂರದೆ, ಸಂಯಮದಿಂದ ಹಾಗೂ ಉಪಾಯದಿಂದ ವರ್ತಿಸ ಬೇಕಾಗಿದೆ. ಆ ಮೂವರು ಮಂತ್ರಿಗಳ ಆಗ್ರಹಪೂರ್ವಕ ಘೋಷಣೆಗಳಿಗೆ ಪ್ರಧಾನಿಗಳ ಸಮ್ಮತಿ ಇರಬಹುದೆ ಎಂಬ ಊಹೆಗೆ ಅವರ ಮೌನ ಸಾಕ್ಷಿಯಾಗಿದೆ.

ಕೇಂದ್ರದಲ್ಲಿ ಸರ್ಕಾರ ರಚನೆಯಾಗುತ್ತಿದ್ದಂತೆ, ಭಾರತೀಯ ಜನತಾಪಕ್ಷದ ಮತ್ತು ಇತರ ಪುಡಿಪಕ್ಷಗಳ ನಾಯಕರು ಸಭೆ ಸೇರಿ ಸರ್ವಸಮ್ಮತವಾದ ರಾಷ್ಟ್ರೀಯ ಕಾರ್ಯಕ್ರಮವೊಂದನ್ನು ರೂಪಿಸಿಕೊಳ್ಳುತ್ತಾರೆ. ಭರತ ಖಂಡದ

ನಿರ್ಮಾಣ ಭಾರತೀಯರಿಂದಲೇ ಆಗಬೇಕೆಂಬ ಸ್ವದೇಶಿವ್ರತ, ಪ್ರತಿಯೊಬ್ಬರಿಗೂ ಉದ್ಯೋಗದ ಹಕ್ಕು, ಚುನಾವಣಾ ಸುಧಾರಣೆಗಳು, ಇವು ಆ ಕಾರ್ಯಕ್ರಮಗಳಲ್ಲಿ ಕೆಲವು. ಜಯಲಲಿತಾ ಅವರ ಒತ್ತಾಯಕ್ಕೆ ಮಣಿದು, ಪ್ರಮುಖ ಭಾರತೀಯ ಭಾಷೆಗಳೆಲ್ಲವೂ ಕೇಂದ್ರದ ಅಧಿಕೃತ ಭಾಷೆಗಳಾಗಬೇಕೆಂಬ ಸಲಹೆಯನ್ನು ಸಮಿತಿಯೊಂದರ ಪರಿಶೀಲನೆಗೊಪ್ಪಿಸಿರುವುದು ಔತ್ತರೇಯರಿಗೆ ಅಪಥ್ಯವಾಗಿರಬೇಕೆಂಬುದರಲ್ಲಿ ಸಂಶಯವಿಲ್ಲ. ರಾಷ್ಟ್ರೀಯ ಐಕ್ಯದ ದೃಷ್ಟಿಯಿಂದಲೇ ಪ್ರಾದೇಶಿಕ ಭಾಷೆಗಳ ಪಾರಮ್ಯವನ್ನೊಪ್ಪಿಕೊಳ್ಳಬೇಕಾಗುತ್ತದೆ. ಒಬ್ಬರು ಹೆಣ್ಣಿಗಿರುವ ದೂರದೃಷ್ಟಿ ಮತ್ತು ತತ್ತ್ವನಿಷ್ಠೆ ಗಂಡಸರಿಗಿಲ್ಲದಿರುವುದೇ ಸೋಜಿಗ.

ಕೇಂದ್ರ ಸರ್ಕಾರದ ನೌಕರರ ನಿವೃತ್ತಿ ವಯಸ್ಸನ್ನು ಅರುವತ್ತಕ್ಕೇರಿಸಿದ್ದು ಬಹು ಟೀಕೆಗೆ ಗುರಿಯಾಗಿದೆ. ಇದು ವಾಜಪೇಯಿ ಸರ್ಕಾರದ ಮೊತ್ತಮೊದಲ ಸಾಧನೆಗಳಲ್ಲೊಂದು. ಇಂಥ ಪಾರ್ಶ್ವಿಕ ನಿರ್ಧಾರದಿಂದಾಗಿ, ಕೆಲವು ಉತ್ತಮ ವರ್ಗದ ನೌಕರರಿಗೆ ಅನುಕೂಲವಾಗಿ, ದಲಿತ ಮತ್ತು ಹಿಂದುಳಿದ ಯುವಕರ ನಿರುದ್ಯೋಗ ಹೆಚ್ಚುತ್ತದೆಂಬುದು ವಿವಾದಕ್ಕೆಡೆಯಾಗಿದೆ. ದೇಶವೆಲ್ಲ ಒಂದು ಎಂದು ಹೇಳುವ ಜನ ತಾರತಮ್ಯ ನೀತಿಯನ್ನನುಸರಿಸಬಹುದೆ? ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೌಕರರ ನಡುವೆ ಈ ಭೇದ ಭಾವವೇಕೆ? ಅವರು ಅಯೋನಿಜರು ಇವರು ಯೋನಿಜರೆ? ಸಂಬಳಗಳ ಶ್ರೇಣಿಯನ್ನು ಪುನರ್ನವೀಕರಿಸುವಾಗ, ರಾಜ್ಯ ಸರ್ಕಾರಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಏಕಮುಖ ನಿರ್ಧಾರ ತೆಗೆದುಕೊಳ್ಳುವುದು ಒಳಿತಲ್ಲ. ಇದರಿಂದಾಗಿ ರಾಜ್ಯ ಸರ್ಕಾರದ ನೌಕರರಲ್ಲಿ ನಿರುತ್ಸಾಹ, ನಿರಾಶೆಗಳು ಮೂಡಿ, ಒಂದಲ್ಲ ಒಂದು ದಿನ ಕ್ಷೋಭೆಯುಂಟಾದರೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ.

ವಾಜಪೇಯಿ ಸರ್ಕಾರದ ಮಹಾ ಸಾಧನೆಯೆಂದರೆ, ದ್ವಿತೀಯ ಪೋಖ್ರಾನ್ ಪರೀಕ್ಷೆ. ೧೯೭೪ರಲ್ಲಿ ಇಂದಿರಾಗಾಂಧಿಯವರ ಅಧಿಕಾರಾವಧಿಯಲ್ಲಿ ಬುದ್ಧ ಪೌರ್ಣಿಮೆಯ ದಿನದಂದು ಅಣುಬಾಂಬನ್ನು ಸಿಡಿಸಲಾಗಿತ್ತು. ಇಪ್ಪತ್ತನಾಲ್ಕು ವರ್ಷಗಳ ನಂತರ, ಅದೇ ಬುದ್ಧ ಪೂರ್ಣಿಮೆಯ ದಿನದಂದು, ೧೧-೫-೧೯೯೮ ರಂದು ಮೂರು ಬಾಂಬುಗಳನ್ನು, ಎರಡು ದಿನಗಳ ನಂತರ ಮತ್ತೆರಡು ಬಾಂಬುಗಳನ್ನು ಸಿಡಿಸಲು ವಿಜ್ಞಾನಿಗಳಿಗೆ ಪ್ರಧಾನಿ ಅನುಮತಿ

ನೀಡಿ, ವಾದವಿವಾದಗಳಿಗೆ ಎಡೆಮಾಡಿಕೊಟ್ಟಿದ್ದಾರೆ. ಪ್ರಧಾನಿಗಳನ್ನು ಹಿಗ್ಗಾಮುಗ್ಗಾ ಎಳೆಯುತ್ತಿರುವ ಪುಡಿ ಪಕ್ಷಗಳನ್ನು ನಿಯಂತ್ರಿಸುವ ಹಾಗೂ ಜನತೆಯನ್ನು ತಮ್ಮ ಪಕ್ಷದಕಡೆಗೆ ಒಲಿಸಿಕೊಳ್ಳುವ ಸಲುವಾಗಿ ಬಾಂಬ್ ಸಿಡಿತವನ್ನು ಬಳಸಿಕೊಳ್ಳಲಾಗುತ್ತದೆಂದು ವಿರೋಧ ಪಕ್ಷಗಳು ; ಅದರಲ್ಲಿ ಯಾವ ರಾಜಕೀಯೋದ್ದೇಶವೂ ಇಲ್ಲ, ಬಲ ಪ್ರದರ್ಶನದ ಮೂಲಕ ರಾಷ್ಟ್ರ ಭದ್ರತೆಯನ್ನು ಕಾಯ್ದುಕೊಳ್ಳುವುದೇ ತಮ್ಮ ಗುರಿಯೆಂದು ಸರ್ಕಾರದ ಪರವಾಗಿ ಪ್ರಧಾನಿಗಳು ವಾಕ್ಕಲಹದಲ್ಲಿ ತೊಡಗಿದ್ದಾರೆ. ನೆರೆಹೊರೆಯ ರಾಷ್ಟ್ರಗಳ ಬಗ್ಗೆ ಕಿಡಿ ಕಾರುತ್ತಿರುವ ಮಂತ್ರಿಗಳ ಚುರುಕು ಮಾತಿನ ಹಿನ್ನೆಲೆಯಲ್ಲಿ ಈ ಉಪಕ್ರಮದ ಬಗ್ಗೆ ಆಲೋಚಿಸಬೇಕಾಗುತ್ತದೆ.

ಪ್ರಸಕ್ತ ಪರಿಸ್ಥಿತಿಯನ್ನರ್ಥಮಾಡಿಕೊಳ್ಳಲು ಈ ಅಣುಬಾಂಬಿನ ಕತೆಯನ್ನು ಸಂಕ್ಷೇಪವಾಗಿ ಅರಿಯುವುದು ಮೇಲು. ನಾಗಸಾಕಿ ಹಿರೋಷಿಮಾಗಳ ಮೇಲೆ ಅಣುಬಾಂಬ್ ಸಿಡಿಸಿದಾಗ ದ್ವಿತೀಯ ಮಹಾಯುದ್ಧ ಕೊನೆಗೊಂಡಿತಷ್ಟೆ. ಆಗ ಸಹಸ್ರ ಸಹಸ್ರ ಮಂದಿ ಸತ್ತದ್ದಲ್ಲದೆ, ಬಹುಜನ ರೋಗರುಜಿನಗಳಿಂದ ನರಳುತ್ತಾರೆ. ಯುದ್ಧದ ಘೋರ ಪರಿಣಾಮಗಳನ್ನು ತಡೆಗಟ್ಟುವ ಸಲುವಾಗಿ, ಶಾಂತಿಯನ್ನು ಸ್ಥಾಪಿಸುವ ದೃಷ್ಟಿಯಿಂದ, ಅನೇಕ ರಾಷ್ಟ್ರಗಳು ಸೇರಿ, ಪ್ರಪಂಚ ಸಂಸ್ಥೆಯನ್ನು ಹುಟ್ಟುಹಾಕುತ್ತವೆ. ಅದರ ಕಾರ್ಯಕಾರಿಣಿಯಂತಿರುವ ಭದ್ರತಾ ಸಮಿತಿಯಲ್ಲಿಅಮೆರಿಕಾ,ಇಂಗ್ಲೆಂಡ್,ಫ್ರಾನ್ಸ್,ರಷ್ಯಾಮತ್ತುಚೀನಾಶಾಶ್ವತ ಸ್ಥಾನವನ್ನೂ ವೀಟೋ ಅಂದರೆ ಬಹುಮತ ತಿರಸ್ಕರಾಧಿಕಾರವನ್ನು ಅಪಹರಿಸಿ ಕೊಂಡು, ಜಗದ್ರಕ್ಷಕರೆಂಬಂತೆ, ಪಾಳೆಯಗಾರಿಕೆಯಿಂದ ಮೆರೆಯುತ್ತಿವೆ. ಸರ್ವ ಸದಸ್ಯರ ನಿರ್ಣಯವನ್ನು ತಿರಸ್ಕರಿಸುವ ಹಕ್ಕು ಅವುಗಳಿಗಿದೆ. ಜಾಗತಿಕ ಮಟ್ಟದ ಹಣಕಾಸು ಸಂಸ್ಥೆಗಳ ಮೂಲಕ ಶ್ರೀಮಂತ ರಾಷ್ಟ್ರಗಳು ಅಭಿವೃದ್ಧಿ ಶೀಲ ರಾಷ್ಟ್ರಗಳ ಮೇಲೆ ಹತೋಟಿಯನ್ನಿಟ್ಟುಕೊಂಡಿವೆ. ತಾವು ಮಾತ್ರ ಮಾರಕಾಸ್ತ್ರಗಳ ರಾಶಿಯನ್ನೊಟ್ಟಿಕೊಳ್ಳಬಹುದು, ಪ್ರಯೋಗ ನಡೆಸ ಬಹುದು ; ಇತರ ರಾಷ್ಟ್ರಗಳು ಅಣುಬಾಂಬ್‌ಗಳನ್ನು ತಯಾರಿಸಬಾರದು, ಆ ಬಗ್ಗೆ ಪ್ರಯೋಗಗಳನ್ನು ನಡೆಸಬಾರದು ಎಂಬಂತೆ ಸೀಟಿಬೀಟಿ (ಕಾಂಪ್ರಿ-ಹೆನ್ಸಿವ್ ಟೆಸ್ಟ್‌ಬ್ಯಾನ್ ಟ್ರೀಟಿ) ಕರಾರನ್ನು ರೂಪಿಸಿಕೊಂಡು ಸರ್ವಾಧಿಕಾರ ವನ್ನು ಚಲಾಯಿಸುತ್ತಿವೆ. ಇಡೀ ಜಗತ್ತನ್ನೇ ವಸಾಹತೀಕರಣಮಾಡಿ ಕೊಂಡಿವೆ. ಏಷಿಯಾ ಮತ್ತು ಆಫ್ರಿಕಾ ರಾಷ್ಟ್ರಗಳನ್ನು ತಮ್ಮ ಹದ್ದುಬಸ್ತಿ ನಲ್ಲಿಟ್ಟುಕೊಂಡು ಆರ್ಥಿಕ ದಾಸ್ಯವನ್ನೇರಿ, ಒಂದರ ಮೇಲೆ ಒಂದನ್ನೆತ್ತಿಕಟ್ಟಿ

ಅವುಗಳ ಅಭಿವೃದ್ಧಿಯನ್ನು ತಡೆಯುವುದೇ ಆ ಪಂಚರಾಷ್ಟ್ರಗಳ ಗುರಿ. ಇಸ್ರೇಲ್ ಇಂಡಿಯಾ ಪಾಕಿಸ್ತಾನಗಳು ಆ ಕರಾರಿಗೆ ರುಜು ಹಾಕಿಲ್ಲ. ರುಜು ಹಾಕುವಂತೆ ಎಲ್ಲ ತೆರನ ಒತ್ತಡಗಳನ್ನು ಹೇರುತ್ತಿವೆ. ರುಜು ಹಾಕಿದ ನಂತರ ಅವು ಅಣುಬಾಂಬಿಗೆ ಸಂಬಂಧಿಸಿದ ಯಾವುದೇ ವಿಧದ ಪ್ರಯೋಗವನ್ನು ನಡಸುವಂತಿಲ್ಲ. ಪಂಚರಾಷ್ಟ್ರಗಳು ಅಣುಬಾಂಬ್ ಪ್ರಯೋಗಗಳನ್ನು ನಿಲ್ಲಿಸಿ, ಬಾಂಬುಗಳ ಬಣವೆಯನ್ನು ಕಾಲಕ್ರಮೇಣ ನಾಶಮಾಡುವುದಾದರೆ, ತಾನು ಮಾರಕಾಸ್ತ್ರ ಪ್ರಯೋಗ ನಿಲ್ಲಿಸುವುದಾಗಿ ಇಂಡಿಯಾ ಸವಾಲೆಸೆದಿದೆ. ಆ ಸವಾಲನ್ನು ಸ್ವೀಕರಿಸಲು ಪಂಚರಾಷ್ಟ್ರಗಳು ಸಿದ್ಧವಾಗಿಲ್ಲ. ದರೋಡೆಕೋರರೇ ದರೋಡೆಗೆ ಸಂಬಂಧಿಸಿದ ಕಾನೂನನ್ನು ರಚಿಸುವ ಹಕ್ಕನ್ನು ಪಡೆದಂತೆ ಅವು ವರ್ತಿಸುತ್ತಿವೆ.

ಇಂಡಿಯಾ ದೊಡ್ಡ ರಾಷ್ಟ್ರವಾದ್ದರಿಂದ, ಅದನ್ನು ಬೆಳೆಯಲು ಬಿಡಬಾರ ದೆಂಬುದು ಚೀನಾ ಅಮೆರಿಕಾಗಳ ಹುನ್ನಾರು. ಬ್ರಿಟನ್ ಅಮೆರಿಕೆಯ ಬಾಲಂ ಗೋಚಿ. ಫ್ರಾನ್ಸ್ ಒಂಟಿಯಾಗಿ ಏನೂ ಮಾಡುವಂತಿಲ್ಲ. ಸೋವಿಯಟ್ ಯೂನಿಯನ್ ಛಿದ್ರವಾದ ನಂತರ ರಷ್ಯಾದ ಪ್ರತಾಪ ಇಳಿಮುಖವಾಗಿದೆ. ಆರ್ಥಿಕವಾಗಿ ಜಪಾನ್ ತನಗಿಂತ ಮುಂದಿರುವುದರಿಂದ ಅಮೆರಿಕೆಗೆ ಅದನ್ನು ಎತ್ತಿಹಾಕಿಕೊಳ್ಳಲಿಷ್ಟವಿಲ್ಲ. ನೆರೆರಾಷ್ಟ್ರಗಳನ್ನು ಇಂಡಿಯಾದ ಮೇಲೆತ್ತಿ ಕಟ್ಟಿ, ಅದು ಪ್ರಬಲವಾಗದಂತೆ ನೋಡಿಕೊಳ್ಳುವುದೇ ಅಮೆರಿಕೆಯ ಉದ್ದೇಶ. ಅದರ ಸಾಧನೆಗಾಗಿ ಆ ದೇಶ ಚೀನಾ ಏನು ತಪ್ಪು ಮಾಡಿದರೂ ತನ್ನ ಸ್ನೇಹ ಹಸ್ತವನ್ನು ಚಾಚುತ್ತಿದೆ. ಚೀನಾ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಒದಗಿಸು ತ್ತಿದೆ. ಅದಕ್ಕೆ ಅಮೆರಿಕೆಯ ಬೆಂಬಲವಿದೆ. ಚೀನಾ ಭಾರತದ ಭೂಮಿಯನ್ನಪ ಹರಿಸಿಕೊಂಡಿದೆ ಮಾತ್ರವಲ್ಲ, ಈಶಾನ್ಯ ರಾಜ್ಯಗಳಲ್ಲಿ ಅಶಾಂತಿಯನ್ನು ಬಿತ್ತು ತ್ತಿದೆ. ಪಾಕಿಸ್ತಾನ ಕಾಶ್ಮೀರದಲ್ಲಿ ಗೊರಿಲ್ಲಾ ಯುದ್ಧ ನಡಸುತ್ತಿದೆ; ಉಗ್ರ ಗಾಮಿಗಳನ್ನು ತಯಾರಿಸಿ,ಕೊಯಮುತ್ತೂರಿನ ತನಕ ರವಾನಿಸುತ್ತಿವೆ. ಅಷ್ಟೇ ಅಲ್ಲ ಕೆಲವು ತಿಂಗಳ ಹಿಂದೆ ಪಾಕಿಸ್ತಾನ ಬಾಂಬೊಂದನ್ನು ಸಿಡಿಸಿದಾಗ ಯಾವ ದೇಶಗಳೂ ತುಟಿಪಿಟಿಕ್ಕೆನ್ನಲಿಲ್ಲ. ಪಾಕಿಸ್ತಾನ ಏನು ತಪ್ಪು ಮಾಡಿ ದರೂ, ಅದನ್ನು ಖಂಡಿಸುವವರೇ ಇಲ್ಲ. ಆತ್ಮಗೌರವವುಳ್ಳ, ದೇಶದ ಭದ್ರತೆ ಯನ್ನು ಕಾಯ್ದುಕೊಳ್ಳಬೇಕಾದ ಯಾವ ರಾಷ್ಟ್ರ ತಾನೆ ಇಂಥ ಪರಿಸ್ಥಿತಿ ಯಲ್ಲಿ ತೆಪ್ಪಗಿದ್ದೀತು! ಜಗತ್ತಿನ ಅಭಿವೃದ್ಧಿಶೀಲ ರಾಷ್ಟ್ರಗಳಂತು ಮಹಾ

ಭಾರತದ ಭೀಷ್ಮ ದ್ರೋಣರಂತೆ, ಕಂಡೂಕಾಣದವರಂತೆ ಮೌನವ್ರತವನ್ನು ತಾಳಿವೆ.

ಇಂಡಿಯಾದ ಭದ್ರತೆಗೆ ಬಾಂಬೊಂದೇ ಕಾರಣವಾಗದು. ಅಂತರಂಗ ಭದ್ರತೆ ಸರಿಯಾಗಿದ್ದರೆ ಮಾತ್ರ ಬಾಹ್ಯ ಭದ್ರತೆ ಸುಗಮವಾದೀತು. ಜಾತೀಯತೆ ಮತೀಯತೆಗಳಿಂದಾಗಿ ಅಜ್ಞಾನ ಮೌಢ್ಯ ನಿರಕ್ಷರತೆಗಳಿಂದಾಗಿ ಇಂಡಿಯಾ ನಿರ್ವೀರ್ಯವಾಗಿದೆ. ಏಕತೆಯ ಅಭಾವದಿಂದಾಗಿ ಆರ್ಥಿಕಾಭಿವೃದ್ಧಿ ಸಾಧ್ಯವಾಗುತ್ತಿಲ್ಲ. ನಾಯಕರಿಗೆ ಜಾತಿ ಮುಖ್ಯವೇ ಹೊರತು, ದೇಶವಲ್ಲ. ದೇಶದ ಈ ದೌರ್ಬಲ್ಯ ನೆರೆಯ ರಾಷ್ಟ್ರಗಳಿಗೆ ಮಾತ್ರವಲ್ಲ, ಜಗತ್ತಿನ ಎಲ್ಲ ರಾಷ್ಟ್ರಗಳಿಗೂ ಗೊತ್ತು. ಇಂಡಿಯಾಕ್ಕೆ ಸ್ನೇಹ ರಾಷ್ಟ್ರಗಳಿಗಿಂತ ಶತ್ರು ರಾಷ್ಟ್ರಗಳೇ ಅಧಿಕವಾಗಿರುವಂತೆ ತೋರುತ್ತದೆ, ಶತ್ರುತ್ವವಿಲ್ಲದಿದ್ದರೂ ತಾಟಸ್ಥ್ಯವುಂಟು. ಆಫ್ರಿಕಾದ ರಾಷ್ಟ್ರಗಳನ್ನು ತನ್ನೊಂದಿಗೊಯ್ಯುವಷ್ಟು ಆರ್ಥಿಕ ಶಕ್ತಿ ಇಂಡಿಯಾಕ್ಕಿಲ್ಲ, ನಿಜ. ಸಾಂಸ್ಕೃತಿಕವಾಗಿಯಾದರೂ ಅವುಗಳ ಸಹಾನುಭೂತಿಯನ್ನು ಸಂಪಾದಿಸಬಹುದಾಗಿದೆ. ಇಂಡಿಯಾದ ವಿಶ್ವವಿದ್ಯಾನಿಲಯಗಳು, ಅದರಲ್ಲಿಯೂ ದಕ್ಷಿಣದ ವಿಶ್ವವಿದ್ಯಾನಿಲಯಗಳು ಆಫ್ರಿಕಾ ಅಧ್ಯಯನ ಪೀಠಗಳನ್ನು ತೆರೆದು, ಆಫ್ರಿಕಾ ಸಂಸ್ಕೃತಿಯ ಪರಿಚಯವನ್ನು ಭಾರತೀಯ ಯುವಕರಿಗೆ ಒದಗಿಸಬಹುದು ; ಆಫ್ರಿಕಾದ ವಿದ್ವಾಂಸರನ್ನು ಆಗಾಗ್ಗೆ ಕರೆಸಿಕೊಂಡು, ಸಾಂಸ್ಕೃತಿಕ ವಿನಿಮಯಕ್ಕೆ ದಾರಿ ಮಾಡಿಕೊಳ್ಳಬಹುದು. ಭಾರತೀಯ ರಾಜತಾಂತ್ರಿಕ ವ್ಯವಸ್ಥೆ ವಿದೇಶಗಳಲ್ಲಿ ಪಾರಿಣಾಮಿಕವಾಗಿ ತನ್ನ ಕರ್ತವ್ಯ ನಿರ್ವಹಿಸುತ್ತಿಲ್ಲವೆಂಬುದು, ನೌಕರಶಾಹಿ ಸೋತಿದೆಯೆಂಬುದು ಆ ಬಗ್ಗೆ ರಾಜಕೀಯ ನಾಯಕರಿಗೆ ತಿಳಿವಳಿಕೆಯಿಲ್ಲವೆಂಬುದು ಇಂದಿನ ಬಾಹ್ಯಾಂತರಂಗಿಕ ಪರಿಸ್ಥಿತಿಯಿಂದ ಸ್ಪಷ್ಟವಾಗುತ್ತದೆ.

ಜಾಗತಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ದ್ವಿತೀಯ ಪೋಖ್ರಾನ್ ಪ್ರಯೋಗ ತಪ್ಪಲ್ಲವೆಂದು ಬಹುಮಂದಿ ಭಾರತೀಯರಿಗೆ ತೋರದಿರದು. ಇಲ್ಲಿಯ ವಿಜ್ಞಾನಿಗಳ ಪ್ರತಿಭೆ ಹಾಗೂ ರಾಷ್ಟ್ರದ ಬಲ ವಿದೇಶೀಯರಿಗೆ ಅರಿವಾಗಬೇಕು, ನಿಜ; ಇಲ್ಲಿಯ ವಿಜ್ಞಾನಿಗಳು ಅಭಿನಂದನೀಯರೂ ನಿಜ. ಪ್ರಯೋಗದ ಮುಖಾಂತರವೇ ವಿಜ್ಞಾನ ಬೆಳೆಯಬೇಕೆಂಬುದರಲ್ಲಿಯೂ ಭಿನ್ನಾಭಿಪ್ರಾಯವಿಲ್ಲ. ವೈಜ್ಞಾನಿಕ ವಿಕಾಸದ ದೃಷ್ಟಿಯಿಂದ, ಅಭಿವೃದ್ಧಿ ಕಾರ್ಯಗಳಿಗೆ ಅಣುಶಕ್ತಿಯನ್ನು ಬಳಸಿಕೊಳ್ಳಬೇಕೆನ್ನುವ ಹಿನ್ನೆಲೆಯಲ್ಲಿ

ಪ್ರಯೋಗ ತಪ್ಪಲ್ಲವೆಂಬುದೂ ಸರಿಯೇ. ಆದರೆ ಪ್ರಯೋಗ ನಡೆಸಿದ ಸಮಯ ಸೂಕ್ತವಾದದ್ದೇ ಎಂದು ಯೋಚಿಸಬೇಕಾಗಿದೆ. ಇಂಡಿಯಾಕ್ಕೆ ಸವಾಲಾಗಿ ಪಾಕಿಸ್ತಾನ ಮೇ ತಿಂಗಳಲ್ಲಿ ಚಾಯ್‌ಗಾಯ್‌ನಲ್ಲಿ ಐದಲ್ಲ, ಏಳು ಬಾಂಬುಗಳನ್ನು ಆಸ್ಫೋಟಿಸುತ್ತದೆ. ಆ ಬಾಂಬುಗಳ ಅಸ್ತಿತ್ವ ಹಾಗೂ ಸಾಮರ್ಥ್ಯದ ಬಗ್ಗೆಯೂ ಶಂಕೆಯಿದ್ದೇ ಇದೆ. ಆ ಶಂಕೆಗೆ ಬುಡ ವಿಲ್ಲವೆಂದೇ ಭಾರತೀಯರು ತಿಳಿಯುವುದು ಮೇಲು. ಚಾಯ್‌ಗಾಯ್ ಪ್ರಯೋಗ ಜಗತ್ತಿನ ಮೇಲೆ ಏನು ಪರಿಣಾಮವುಂಟು ಮಾಡಿದೆಯೆಂಬುದು ಮುಖ್ಯ. ಪ್ರಬಲರಾಷ್ಟ್ರಗಳು ಪಕ್ಷಪಾತದಿಂದ ದೂರವಾಗಿಲ್ಲವೆಂದೇ ಹೇಳ ಬೇಕಾಗುತ್ತದೆ. ಪೋಖ್ರಾನ್ ವಿರುದ್ಧವಾಗಿ ಅವು ಎಷ್ಟು ಕೂಗಾಡಿ ದುವೋ, ಅಷ್ಟೇ ಕ್ರೂರವಾಗಿ ಪಾಕಿಸ್ತಾನದ ವಿರುದ್ಧವಾಗಿ ವಾಗ್ದಾಳಿ ಮಾಡಿಲ್ಲವೆಂಬುದು ಸುಸ್ಪಷ್ಟ. ಪಾಕಿಸ್ತಾನದೊಡನೆ ಮಾತುಕತೆಗೆ ಇಂಡಿಯಾ ಸಿದ್ಧವಾಗಿದೆಯೆಂದು, ಇತರ ಪ್ರದೇಶಗಳ ಮೇಲೆ ಪ್ರಪ್ರಥಮ ವಾಗಿ ತಾನು ಧಾಳಿಮಾಡುವುದಿಲ್ಲವೆಂಬ ಕರಾರಿಗೆ ರುಜುಹಾಕಲು ತಯಾರೆಂದು ಇಂಡಿಯಾದ ಪ್ರಧಾನಿ ಘೋಷಿಸಿದರೂ, ಆ ಘೋಷಣೆಗೆ ಸಹಾನುಭೂತಿಯ ಪ್ರತಿಕ್ರಿಯೆ ಪ್ರಬಲ ರಾಷ್ಟ್ರಗಳಿಂದ ದೊರೆಯದಿದ್ದುದೇ ದುರ್ದೈವ. ಈಗಲೂ ಅಷ್ಟೇ; ಬಾಂಬನ್ನು ಮೊದಲು ಸಿಡಿಸಿದ್ದು ಪಾಕಿಸ್ತಾನವೆಂಬುದನ್ನು ಮರೆಯುವಂತಿಲ್ಲ. ಕೆಲವು ರಾಷ್ಟ್ರಗಳ ಆರ್ಥಿಕ ದಿಗ್ಬಂಧನದಿಂದಾಗಿ ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಹದಗೆಟ್ಟು, ಜನಜೀವನ ಅಸ್ತವ್ಯಸ್ತವಾಗಿ, ದೇಶದಲ್ಲಿ ಕ್ಷೋಭೆ ಸಂಭವಿಸಬಹುದೆ ಎಂಬ ಪ್ರಶ್ನೆ ಸಹಜವೇ. ಉದಾರ ಆರ್ಥಿಕ ನೀತಿಯಿಂದಾಗಿ, ಭರತಖಂಡದಲ್ಲಿ ಪ್ರಬಲ ರಾಷ್ಟ್ರಗಳ ಆಸಕ್ತಿಗಳಿಗೆ ಧಕ್ಕೆಯುಂಟಾಗುವ ಸಂಭವವಿರಲಾಗಿ, ದಿಗ್ಬಂಧನ ಬಹುದಿನ ಮುಂದುವರಿಯಲಾರದೆಂಬ ಅಭಿಪ್ರಾಯವೂ ಇದೆ. ಅದೇನೇ ಇರಲಿ, ದ್ವಿತೀಯ ಪೋಖ್ರಾನ್ ಪ್ರಯೋಗ ಸಮಯೋಚಿತವಲ್ಲದಿದ್ದರೂ, ತಪ್ಪುಯಾರದೇ ಇರಲಿ, ಸಮತೋಲನ ಕಳೆದುಕೊಳ್ಳದೆ, ರಾಷ್ಟ್ರೀಯ ಏಕತೆಯನ್ನು ಮೂಡಿಸಬೇಕಾದ್ದು ಎಲ್ಲ ರಾಜಕಾರಣಿಗಳ ಆದ್ಯಕರ್ತವ್ಯ. ಶಾಂತಿಯುತ ರಾಷ್ಟ್ರಾಭಿವೃದ್ಧಿಗಾಗಿ, ಆತ್ಮರಕ್ಷಣೆಗಾಗಿ ಹಾಗೂ ವಿಜ್ಞಾನದ ಪ್ರಗತಿಗಾಗಿ ಅಣು ತಂತ್ರದ ಬಳಕೆ ಪ್ರತಿಯೊಂದು ದೇಶದ ಸಾರ್ವಭೌಮ ಹಕ್ಕೆಂದು ಜಗತ್ತಿಗೆ ಸ್ಪಷ್ಟಪಡಿಸಬೇಕಾಗಿದೆ. ಎಲ್ಲ ಅಭಿವೃದ್ಧಿ ಶೀಲ ರಾಷ್ಟ್ರಗಳು ಒಗ್ಗಟ್ಟಾಗಿ ಪಂಚಕರ ವಂಚನೆಯನ್ನು ಸರ್ವಾಧಿಕಾರವನ್ನು ಪ್ರಶ್ನಿಸಿ ಪ್ರತಿಭಟಿಸಿ ನಿಶ್ಶಸ್ತ್ರೀಕರಣದ ಪರವಾಗಿ ಹೋರಾಡಬೇಕಾಗಿದೆ.

ರಾಷ್ಟ್ರೀಯ ಸ್ವಯಂಸೇವಾ ಸಂಘ ಮತ್ತು ಹಿಂದೂ ಮಹಾಸಭೆಗಳು ಭಾಜಪದ ಮೇಲೆ ದೂರದ ನಿಯಂತ್ರಣವನ್ನಿಟ್ಟುಕೊಂಡಿವೆಯೆಂಬ ಮಾತಿದೆ. ಆ ಬಗ್ಗೆ ಜನ ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಭರತಖಂಡದಲ್ಲಿರುವ ಎಲ್ಲ ಪಕ್ಷಗಳ ಗುರಿ ಒಂದೇ; ಕಾರ್ಯವಿಧಾನ ಮಾತ್ರ ಭಿನ್ನ. ರಾಷ್ಟ್ರಾಭಿಮಾನವೆನ್ನುವುದು ಯಾವುದೋ ಒಂದು ಪಕ್ಷದ ಚೆಪ್ಪೇಡಲ್ಲ. ಆದರೆ ಬಾಂಬ್ ಪ್ರಯೋಗದಂಥ ಮಹದ್ವಿಷಯವನ್ನು ಕಾರ್ಯಗತಗೊಳಿಸುವಾಗ, ಸರ್ವಪಕ್ಷಗಳ ನಾಯಕರ ಅಥವಾ ಎಲ್ಲಾ ನಾಯಕರನ್ನೊಳಗೊಂಡ ರಾಷ್ಟ್ರೀಯ ಭದ್ರತಾ ಸಮಿತಿಯ ಒಟ್ಟಭಿಪ್ರಾಯವನ್ನು ಸಂಗ್ರಹಿಸಿಕೊಂಡು, ಅದರ ಆಧಾರದ ಮೇಲೆ ನಿರ್ಧಾರತೆಗೆದುಕೊಳ್ಳುವುದು ಮೇಲು. ಇಂಥ ಮಹದ್ವಿಷಯದಲ್ಲಿ ಏಕಪಕ್ಷೀಯ ನಿರ್ಣಯ ಸಾಧುವಲ್ಲ, ದೇಶದ ಹಿತದೃಷ್ಟಿಯಿಂದ ಆರೋಗ್ಯಕರವಲ್ಲ. ಅಣು ಪಂಚಕಲ್ಲಬ್ಬಿನ ಆರನೆಯ ಸದಸ್ಯತ್ವಪಡೆದ ಹೆಮ್ಮೆ ಭಾರತದ್ದೆಂದು ಕೆಲವು ಹಿರಿಯರೇ ಘೋಷಿಸಿದ್ದುಂಟು. ಹೆಮ್ಮೆಯೊಂದು ಕಡೆಗಿರಲಿ. ಅದರ ಜಾಗತಿಕ ಹಾಗೂ ಆಂತರಿಕ ಪರಿಣಾಮಗಳನ್ನೆದುರಿಸಲು ಭಾರತೀಯರು ಸಿದ್ಧರಾಗಬೇಕಾಗಿದೆ. ನಿಜ, ಎಲ್ಲ ಅನಿಷ್ಟ ಹಾಗೂ ಅರಿಷ್ಟಗಳಿಗೆ ಆ ಕ್ಲಬ್ಬೇ ಕಾರಣ. ಅದು ನುಂಗಲಾರದ ಬಿಸಿತುಪ್ಪ. ಇಂಥ ಸಂಕ್ಲಿಷ್ಟ ದಿಗ್ಭ್ರಮೆಯ ಸಮಯದಲ್ಲಿ ರಾಷ್ಟ್ರದ ಸಕಲ ಪ್ರಾಮಾಣಿಕ ಮೇಧಾವಿಗಳ ಸಹಕಾರ ಸಹಾಯ ತ್ಯಾಗಗಳು ಅತ್ಯವಶ್ಯ.

ಆಡಳಿತ ಪಕ್ಷಗಳಾಗಲಿ ವಿಪಕ್ಷಗಳಾಗಲಿ ದೇಶವನ್ನು ತಪ್ಪುದಾರಿಗೆಳೆಯುವ, ಗಾಬರಿಗೊಳಿಸುವ, ಅಥವಾ ನೆರೆಹೊರೆಯವರನ್ನು ಅನಾವಶ್ಯಕವಾಗಿ ಕೆರಳಿಸುವ ಮಾತುಗಳಲ್ಲಿ ತೊಡಗಬಾರದು, ಕ್ರಿಯೆಯನ್ನಾಚರಿಸಬಾರದು. ಪರ-ರಾಷ್ಟ್ರಗಳ ಗೆಳೆತನ ಹಾಗೂ ಆಂತರಿಕ ಶಕ್ತಿಕ್ರೋಢೀಕರಣದಿಂದ ಮಾತ್ರ ದೇಶದ ಧಾರಣಾ ಸಾಮರ್ಥ್ಯ ಹೆಚ್ಚುತ್ತದೆಂಬುದನ್ನು ಯಾರೂ ಮರೆಯಬಾರದು. ಸಂಯಮಿಗಳೂ, ವಿವೇಕಿಗಳೂ, ಅನುಭವಿಗಳೂ, ಜಲ್ಪದೂರರೂ ಆದ ವಾಜಪೇಯಿಯವರು ಸದ್ಯೋಜಾತ ಅಧಿಕಾರದ ಅಮಲಿನಲ್ಲಿರುವ ಸಂಯಮಿಗಳಲ್ಲದ ಸಹೋದ್ಯೋಗಿಗಳನ್ನು ಪಕ್ಷದ ಸದಸ್ಯರನ್ನು ನಿಯಂತ್ರಿಸಬೇಕಾಗುತ್ತದೆ. ಪೋಖ್ರಾನ್ ನಿವೇಶನದಲ್ಲಿ ಶಕ್ತಿ ದೇವಾಲಯವನ್ನು ನಿರ್ಮಿಸುವ ಅಥವಾ ಶಕ್ತಿದಿನವನ್ನಾಚರಿಸುವ ವಿಷಯದಲ್ಲಿಯೂ ಅತ್ಯವಸರ ಸರಿಯೆ ಎಂದು ಯೋಚಿಸಬೇಕಾಗಿದೆ. ದೇಶದ ಮೂಲೆ ಮೂಲೆಗಳಲ್ಲಿ ಭಯ ಸಂದೇಹ ಗಾಬರಿ ತಳಮಳಗಳು ಉಸಿರು ಕಟ್ಟಿಸುವ ಸ್ಥಿತಿಯಲ್ಲಿರುವಾಗ ಅವುಗಳನ್ನು ಅಧಿಕ

ಗೊಳಿಸುವ ಕಾರ್ಯಕ್ರಮಗಳನ್ನು ಕಾವು ಇಳಿಯುವತನಕ ಮುಂದೂಡಬಾರದೇಕೆ? ಶಾಂತಿಯಿಲ್ಲದೆ ದೇಶದ ಆರ್ಥಿಕ ಪ್ರಗತಿ ಸಾಧ್ಯವಿಲ್ಲವೆಂಬುದನ್ನು ನುರಿತವರಿಗೆ ಹೇಳಿಕೊಡಬೇಕಾಗಿಲ್ಲ. ದೇಶ ಶ್ರೀಮಂತವಾದಾಗ ಜಗತ್ತಿನ ಎಲ್ಲ ರಾಷ್ಟ್ರಗಳೂ ಮಣಿಯುತ್ತವೆ. ದ್ವಿತೀಯ ಮಹಾಯುದ್ಧಾಂತ್ಯದಲ್ಲಿ ಜಪಾನ್ ದಯನೀಯ ರಿಕ್ತಾವಸ್ಥೆಯಲ್ಲಿತ್ತೆಂಬುದನ್ನು ಅಮೆರಿಕೆಯ ದಾಸ್ಯ ಪಂಜರದಲ್ಲಿ ಸೆರೆಯಾಗಿತ್ತೆಂಬುದನ್ನು ಜಗತ್ತೇ ಬಲ್ಲುದು. ಈವೊತ್ತು ಅಮೆರಿಕೆಯೂ ಅದಕ್ಕೆ ಮಣಿಯುವ ಸ್ಥಿತಿಯಲ್ಲಿದೆ. ಅಂಥ ಮಣಿಹದ ಗುಟ್ಟೇನೆಂಬುದನ್ನು ಭಾರತೀಯರು ಅರಿಯಬೇಕಾಗಿದೆ. ವಿಜ್ಞಾನದಲ್ಲಿ ಭಾರತ ಯಾವ ರಾಷ್ಟ್ರಗಳಿಗೂ ಕನಿಷ್ಠವಲ್ಲವೆಂಬುದನ್ನೀಗ ತೋರಿಸಿಯಾಗಿದೆ. ಜೈ ಜವಾನ್, ಜೈ ಕಿಸಾನ್, ಜೈ ವಿಜ್ಞಾನ್ ಎಂಬ ಘೋಷಣೆ ಚಿರಾಯುವಾಗಲಿ, ಆ ಘೋಷಣೆ ನಿಜವಾಗಲು ಬೇಕಾದ ಶಾಂತಿ ನೆಲಸಲಿ, ಅಂಥ ಶಾಂತಿಗಾಗಿ ನಾಡಿನವರೆಲ್ಲ ದುಡಿಯುವಂತಾಗಲಿ! ಅಣ್ವಸ್ತ್ರಕ್ಕೆ ಶಾಂತಿಯೊದಗಲಿ; ನಿಶ್ಶಸ್ತ್ರೀಕರಣಕ್ಕೆ ಜಯವಾಗಲಿ!

ಓಂ ದ್ಯೌಃ ಶಾಂತಿರಂತರಿಕ್ಷಂ ಶಾಂತಿಃ
ಪೃಥಿವೀ ಶಾಂತಿರಾಪಃ ಶಾಂತಿ ರೋಷಧಯ ಶಾಂತಿಃ
ವನಸ್ಪತಯಃ ಶಾಂತಿರ್ವಿಶ್ವೇ ದೇವಾಃ ಶಾಂತಿರ್ಬ್ರಹ್ಮ ಶಾಂತಿಃ
ಸರ್ವಂ ಶಾಂತಿಃ ಶಾಂತಿರೇವ ಶಾಂತಿಃ ಸಾ ಮಾ ಶಾಂತಿರೇಧಿ

ದೇಜಗೌ

ಈದ್ ಮೀಲಾದ್

ಕೆ. ಮೊಹಮ್ಮದ್ ಶರೀಫ್

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೬

ಮನುಕುಲದ ಮೂಲ ಪುರುಷರೆನಿಸಿದ ಪ್ರವಾದಿ ಆದಮರಿಂದ (ಅ) ಮೊದಲುಗೊಂಡು ಒಂದು ಲಕ್ಷದ ಇಪ್ಪತ್ತನಾಲ್ಕು ಸಾವಿರ ಸಂಖ್ಯೆಯಲ್ಲಿರುವ ಪ್ರವಾದಿಗಳ ಈ ಮಾಲಿಕೆಯಲ್ಲಿ ಕೊನೆಯ ಪ್ರವಾದಿಯೇ ಮೊಹಮ್ಮದ್ ಅಥವ ಮೊಹಮ್ಮದ್ ಪೈಗಂಬರ್ (ಸ. ಅ. ಸ.) ಇವರು ಇಸ್ಲಾಂ ಮತ ಸ್ಥಾಪಕರು. ಇವರೊಬ್ಬ ಇತಿಹಾಸ ಪುರುಷ. ಕ್ರಿ. ಶ. ೫೭೦ ರಲ್ಲಿ ಜನಿಸಿ ೬೩ ವರ್ಷಗಳಕಾಲ ಬಾಳಿ ಜಗವನ್ನು ಬೆಳಗಿ ಬೆಳಕನ್ನು ಕೊಟ್ಟು ಹೋದ ಮಹಾಪುರುಷ. ಇವರು ಜನಿಸಿದ್ದು ಅರಬ್ ದೇಶದ ಮಕ್ಕಾ ನಗರದ ಖುರೈಷ್ ಎಂಬ ಗೌರವಾನ್ವಿತ ವಂಶದಲ್ಲಿ. ಇವರ ತಂದೆ ಅಬ್ದುಲ್ಲಾಹ್ ಹಾಗೂ ತಾಯಿ ಅಮೀನಾ. ಮೊಹಮ್ಮದ್ ಹುಟ್ಟುವುದಕ್ಕೆ ಮೊದಲೇ ತಂದೆಯನ್ನು ಕಳೆದುಕೊಂಡಿದ್ದರು. ವ್ಯಾಪಾರಕ್ಕೋಸ್ಕರ ಪ್ರಯಾಣ ಮಾಡುತ್ತಿದ್ದು ಹಿಂತಿರುಗುವಾಗ ದಾರಿಯಲ್ಲೇ ಮೃತರಾದುದರಿಂದ ಅವರ ಕೊನೆಯ ದರ್ಶನ ಅಮೀನಾರಿಗೂ ಸಿಕ್ಕಲಿಲ್ಲ. ಹೀಗೆ ನಿರ್ಭಾಗ್ಯರಾದ ಮೊಹಮ್ಮದರನ್ನು ಮೊದಲು ಸುವೈಬಾ ಎಂಬ ಗುಲಾಮಿ ಹೆಂಗಸು ಸಾಕಿ ಕೆಲವು ದಿವಸಗಳ ಅನಂತರ ಹಲೀಮ ಎಂಬ ದಾದಿಯ ಕೈಗೆ ಒಪ್ಪಿಸಿದಳು. ಇವಳ ಎದೆಹಾಲು ಕುಡಿದು ಮೊಹಮ್ಮದರು ಹಳ್ಳಿಯ ಸ್ವಚ್ಛ ವಾತಾವರಣದಲ್ಲಿ ಬೆಳೆದರು. ಹೀಗೆ ನಾಲ್ಕೈದು ವರ್ಷಗಳ ಕಾಲ ಬೆಳೆದ ಮಗುವನ್ನು ತಾಯಿ ಅಮೀನಾ ಅವರ ಬಳಿಗೆ ಕರೆತಂದರು. ಒಂದೆರಡು ವರ್ಷಗಳಲ್ಲಿ ಅವರ ತಾಯಿಯೂ ತೀರಿಕೊಂಡರು. ಅನಂತರ ತಬ್ಬಲಿ ಮೊಹಮ್ಮದರನ್ನು ಅಜ್ಜ ಅಬ್ದುಲ್ ಮುತ್ತಲಿಬ್ ಸಾಕಿದರು. ಮೊಹಮ್ಮದರು ಎಂಟು ವರ್ಷ ವಯಸ್ಸಿನವರಾಗುವ ವೇಳೆಗೆ ಅಜ್ಜ ಸಹ ತೀರಿಕೊಂಡರು. ಅನಂತರ ಇವರು ಅಬ್ದುಲ್ ಮುತ್ತಲಿಬ್ ಅವರ ಮಗ ಹಾಗೂ ಮೊಹಮ್ಮದನ ಚಿಕ್ಕಪ್ಪನವರಾದ ಅಬೂತಾಲಿಬ್‌ರ ಬಳಿಯಲ್ಲಿ ಬೆಳೆದರು.

ಅಬೂತಾಲಿಬ್ ಅವರದ್ದು ಬಡಸಂಸಾರವಾಗಿದ್ದುದರಿಂದ ಮೊಹಮ್ಮದರು ತಮ್ಮ ಚಿಕ್ಕಪ್ಪನವರಿಗೆ ಕುರಿಕಾಯುವುದರಲ್ಲಿಯೂ ವ್ಯಾಪಾರದಲ್ಲಿಯೂ ನೆರವಾಗುತ್ತಿದ್ದರು. ತಮ್ಮ ಇಪ್ಪತ್ತೈದನೆಯ ವಯಸ್ಸಿನಲ್ಲಿ ನಲವತ್ತು ವರ್ಷ ವಯಸ್ಸಿನ ಖಲೀಜಾ ಎಂಬ ಖುರೈಷ್ ವಂಶದ ಧನಿಕ ವಿಧವೆಯೊಬ್ಬಳನ್ನು ಮದುವೆಯಾಗಿದ್ದರು. ಇವಳು ತನ್ನ ಅರವತ್ತೈದನೆಯ ವಯಸ್ಸಿನಲ್ಲಿ ತೀರಿಕೊಂಡಳು. ಈ ದಂಪತಿಗಳಿಗೆ ಅನೇಕ ಗಂಡು ಮತ್ತು ಹೆಣ್ಣು ಮಕ್ಕಳು

ಹುಟ್ಟಿದರು. ಗಂಡುಮಕ್ಕಳೆಲ್ಲ ಚಿಕ್ಕಂದಿನಲ್ಲೇ ತೀರಿಕೊಂಡರು. ಹೆಣ್ಣುಮಕ್ಕಳು ಬೆಳೆದು ಮದುವೆಯಾಗಿ ಮಕ್ಕಳನ್ನು ಪಡೆದರು. ಕಿರಿಯ ಮಗಳಾದ ಫಾತಿಮಾ ಮೊಹಮ್ಮದರ ನೆಚ್ಚಿನ ಮಗಳು. ಮೊಹಮ್ಮದರು ದೈವಾಧೀನರಾಗುವ ಹೊತ್ತಿಗೆ ಇವರ ಮಕ್ಕಳಲ್ಲಿ ಬದುಕಿದ್ದವರಲ್ಲಿ ಇವಳೊಬ್ಬಳೇ. ಇವಳು ಅಬುತಾಲಿಬ್‌ರ ಮಗ ಅಲಿಯವರನ್ನು ಮದುವೆಯಾಗಿ ಹಸನ್ ಮತ್ತು ಹುಸೇನ್ ಎಂಬ ಮಕ್ಕಳನ್ನು ಪಡೆದಳು. ಈ ಮಕ್ಕಳ ಸಂತತಿಯನ್ನೇ ಈಗ ಸೈಯದ್ದರೆಂದು ಕರೆಯುತ್ತಾರೆ. ಖಲೇಜಾ ಅವರು ತೀರಿಕೊಂಡಮೇಲೆ ಮೊಹಮ್ಮದರು ಇನ್ನೂ ಕೆಲವು ಮದುವೆಯಾದರು. ಇವರಲ್ಲಿ ಆಯೆಷ ಪ್ರಸಿದ್ಧಳು. ಇವರೆಲ್ಲರೂ ಮೊಹಮ್ಮದರ ಧರ್ಮವನ್ನು ಹರಡುವುದರಲ್ಲಿ ಸಹಾಯಕರಾದರು.

ಇಡೀ ವಿಶ್ವದ ಜನರಿಗೆ ಸಂಪೂರ್ಣ ಹಾಗು ಸರ್ವಕಾಲೀನ ಆದರ್ಶ ವ್ಯಕ್ತಿಯಾಗಿ ಪರಿವರ್ತಿಸುವ ಘಟನೆ ಮೊಹಮ್ಮದರ ಜೀವನದಲ್ಲಿ ನಡೆದದ್ದು ಇವರ ನಲವತ್ತರ ವಯಸ್ಸಿನಲ್ಲಿ. ಜಿಬ್ರಾಯಿಲ್ ಎಂಬ ದೇವದೂತನ ಮೂಲಕ ದೇವರ ಸಂದೇಶ ಇವರಿಗೆ ತಲುಪಿದ್ದು ಆಗಲೇ. ಮೊಹಮ್ಮದರ ಬದುಕಿನ ಮುಂದಿನ ೨೩ ವರ್ಷಗಳಲ್ಲಿ ಹಂತ ಹಂತವಾಗಿ ದೊರೆತ ಆ ದಿವ್ಯ ಸತ್ಯಸಂದೇಶಗಳ ಸಮುಚ್ಚಯವೇ ಪವಿತ್ರ ಖುರಾನ್. ಮೊಹಮ್ಮದರು ಈ ಸಂದೇಶದ ಆಧಾರದಲ್ಲೇ ವಿಶ್ವಕ್ಕೆ ಸದಾ ಮಾದರಿಯಾಗಬಲ್ಲ ಒಂದು ಆದರ್ಶ ವ್ಯಕ್ತಿತ್ವವನ್ನು, ಆದರ್ಶ ಸಮಾಜವನ್ನು ರಚಿಸಿ ತೋರಿಸಿದರು. ಹೀಗೆ ಇವರ ಸಂದೇಶ ಮೂಢನಂಬಿಕೆಗಳ ಮತ್ತು ಶೋಷಣೆಗಳ ವಿರುದ್ಧ, ಗುಲಾಮಗಿರಿ, ವರ್ಣಭೇದ, ನರಬಲಿ, ಶಿಶುಹತ್ಯೆ, ಸ್ತ್ರೀಶೋಷಣೆ, ಮದ್ಯಪಾನ, ಜೂಜು, ಕೊಲೆಸುಲಿಗೆ ಮುಂತಾದುವುಗಳ ವಿರುದ್ಧ ಸಮರ ಸಾರುತ್ತಿತ್ತು. ಇವರು ಮತ್ತು ಇವರ ಅನುಯಾಯಿಗಳು ಇಂತಹ ಸಂದರ್ಭದಲ್ಲಿ ಮಾನಸಿಕ ಮತ್ತು ಶಾರೀರಿಕ ಹಿಂಸೆಗೆ ಒಳಪಡುತ್ತಿದ್ದರು.

"ಸರ್ವಶಕ್ತನಾದ ದೇವನು ಒಬ್ಬನೇ. ಅವನು ದಯಾಮಯಿ, ಪ್ರೇಮಸ್ವರೂಪಿ. ಅವನೇ ಸೃಷ್ಟಿಕರ್ತ. ಸರ್ವಶಕ್ತ, ಸರ್ವವ್ಯಾಪಿ, ಅವನನ್ನು ಚಿಂತಿಸಲು ಮನುಷ್ಯಪ್ರಾರ್ಥನೆ ಮಾಡಬೇಕು. ನಿರ್ಮಲ ಚಿತ್ತನಾಗಿ, ಭಕ್ತಿಯಿಂದ ಅವನನ್ನು ದಿನಕ್ಕೈದು ಬಾರಿ ಪ್ರಾರ್ಥಿಸಬೇಕು. ಮನುಷ್ಯನು ದೇವರ ದಾಸ. ಭೂಮಿ, ಸೂರ್ಯ, ಚಂದ್ರ, ವಾಯು, ನೀರು ಎಲ್ಲವೂ ದೇವರ ಸೃಷ್ಟಿ ಹಾಗೂ ಸೊತ್ತು. ಒಳ್ಳೆಯ ಗುಣಗಳನ್ನು ಮನುಷ್ಯನು ಹೊಂದಬೇಕು. ಪ್ರತಿಯೊಬ್ಬರೂ ಅವರವರ ಮನಸ್ಸನ್ನು, ಹೃದಯವನ್ನು ಪರೀಕ್ಷಿಸಿಕೊಳ್ಳಬೇಕು. ದೇವರು ಸೃಷ್ಟಿಸಿದ ಎಲ್ಲಾ ಪ್ರಾಣಿಗಳನ್ನು ಪ್ರೀತಿಸಬೇಕು. ಪರಮತವನ್ನು ಸಹಿಸಬೇಕು. ಅದರ ಮತಸ್ಥಾಪಕರನ್ನು ಗೌರವದಿಂದ ಕಾಣಬೇಕು. ಮತವಿಚಾರದಲ್ಲಿ ಯಾರೂ ಯಾರನ್ನೂ ಬಲಾತ್ಕರಿಸಬಾರದು. ಜೊತೆಯವರಲ್ಲಿ ಪ್ರೀತಿವಿನಯಗಳಿಂದ ವರ್ತಿಸಬೇಕು. ಎಲ್ಲರೂ ಸಮಾನರು ಮತ್ತು ಸಹೋದರರು. ಸುಳ್ಳು, ಮೋಸ, ಮದ್ಯಪಾನ, ಜೂಜು ಇವೆಲ್ಲವನ್ನು ಎಲ್ಲರೂ ತ್ಯಜಿಸಬೇಕು. ತಂದೆತಾಯಿಗಳನ್ನು ಗುರುಹಿರಿಯರನ್ನು ಭಕ್ತಿಯಿಂದ ಕಾಣಬೇಕು. ವಿದ್ಯಾವಂತರು ದೇವರ ಪ್ರತಿನಿಧಿಗಳಿದ್ದ ಹಾಗೆ...." ಇದು ಖುರಾನಿನ ಮೂಲಕ

ಮೊಹಮ್ಮದರು ಬೀರಿದ ಇಸ್ಲಾಂ ಸಂದೇಶದ ಸಾರ.

ದೀನದಲಿತರ ಬಗ್ಗೆ ಅನುಕಂಪ ಇವರಲ್ಲಿತ್ತು. ಪಕ್ಷಿ, ಪ್ರಾಣಿ, ಗಿಡಮರಬಳ್ಳಿಗಳ ಬಗೆಗೆ ಇವರಲ್ಲಿ ಕರುಣೆ ಇತ್ತು. ಹೊರೆ ಹೊರುವ ಪ್ರಾಣಿಗಳನ್ನು ಮಿತಿಮೀರಿ ದುಡಿಸಬಾರದೆಂದು, ಅನಗತ್ಯವಾಗಿ ಮರ ಗಿಡಬಳ್ಳಿಗಳನ್ನು ಕಡಿಯಬಾರದೆಂದು ಹೇಳಿದ್ದಾರೆ. ಹೀಗೆ ಇವರು ಎಲ್ಲಾ ಕ್ಷೇತ್ರಗಳಲ್ಲಿ ಕಾಲಾತೀತ ಮತ್ತು ಪ್ರದೇಶಾತೀತವಾದ ಪ್ರಾಯೋಗಿಕ ಆದರ್ಶಗಳನ್ನು ನಮಗೆ ಬಿಟ್ಟುಹೋಗಿದ್ದಾರೆ. ಇಂತಹ ಮಹಾತ್ಮರ ಬದುಕೇ ಅಮೃತವಾಣಿ, ಬದುಕೇ ನಮ್ಮ ಬದುಕಿಗೆ ದಾರಿದೀಪ. ಇಂತಹ ಮಹಾತ್ಮರ ಆದರ್ಶ ಜೀವನವನ್ನು ಸದಾ ನೆನೆಯುವುದು, ಅದರಂತೆ ನಡೆಯುವುದು ನಮ್ಮೆಲ್ಲರ ಕರ್ತವ್ಯವೂ ಹೌದು.

ಹೀಗೆ ಮುಸ್ಲಿಮರು ಪ್ರತಿವರ್ಷವೂ ಇವರ ಸಾರ್ಥಕ ಜೀವನವನ್ನು ಇವರ ಜನ್ಮದಿನೋತ್ಸವದಂದು ವಿಶೇಷವಾಗಿ ನೆನೆಯುತ್ತಾರೆ. ಇದನ್ನೇ ಈದ್‌ಮೀಲಾದ್ ಎಂದು ಕರೆಯುತ್ತಾರೆ. ಈದ್‌ಮೀಲಾದ್ ಅಥವ ಈದ್-ಎ-ಮೀಲಾದ್ ಅಂದರೆ ಜನ್ಮದಿನೋತ್ಸವ ಅರ್ಥಾತ್ ಮೊಹಮ್ಮದ್ ಪೈಗಂಬರ್ ಅವರ ಜನ್ಮದಿನೋತ್ಸವ. ಹಿಜರಿ ಸಂವತ್ಸರದ ರಬೀ-ಉಲ್-ಅವ್ವಲ್ ಅಥವಾ ರಬೀ-ಉಲ್-ಊಲಾ ಎಂಬ ಮೂರನೆಯ ತಿಂಗಳ ಹನ್ನೆರಡನೆಯ ತಾರೀಖಿನಂದು ಇದನ್ನು ಆಚರಿಸುತ್ತಾರೆ. ಆ ದಿವಸ ಮೊಹಮ್ಮದ್ ಪೈಗಂಬರ್‌ರು ಹುಟ್ಟಿದರೆಂದು ಪ್ರತೀತಿ ಇದೆ. ಈ ಹಬ್ಬವನ್ನು ಮೀಲಾದ್, ಮೀಲಾದುನ್ನಬಿ ಮತ್ತು ಮೌಲೂದ್ ಶರೀಫ್ ಎಂದೂ ಕರೆಯುತ್ತಾರೆ.

ಮೌಲೂದ್ ಅರಬ್ಬೀ ಭಾಷೆಯ ಶಬ್ದ. ಇದರ ಅರ್ಥ ನವಜಾತ ಶಿಶು, ಬಾಲಕ ಮತ್ತು ಜನ್ಮಕಾಲ, ಶರೀಫ್ ಅಂದರೆ ಶುಭ, ಪವಿತ್ರ, ಸಜ್ಜನ ಎಂದು. ಮೌಲೂದ್ ಶರೀಫ್ ಎಂದರೆ ಶುಭ ಜನ್ಮ ತಿಥಿ. ಹಿಂದೂಗಳ ಕೃಷ್ಣಾಜನ್ಮಾಷ್ಟಮಿ, ರಾಮನವಮಿಯಂತೆ ಮೌಲೂದ್ ಶರೀಫ್ ಅನ್ನು ಮೊಹಮ್ಮದ್ ದ್ವಾದಶಿ ಹಬ್ಬ ಎಂದು ಕರೆಯಬಹುದು.

ಈ ಜನ್ಮದಿನೋತ್ಸವ ಪದ್ಧತಿ ಮೊಹಮ್ಮದರು ದೈವಾಧೀನರಾದ ಸುಮಾರು ಐದು ನೂರು ವರ್ಷಗಳ ಅನಂತರ ಪ್ರಾರಂಭವಾಗಿರಬೇಕು. ಕ್ರಿ. ಶ. ೧೨ ನೆಯ ಶತಮಾನದ ಕೊನೆಯ ಭಾಗದಲ್ಲಿ ಇರಾಕ್ ದೇಶದ ಮುಸಲ್‌ನಗರವಾಸಿಯೊಬ್ಬನು ಈ ಪದ್ಧತಿಯನ್ನು ಆರಂಭಿಸಿದರೆನ್ನಲಾಗಿದೆ. ಅನಂತರ ಇರಾಕಿನ ಅರಬಲ್‌ನಗರದ ಬಾದಷಹ ಅಬುಸಯಿದ್ ಮುಜಫ್ಫರ್ ಕ್ರಿ.ಶ. ೧೨೦೭ ರಲ್ಲಿ ಈ ಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಿಸಿದನಂತೆ. ತದನಂತರ ಈ ಪದ್ಧತಿ ಪ್ರತಿವರ್ಷವೂ ನಡೆಯುತ್ತಾ ಬಂದಿತೆನ್ನಲಾಗಿದೆ. ತುರ್ಕಿ, ಈಜಿಪ್ಟ್, ಭಾರತ ಮುಂತಾದ ದೇಶಗಳಲ್ಲೂ ಇರಾನಿನ ಕೆಲಭಾಗಗಳಲ್ಲೂ ಈ ಹಬ್ಬವನ್ನು ಆಚರಿಸುತ್ತಾರೆ. ಜಗತ್ತಿನಲ್ಲಿ ಶಿಯಾ ಪಂಗಡದ ಜನರಿಗಿಂತ ಸುನ್ನಿ ಪಂಗಡದ ಮುಸಲ್ಮಾನರ ಸಂಖ್ಯೆ ಹೆಚ್ಚು. ಈ ಹಬ್ಬವನ್ನು ಸುನ್ನಿ ಪಂಗಡದ ಜನರು ಬಹಳ ಶ್ರದ್ಧೆ ಮತ್ತು ಉತ್ಸಾಹಗಳಿಂದ ಆಚರಿಸುತ್ತಾರೆ. ವಹ್ಹಾಬಿ ಪಂಥಕ್ಕೆ ಸೇರಿದ ಮುಸ್ಲಿಮರು ಮತ್ತು ಶಿಯಾ ಪಂಗಡಕ್ಕೆ ಸೇರಿದ ಮುಸ್ಲಿಮರು ಈ ಹಬ್ಬವನ್ನು ಅಷ್ಟಾಗಿ ಆಚರಿಸುವುದಿಲ್ಲ.

ಹಿಂದಿನ ಕಾಲದ ಕೆಲವು ಅರಸರು ಈ ಹಬ್ಬದ ಆಚರಣೆಯನ್ನು ವಿರೋಧಿಸಿರುವುದೂ ಉಂಟು. ಇದರಲ್ಲಿ ವ್ಯಕ್ತಿಪೂಜೆ ಇರುವುದರಿಂದ ಇಸ್ಲಾಂ ಧರ್ಮಕ್ಕೆ ಇದು ವಿರುದ್ಧವಾದುದೆಂದು ಅವರು ಅಭಿಪ್ರಾಯ ಪಡುವುದೇ ಇದಕ್ಕೆ ಮುಖ್ಯ ಕಾರಣ.

ಭಾರತ ದೇಶದಲ್ಲಿ ಮೌಲೂದ್ ಉತ್ಸವವನ್ನು ವಿಶೇಷವಾಗಿ ಎಲ್ಲಾ ಕಡೆಗಳಲ್ಲೂ ಆಚರಿಸುತ್ತಾರೆ. ಹಿಂದೂಗಳ ಕೃಷ್ಣಜನ್ಮಾಷ್ಟಮಿ, ರಾಮನವಮಿ ಮೊದಲಾದ ಉತ್ಸವಗಳನ್ನು ನೋಡಿ ಅವುಗಳ ಪ್ರಭಾವದಿಂದ ಮುಸ್ಲಿಮರಲ್ಲಿ ಈ ಉತ್ಸವವನ್ನು ಆಚರಿಸಲು ಹೆಚ್ಚು ಆಸಕ್ತಿ ಉಂಟಾಗಿರಬೇಕು.

ಈ ಹಬ್ಬದ ದಿವಸ ಮುಸ್ಲಿಮರು ಮಸೀದಿಗಳಂತಹ ನಿರ್ಮಲವೂ ಪವಿತ್ರವೂ ಆದ ಸ್ಥಳಗಳಲ್ಲಿ ಹೆಚ್ಚು ಹೆಚ್ಚಾಗಿ ಸೇರುತ್ತಾರೆ. ಅವರಲ್ಲಿನ ವಿದ್ವಾಂಸರು ಮೊಹಮ್ಮದರ ಜೀವನ ಚರಿತ್ರೆ, ಇಸ್ಲಾಂ ಧರ್ಮಕ್ಕೂ, ತನ್ಮೂಲಕ ಜಗತ್ತಿಗೂ ಅವರು ಕೊಟ್ಟ ಕೊಡುಗೆ–ಈ ವಿಚಾರವಾಗಿ ಅಲ್ಲಿ ನೆರೆದ ಜನರಿಗೆ ತಿಳಿವಳಿಕೆ ಕೊಡುತ್ತಾರೆ. ಅವರನ್ನು ಕುರಿತು ಲೇಖನಗಳನ್ನು ಓದುತ್ತಾರೆ; ಕವನಗಳನ್ನು ರಚಿಸಿ ಹಾಡುತ್ತಾರೆ; ಅವರ ಗುಣಗಾನವನ್ನು ಮಾಡುತ್ತಾರೆ. ಅವರು ಹೇಗೆ ನಮಗೆ ದಾರಿದೀಪವಾದರು ಎಂದು ಹೇಳುತ್ತಾರೆ. ಅವರ ಆದರ್ಶ ಜೀವನ ಹಾಗೂ ಸಂದೇಶಗಳಂತೆ ಪ್ರತಿಯೊಬ್ಬರೂ ತಮ್ಮ ಜಿವನದ ಉದ್ದಕ್ಕೂ ಅನುಸರಿಸಬೇಕಾದ ವಿಧಾನಗಳ ಬಗೆಗೆ ತಿಳಿವಳಿಕೆ ಕೊಡುತ್ತಾರೆ. ಕೊನೆಯಲ್ಲಿ ಪ್ರಸಾದದ (ಸಿಹಿ) ವಿನಿಯೋಗವೂ ನಡೆಯುತ್ತದೆ. ಹಿಂದೂಗಳು ಸತ್ಯನಾರಾಯಣ ವ್ರತದ ಪ್ರಸಾದವನ್ನು ಸ್ವೀಕರಿಸುವಂತೆ ಮುಸ್ಲಿಮರು ಬಹಳ ಆದರ ಮತ್ತು ಭಕ್ತಿಯಿಂದ ಮೌಲೂದಿನ ಪ್ರಸಾದವನ್ನು ಪಡೆಯುತ್ತಾರೆ. ಸತ್ಯನಾರಾಯಣ ಕಥೆ ಮತ್ತು ಅದರಲ್ಲಿನ ಪ್ರಸಾದ ವಿನಿಯೋಗ, ಮೊಹಮ್ಮದರ ಜನ್ಮಕಥೆ ಮತ್ತು ಅದರಲ್ಲಿನ ಪ್ರಸಾದ ವಿನಿಯೋಗಗಳ ನಡುವೆ ಹೋಲಿಕೆಗಳು ಇವೆ. ಜನರು ಯಾವುದೇ ಧರ್ಮಕ್ಕೆ ಸೇರಿದವರಾಗಿದ್ದರೂ ಅವರ ಭಕ್ತಿ, ಶ್ರದ್ಧೆ ಮತ್ತು ಆಸಕ್ತಿಗಳು ಬಹುಮಟ್ಟಿಗೆ ಒಂದೇ ಆಗಿರುತ್ತವೆ ಎಂಬುವುದಕ್ಕೆ ಇದೊಂದು ಉತ್ತಮ ನಿದರ್ಶನ.

ಎಲ್ಲರೂ ಅಣ್ಣತಮ್ಮಂದಿರು. ಯಾರು ಯಾರನ್ನೂ ದ್ವೇಷಿಸಬಾರದು. ಹಸಿದವರಿಗೆ ಅನ್ನ ಕೊಡಬೇಕು. ರೋಗಿಗಳಿಗೆ ಆರೈಕೆ ಮಾಡಬೇಕು. ಎಲ್ಲ ವಸ್ತುಗಳೂ ದೇವರಿಂದ ಆದದ್ದು. ಆದ್ದರಿಂದ ಎಲ್ಲ ವಸ್ತುಗಳನ್ನೂ ಪ್ರೀತಿಸಬೇಕು.

—ಮೊಹಮ್ಮದ್ ಪೈಗಂಬರ್

ಶುಭ್ರ ಬದುಕಿನ ಕರ್ಮಯೋಗಿ ಉ.ಕಾ.ಸು

ರಂಗಧಾಮಯ್ಯ
ಕಾರ್ಯದರ್ಶಿ
ಕನ್ನಡ ಸಹೃದಯ ಬಳಗ
ಸಿ.ಎಫ್.ಟಿ.ಆರ್.ಐ., ಮೈಸೂರು-೧೩

ಉಡುಪಿಯ ಕಾಳಯ್ಯಾಚಾರ್ ಸುಬ್ಬರಾಯಾಚಾರ್ (ಉಕಾಸು) ಅವರ ಹೆಸರು, ತ್ಯಾಗಮಯ ಬದುಕಿನ ಜಗತ್ತಿನಲ್ಲಿ ವಿಶಿಷ್ಟವಾಗಿ ನಿಲ್ಲುತ್ತದೆ. ಅಪೂರ್ವ ವ್ಯಕ್ತಿತ್ವದ ಉಕಾಸು ಅವರಲ್ಲಿ ಸರಳತೆ, ಶಿಸ್ತು, ಸಂಯಮ ಮತ್ತು ವಿದ್ವತ್ತುಗಳು ಮೈಗೂಡಿ ನಿಂತಿದ್ದುವು. ಪರೋಪಕಾರವನ್ನೇ ಉಸಿರನ್ನಾಗಿಸಿಕೊಂಡ ಅವರು ತನ್ನ ಸ್ವಂತ ಸುಖ ದುಃಖಗಳನ್ನು ಲೆಕ್ಕಿಸಿದವರಲ್ಲ. ಪರಿಶುದ್ಧ ಜೀವನವನ್ನು ನಡೆಸಿದ, ಅವರ ಸ್ವಾರ್ಥರಹಿತ ಶುಭ್ರ ಜೀವನದಲ್ಲಿ ಕಪ್ಪು ಚುಕ್ಕೆಯನ್ನರಸುವುದು ಸಾಧ್ಯವಿಲ್ಲ. ಶ್ರೀ ಅರವಿಂದರ ವಾಣಿಯಂತೆ, ತಮ್ಮ ಜೀವನವನ್ನೇ ಒಂದು ಯೋಗ ಎಂದು ತಪಗೈದವರು. ಅವರು ಮೈಸೂರು ವಿಶ್ವ-ವಿದ್ಯಾನಿಲಯದಲ್ಲಿ ವಿವಿಧ ಜವಾಬ್ದಾರಿಯುತ ಸ್ಥಾನಗಳನ್ನು ಅಲಂಕರಿಸಿ, ಆ ಪದವಿಗಳಿಗೆ ಗೌರವವನ್ನು ತಂದುಕೊಟ್ಟರು. ಅವರ ಪ್ರಾಮಾಣಿಕ ಪಾರದರ್ಶಕ ಬದುಕು-ಅಂದು ಇಂದು ಮುಂದು ಆದರ್ಶವಾಗಿ ಉಳಿಯುತ್ತದೆ.

ಉಕಾಸು ಅವರು ನಿಗರ್ವಿ. ಸರಳತೆ, ನಮ್ರತೆಗಳ ಸಾಕಾರ ಮೂರ್ತಿ. ರಾಮಕೃಷ್ಣಪರಮಹಂಸ, ಶಾರದಾದೇವಿ, ಸ್ವಾಮಿವಿವೇಕಾನಂದ, ಅರವಿಂದ ಮತ್ತು ಕುವೆಂಪುರಂಥ ಮಹಾವ್ಯಕ್ತಿಗಳಿಂದ ಪ್ರಭಾವಿತರಾದವರು. "ಈ ಜಗತ್ತಿನಲ್ಲಿ ಮನುಷ್ಯನಾಗಿ ಹುಟ್ಟಿದ ಮೇಲೆ ಶಾಶ್ವತವಾದ ಸಾತ್ವಿಕ ಕಾರ್ಯವನ್ನು ಮಾಡಿ, ಭಗವಂತನ ಪ್ರೀತಿಗೆ ಪಾತ್ರರಾಗಿ. ಅದೇ ನಿಜವಾದ ಜೀವನ" ಎಂಬ ಸ್ವಾಮಿ ವಿವೇಕಾನಂದರ ವಾಣಿಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಎಲ್ಲರೂ ಮೆಚ್ಚುವಂತೆ ಆದರ್ಶಜೀವನವನ್ನು ನಡೆಸಿದವರು.

ಉಕಾಸು ಅವರ ಹಿರಿಯರು ಉಡುಪಿಯಲ್ಲಿ ನೆಲೆಸಿದ್ದರು. ಅವರು ಚಿನಿವಾರ ಕಲೆಯಲ್ಲಿ ನಿಷ್ಣಾತರಾಗಿದ್ದರು. ಜೀವನ ನಿರ್ವಹಣೆಗಾಗಿ ಒಂದು ಪುಟ್ಟ ಚಿನ್ನದಂಗಡಿಯನ್ನಿಟ್ಟುಕೊಂಡಿದ್ದರು. ಅವರು ವೇದಾಧ್ಯಯನವೇ ಮುಂತಾದ ವೈದಿಕಾಚರಣೆಗಳನ್ನು ನಿಷ್ಠೆಯಿಂದ ಪಾಲಿಸುತ್ತಿದ್ದರು. ಈ ವಂಶದ ಉಡುಪಿಯ ಕಾಳಯ್ಯಾಚಾರ್ ಉಡುಪಿಯನ್ನು ಬಿಟ್ಟು, ಶೃಂಗೇರಿಯಲ್ಲಿ ನೆಲೆಸಿದರು. ಶೃಂಗೇರಿ, ಇವರ ಧರ್ಮಪತ್ನಿ ಚೆಲುವಮ್ಮ ಅವರ ತವರೂರು. ಈ ಸದ್ಗೃಹಸ್ಥ ದಂಪತಿ

ಗಳ ನಾಲ್ಕು ಮಕ್ಕಳಲ್ಲಿ, ಮೊದಲನೆಯವರಾಗಿ ಉಕಾಸು ಅವರು ೧೬-೧೦-೧೯೧೯ ರಂದು ಶೃಂಗೇರಿಯಲ್ಲಿ ಜನಿಸಿದರು.

ಶೃಂಗೇರಿಯಲ್ಲಿ, ಉಕಾಸು ಅವರ ಪ್ರಾಥಮಿಕ ವಿದ್ಯಾಭ್ಯಾಸ ನಡೆಯಿತು. ತೀರ್ಥಹಳ್ಳಿಯ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಅವರಿಗೆ ನರಸಿಂಹ ಶಾಸ್ತ್ರಿಗಳಂಥ ಸಮರ್ಥ ಗುರುಗಳು ಲಭಿಸಿದರು; ಅವರು ಶಿಷ್ಯರ ಸುಪ್ತ ಪ್ರತಿಭೆಯನ್ನು ಗುರುತಿಸಿ ಪೋಷಿಸಿ ಮಾರ್ಗದರ್ಶನ ನೀಡುತ್ತಿದ್ದರು. ಅವರೇ ಕಮಕೋಡು ನರಸಿಂಹ ಶಾಸ್ತ್ರಿಗಳು ಬಹುದೊಡ್ಡ ಕನ್ನಡ ಪಂಡಿತರಾಗಿದ್ದರು. ಅವರು ಕುವೆಂಪು ಮತ್ತು ಗಾಂಧೀಜಿಯವರ ಬಗ್ಗೆ ಅಪಾರ ಗೌರವವನ್ನು ಇಟ್ಟುಕೊಂಡಿದ್ದರು. ಇಂಥ ಗುರುಗಳ ಸಾನಿಧ್ಯದಲ್ಲಿ ಕಲಿತ ಉಕಾಸು ಅವರು, ಕುವೆಂಪು ಅವರ ಬಗ್ಗೆ ಗೌರವ ಭಾವನೆಯನ್ನು ಹೊಂದಿ, ಸಾಹಿತ್ಯಾಭಿರುಚಿಯನ್ನು ಬೆಳಸಿಕೊಂಡರು. ತಮ್ಮ ಬದುಕಿನಲ್ಲಿ ಸರಳತೆ, ಶಿಸ್ತು, ಸಂಯಮಗಳನ್ನು ಅಳವಡಿಸಿಕೊಂಡರು.

ಉಕಾಸು ತಮ್ಮ ೧೬ನೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡರು. ಅದಾದ ಎರಡೇ ವರ್ಷದಲ್ಲಿ ತಾಯಿ ಚೆಲುವಮ್ಮ ತೀರಿಕೊಂಡರು. ಈ ಪರಿಸ್ಥಿತಿಯಲ್ಲಿ ಅವರು ತಮ್ಮ ಓದನ್ನು ಅರ್ಧಕ್ಕೇ ನಿಲ್ಲಿಸಬೇಕಾಯಿತು. ಕುಟುಂಬ ನಿರ್ವಹಣೆಯ ಜವಾಬ್ದಾರಿ ಅನಿವಾರ್ಯವಾಯಿತು. ಅವರು ಹುಲುಗಾವಲು, ನರಸಿಂಹರಾಜಪುರ ಮತ್ತು ಮೊಳಕಾಲ್ಮೂರುಗಳಲ್ಲಿ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಕರಾಗಿ ದುಡಿದರು. ತಾತ್ಕಾಲಿಕವಾಗಿ, ಉನ್ನತ ವ್ಯಾಸಂಗದ ತಮ್ಮ ಬಯಕೆಯನ್ನು ತಡೆಹಿಡಿದರು.

ಸಾಂಸ್ಕೃತಿಕ ನಾಡಿನಲ್ಲಿ :

ಉಕಾಸು ಬಾಲ್ಯದಲ್ಲಿಯೇ ಹಿರಿದಾದ ಜವಾಬ್ದಾರಿಯನ್ನು ಹೊರಬೇಕಾಯಿತು. ಆ ಸಮಯದಲ್ಲಿ ಅವರನ್ನು ಆರ್ಥಿಕ ಅಡಚಣೆ ಬಹಳವಾಗಿ ಕಾಡಿತು. ಬಡತನ ಹಿರಿದಾಗಿತ್ತು. ಆದರೂ ಅವರು, ತಮ್ಮ ಕರ್ತವ್ಯ ಪ್ರಜ್ಞೆಯನ್ನು ಮರೆಯಲಿಲ್ಲ. ತಂದೆ-ತಾಯಿಗಳ ಮಮತೆಯಿಂದ ವಂಚಿತರಾಗಿದ್ದ ತನ್ನ ಇಬ್ಬರು ಸೋದರಿಯರು ಮತ್ತು ಮತ್ತೊಬ್ಬ ಸೋದರನನ್ನೂ ತಂದೆ ಸ್ಥಾನದಲ್ಲಿ ನಿಂತು ಸಲಹಿದರು. ಕೆಲಕಾಲ, ತಮ್ಮ ಉನ್ನತ ವ್ಯಾಸಂಗದ ಬಯಕೆಯನ್ನು ಹತ್ತಿಕ್ಕಿದ್ದರು. ಆಗ ಅವರ ಗುರುಗಳಾದ ಕೆ. ನರಸಿಂಹಶಾಸ್ತ್ರಿಗಳು ಬೆಂಬಲವಾಗಿ ನಿಂತರು. ಮೈಸೂರಿನ ಒಂಟಿಕೊಪ್ಪಲಿನ ಮಾಧ್ಯಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಸೇರಿ, ಅವಕಾಶವಾದರೆ ಉನ್ನತ ವಿದ್ಯಾಭ್ಯಾಸವನ್ನು ಕೈಗೊಳ್ಳಬೇಕೆಂದು ಹರಸಿ, ಅವರನ್ನು ಮೈಸೂರಿಗೆ ಕಳುಹಿಸಿಕೊಟ್ಟರು. ಉಕಾಸು ಮೈಸೂರಿನ ಒಂಟಿಕೊಪ್ಪಲಿನಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಕ ವೃತ್ತಿಯನ್ನು ಹಿಡಿದರು. ಗುರುಗಳ ಹರಕೆ ಫಲಿಸಿತು. ಉಕಾಸು ಅವರ ಬದುಕು ವಿಕಸನಗಾಮಿಯಾಗುತ್ತಾ ಸರಸ್ವತಿಯ ನೆಲೆವೀಡಾದ ಮೈಸೂರಿನಲ್ಲಿ ಸಾರ್ಥಕ್ಯವನ್ನು ಪಡೆಯಿತು.

ಉಕಾಸು ಉನ್ನತ ವ್ಯಾಸಂಗವನ್ನು ಮುಂದುವರಿಸಲು ನಿರ್ಧರಿಸಿದರು. ಅದಕ್ಕಾಗಿ, ತಮ್ಮ ಜೀವನೋಪಾಯದ ಶಿಕ್ಷಕ ವೃತ್ತಿಯನ್ನು ತ್ಯಜಿಸಿದರು. ಈ

ಸಮಯದಲ್ಲಿ, ಅವರು ಆರ್ಥಿಕವಾಗಿ ಬಳಲಿದರೂ ಓದುವ ಉತ್ಸಾಹ ಕುಗ್ಗಲಿಲ್ಲ. ಮನೆಪಾಠ ಹೇಳಿಕೊಡುತ್ತಾ ತಕ್ಕಮಟ್ಟಿಗೆ ತನ್ನ ಆರ್ಥಿಕ ಅಡಚಣೆಗಳನ್ನು ನಿವಾರಿಸಿಕೊಳ್ಳುತ್ತಿದ್ದರು. ಅದೇ ಸಮಯದಲ್ಲಿ ರಾಮಕೃಷ್ಣಾಶ್ರಮದ ಸಂಪರ್ಕವುಂಟಾಗಿ, ಉಕಾಸು ಅಲ್ಲಿ ಕೆಲವು ಕಾಲ ವಾಸ್ತವ್ಯ ಹೂಡಿದರು. ಅವರ ಓದುವ ಬಯಕೆಗೆ ಪ್ರೋತ್ಸಾಹ ಸಿಕ್ಕಿತು. ಶಿಸ್ತು, ಸಂಯಮ, ಕರುಣೆ, ಶುಭ್ರತೆ, ನಿಷ್ಠೆ ಮತ್ತು ಕಠಿಣ ಪರಿಶ್ರಮಗಳ ಸಾಕಾರಮೂರ್ತಿಯಾಗಿದ್ದ ಉಕಾಸು, ಆಶ್ರಮದ ಪರಿಸರದಿಂದ ಬಹಳವಾಗಿ ಪ್ರಭಾವಿತರಾದರು. ಅಲ್ಲಿಯ ನೀತಿ-ನಿಯಮಗಳನ್ನು ಪಾಲಿಸಿ, ಶಿಸ್ತುಬದ್ಧ ವಿದ್ಯಾರ್ಥಿ ಜೀವನ ನಡೆಸಿದರು.

೧೯೪೨ರಲ್ಲಿ ಗಾಂಧೀಜಿಯವರು 'ಭಾರತ ಬಿಟ್ಟು ತೊಲಗಿ' ಆಂದೋಲನಕ್ಕೆ ಕರೆ ಇತ್ತರು. ಇಡೀ ರಾಷ್ಟ್ರವೇ ದಾಸ್ಯವಿಮೋಚನೆಯ ತುಡಿತದಿಂದ ಚಳುವಳಿಯಲ್ಲಿ ಪಾಲ್ಗೊಂಡಿತು. ವಿದ್ಯಾರ್ಥಿ ಸಮುದಾಯ ಶಾಲಾ ಕಾಲೇಜುಗಳನ್ನು ತೊರೆದು, ಚಳುವಳಿಯಲ್ಲಿ ಪಾಲ್ಗೊಂಡಿತು. ಉಕಾಸು ಚಳುವಳಿಯಲ್ಲಿ ಸೇರಿದರು. ಕುಪಿತರಾದ ಪೋಲಿಸರು ಲಾಠಿ ಪ್ರಹಾರ ಮಾಡಿದರು. ಉಕಾಸು ತಲೆಗೆ ಬಲವಾದ ಪೆಟ್ಟು ಬಿತ್ತು. ಅವರು ಪ್ರಜ್ಞಾಶೂನ್ಯರಾಗಿ ಆಸ್ಪತ್ರೆ ಸೇರಿದರು. ಚಳುವಳಿ ನಿಂತಮೇಲೆ ಅವರು ತಮ್ಮ ವಿದ್ಯಾಭ್ಯಾಸದ ಕಡೆಗೆ ತೀವ್ರ ನಿಗಾ ವಹಿಸಿದರು. ಕನ್ನಡ ಬಿ.ಎ. ಆನರ್ಸ್ (೧೯೪೪) ಮತ್ತು ಎಂ.ಎ. ಪದವಿ (೧೯೫೦) ಪರೀಕ್ಷೆಗಳಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು. ಚಿನ್ನದ ಪದಕವನ್ನು ಪಡೆದರು. ಅದನ್ನು ತನ್ನ ಆರಾಧ್ಯತ್ರಯರಾದ ರಾಮಕೃಷ್ಣ ಪರಮಹಂಸ, ಶಾರದಾದೇವಿ ಮತ್ತು ಸ್ವಾಮಿ-ವಿವೇಕಾನಂದರ ಪದತಲಲ್ಲಿರಿಸಿ ಧನ್ಯತೆಯನ್ನು ಪಡೆದರು. ಹೀಗೆ ರಾಮಕೃಷ್ಣ ಆಶ್ರಮ ಉಕಾಸು ಅವರ ವಿದ್ಯಾದೇಗುಲವಾಗಿ, ಅವರ ಭವ್ಯ ಬಾಳಿನ ಉತ್ತಮ ಪಥವನ್ನು ದಿಗ್ದರ್ಶಿಸಿತು.

ಕರ್ಮಯೋಗಿ:

ಉನ್ನತ ವ್ಯಾಸಂಗದ ಆನಂತರ ಉಕಾಸು, ಮೈಸೂರಿನ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಅಂದರೆ ಇಂದಿನ ಯುವರಾಜ ಕಾಲೇಜಿನಲ್ಲಿ, ಕನ್ನಡ ಉಪನ್ಯಾಸಕರಾಗಿ ಸೇರಿದರು. ಅದುವರೆಗೂ ತನ್ನನ್ನು ಪೋಷಿಸಿ, ಸ್ವಾವಲಂಬಿಯನ್ನಾಗಿ ಮಾಡಿದ ರಾಮಕೃಷ್ಣಾಶ್ರಮದಿಂದ ಉಕಾಸು ಹೊರ ಬಂದು ಸ್ವತಂತ್ರ ಜೀವನವನ್ನು ಆರಂಭಿಸಿದರು. ಪ್ರತಿನಿತ್ಯದ ಧ್ಯಾನ ಅವರಿಗೆ ಸಹಜವಾಗಿತ್ತು. ತಮ್ಮ ಮನೆಯಲ್ಲಿ ಧ್ಯಾನಕ್ಕಾಗಿಯೇ ಪ್ರತ್ಯೇಕ ಕೊಠಡಿಯೊಂದನ್ನು ಮೀಸಲಿರಿಸಿದ್ದರು.

ಉಕಾಸು ಮಿತ ಮತ್ತು ಮೃದು ಭಾಷಿ. ಅವರು ಪಾಠ ಮಾಡುತ್ತಿದ್ದಾಗ, ಒಂದೊಂದು ಮಾತೂ ಅಂತರಂಗದಿಂದ ಮಥಿಸಿ ಹೊರಬರುತ್ತಿತ್ತು. ಬೋಧನೆಯನ್ನು ತಪವೆಂದು ತಿಳಿದಿದ್ದರು. ಅವರ ಸೌಜನ್ಯ, ಮಾತುಗಳ ಮಾರ್ದವತೆಯಿಂದ ಅಶಿಸ್ತಿನ ವಿದ್ಯಾರ್ಥಿಗಳೂ ಕೂಡ ವಿಧೇಯರಾಗಿಬಿಡುತ್ತಿದ್ದರು. ಅವರ ಮುಗ್ಧ ಮನಸ್ಸು, ನಡೆ-ನುಡಿ, ಸರಳ ಜೀವನ ಮತ್ತು ಶುಭ್ರ ಬಿಳಿಯುಡುಗೆಯನ್ನು

ಕಂಡು ಮೆಚ್ಚಿದ ಅವರ ಮಿತ್ರರು ಹಾಗೂ ಅಭಿಮಾನಿಗಳು ಅವರನ್ನು ಶುಭ್ರಾಯಾಚಾರ್ ಎಂದು ಹೆಮ್ಮೆಯಿಂದ ಕರೆಯುತ್ತಿದ್ದರು!

ಇದೇ ಸಂದರ್ಭದಲ್ಲಿ ಉಕಾಸು ಅವರ ಜೀವನದಲ್ಲಿ ಮರೆಯಲಾಗದ ಘಟನೆಯೊಂದು ನಡೆಯಿತು. ಅವರ ಕಿರಿಯ ಸೋದರಿ ಸುಶೀಲಮ್ಮನ ಗಂಡ ತೀರಿಕೊಂಡರು. ಆಕೆ ಮತ್ತು ಆಕೆಯ ಎರಡು ಹೆಣ್ಣು ಮಕ್ಕಳು ದಿಕ್ಕುಕಾಣದೆ ನಿಂತಾಗ ಅವರಿಗೆ ಉಕಾಸು ಆಶ್ರಯ ನೀಡಿದರು. ಅವರನ್ನು ಮೈಸೂರಿನ ಮನೆಗೆ ಕರೆದುಕೊಂಡು ಬಂದು, ಅವರ ಭವಿಷ್ಯಕ್ಕಾಗಿ ತಮ್ಮ ಸುಖವನ್ನು ತ್ಯಾಗ ಮಾಡಿದರು. ತಂದೆಯನ್ನು ಕಳೆದುಕೊಂಡಿದ್ದ ಆ ಮಕ್ಕಳಿಗೆ, ಪಿತೃ ಸ್ಥಾನದಲ್ಲಿ ನಿಂತು, ಉತ್ತಮ ಶಿಕ್ಷಣವನ್ನು ಕೊಡಿಸಿದರು. ಅವರಿಗೊಂದು ಜೀವನ ಮಾರ್ಗವನ್ನು ಕಲ್ಪಿಸಿದರು. ತಂಗಿಯ ಅನಾರೋಗ್ಯದ ಕಡೆಗೆ ಗಮನ ಹರಿಸಿ ಉತ್ತಮ ಚಿಕಿತ್ಸೆಯನ್ನು ಕೊಡಿಸಿದರು. ಆಕೆಯ ಶುಶ್ರೂಷೆಯನ್ನು ಮಮತೆಯಿಂದ ನಿರ್ವಹಿಸಿದರು. ತಾನು ಮದುವೆಯಾದರೆ ತನ್ನ ತಂಗಿ ಮತ್ತು ಆಕೆಯ ಮಕ್ಕಳ ಸುಖ ಸಂತೋಷಕ್ಕೆ ಅಡ್ಡಿಯಾಗಬಹುದೆಂದು ಭಾವಿಸಿದ ಅವರು, ಗೃಹಸ್ಥಾಶ್ರಮವನ್ನು ಸ್ವೀಕರಿಸಲೇ ಇಲ್ಲ!

ಉಕಾಸು ಅವರು ಯುವರಾಜ ಮತ್ತು ಮಹಾರಾಜ ಕಾಲೇಜುಗಳಲ್ಲಿ ೨೦ ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದರು. ವಿದ್ಯಾರ್ಥಿ ನಿಲಯದ ಕ್ಷೇಮಪಾಲಕರಾಗಿ, ವಿದ್ಯಾರ್ಥಿಗಳ ನಡೆನುಡಿಯನ್ನು ಸುಧಾರಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆ ಮತ್ತು ಪ್ರಚಾರಿಕೋಪನ್ಯಾಸ ವಿಭಾಗದ ಕಾರ್ಯದರ್ಶಿಯಾಗಿ ಎರಡು ವರ್ಷಗಳ ಕಾಲ ದುಡಿದರು. ಗಾಂಧೀಭವನದ ಗೌರವ ನಿರ್ದೇಶಕರಾಗಿ ಮತ್ತೆರಡು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ವಿದ್ಯಾರ್ಥಿ ಕ್ಷೇಮ ಚಿಂತನೆಯ, ಕರ್ಮಶ್ರದ್ಧೆಯ, ಹೃದಯವಂತಿಕೆಯ ಉಕಾಸು ಪ್ರಬುದ್ಧ ಕರ್ನಾಟಕದ ಸಂಪಾದಕರಾಗಿಯೂ ಅವಿಸ್ಮರಣೀಯ ಸೇವೆಯನ್ನು ಸಲ್ಲಿಸಿದರು.

ಶುಭ್ರ ಬದುಕಿನ ದಾರ್ಶನಿಕ:

ಉಕಾಸು ಅವರ ಪಾರದರ್ಶಕ ಗುಣ, ಕರ್ತವ್ಯನಿಷ್ಠೆ, ದಕ್ಷತೆ ಪ್ರಾಮಾಣಿಕತೆಗಳನ್ನು ಗಮನಿಸಿ, ಅವರನ್ನು ಮಹಾರಾಜ ಕಾಲೇಜಿನ ವಿದ್ಯಾರ್ಥಿ ನಿಲಯದ ನಿಲಯಪಾಲಕರಾಗಿ (ವಾರ್ಡನ್) ನೇಮಿಸಲಾಯಿತು. ಆಗ ಅವರು ಉಪನ್ಯಾಸಕ ಹುದ್ದೆಯಲ್ಲಿದ್ದು, ನಿಯಮದ ಪ್ರಕಾರ ರೀಡರ್ ಆದವರು ಮಾತ್ರ ವಾರ್ಡನ್ ಹುದ್ದೆಗೆ ಅರ್ಹರಾಗುತ್ತಿದ್ದರು. ಈ ವಿಷಯ ಚರ್ಚೆಗೆ ಬಂದಾಗ, ಆಗಿನ ಉಪಕುಲಪತಿಗಳಾಗಿದ್ದ ಕುವೆಂಪು ಅವರು—"ಉಕಾಸು ಅವರು ರೀಡರ್ ಆಗಿರದಿದ್ದರೆ ಮೊದಲು ಅವರನ್ನು ರೀಡರ್ ಮಾಡೋಣ, ವಾರ್ಡನ್ ಹುದ್ದೆ ಜೊತೆಗೇ ಇರುತ್ತದೆ" ಎಂದು ನುಡಿದರು. ಈ ಕೆಲವೇ ಮಾತುಗಳಲ್ಲಿ ಕುವೆಂಪು ಅವರು ಉಕಾಸು ವ್ಯಕ್ತಿತ್ವದರ್ಶನವನ್ನು ಮಾಡಿಸಿದ್ದಾರೆ.

ಉಕಾಸು ವಿದ್ಯಾರ್ಥಿನಿಲಯಪಾಲಕರಾಗಿ ಅವಿಸ್ಮರಣೀಯ ಸೇವೆ ಸಲ್ಲಿಸಿದರು. ವಿದ್ಯಾರ್ಥಿನಿಲಯದ ಅಡುಗೆ ಮನೆಯಿಂದ

ನಿಲಯಪಾಲಕರ ಮನೆಗೆ ಅಕ್ರಮವಾಗಿ ಸರಬರಾಜಾಗುತ್ತಿದ್ದ ಅಡುಗೆ ಪರಿಕರಗಳಿಗೆ ಕಡಿವಾಣ ಹಾಕಿದರು. ಸತ್ಸಂಪ್ರದಾಯಕ್ಕೆ ನಿಲಯದಲ್ಲಿದ್ದ ಸುಮಾರು ೨೦೦ ಮಂದಿ ವಿದ್ಯಾರ್ಥಿಗಳ ಅಶಿಸ್ತನ್ನು ಮೌನವಾಗಿ ತಿದ್ದಿದರು. ಅವರ ಯೋಗಕ್ಷೇಮದ ಜವಾಬ್ದಾರಿಯನ್ನು ಮಮತೆಯಿಂದ ನಿರ್ವಹಿಸಿದರು. ಸ್ವೇಚ್ಛಾ ಪ್ರವೃತ್ತಿಯ ಹುಡುಗರ ಕೊಠಡಿಗಳನ್ನು ಪ್ರವೇಶಿಸುತ್ತಿದ್ದ ಉಕಾಸು, ಅವರ ಅಸ್ತವ್ಯಸ್ತ ಹೊದಿಕೆಗಳನ್ನು ಮಡಿಸಿಡುತ್ತಿದ್ದರು. ಚೆಲ್ಲಾಪಿಲ್ಲಿಯಾಗುತ್ತಿದ್ದ ಪುಸ್ತಕಗಳನ್ನು ಓರಣವಾಗಿ ಜೋಡಿಸಿಡುತ್ತಿದ್ದರು. ಕೆಲವು ತುಂಟ ಹುಡುಗರು ಬೀಡಿ ಸಿಗರೇಟುಗಳ ಚಟಕ್ಕೆ ಬಲಿಯಾಗಿ, ಅವುಗಳ ತುಂಡುಗಳನ್ನು ಕೊಠಡಿಯಲ್ಲಿ ಹರಡಿದ್ದರೆ ಅವುಗಳನ್ನೆತ್ತಿ ಕಸದ ಬುಟ್ಟಿಗೆ ಹಾಕುತ್ತಿದ್ದರು. ಕೊಠಡಿಯನ್ನು ಸ್ವಚ್ಛಗೊಳಿಸಿ ಅಲ್ಲಿಂದ ಹೊರಬೀಳುತ್ತಿದ್ದರು. ಇದನ್ನು ಗಮನಿಸಿದ ಹುಡುಗರು ತಮ್ಮ ತಪ್ಪನ್ನು ತಿದ್ದಿಕೊಂಡು ಉಕಾಸು ಅವರನ್ನು ಗೌರವದಿಂದ ಕಾಣುತ್ತಿದ್ದರು. ಹೊತ್ತು ಗೊತ್ತಿಲ್ಲದೆ ಸರಿರಾತ್ರಿಯಲ್ಲಿ ಬರುತ್ತಿದ್ದ ಹುಡುಗರನ್ನು ಸರಿದಾರಿಗೆ ತರಲು ರಾತ್ರಿಯ ಹೊತ್ತಿನಲ್ಲಿ ವಿದ್ಯಾರ್ಥಿನಿಲಯದ ಮುಂಬಾಗಿಲಲ್ಲಿ ಮಲಗುತ್ತಿದ್ದರು. ಈ ಮೌನದಂಡನೆ, ಅಪೂರ್ವ ಪರಿಣಾಮವನ್ನು ಬೀರುತ್ತಿತ್ತು. ಹುಡುಗರು ಮತ್ತೆ ತಪ್ಪನ್ನೆಸಗದೆ ಸರಿದಾರಿಗೆ ಬರುತ್ತಿದ್ದರು. ಅಡುಗೆಯವನು ಮತ್ತು ಕಸ ಗುಡಿಸುವವನು ತಪ್ಪು ಮಾಡಿದರೆ, ಅವರಿಗೆ ದಂಡವನ್ನು ವಿಧಿಸಿ; ಅದನ್ನು ತಾವೇ ಭರಿಸುತ್ತಿದ್ದರು. ಆವರ ಸಂಸಾರ ತಾಪತ್ರಯಗಳಿಗೆ ತಮ್ಮಿಂದ ಆದ ಹಣಕಾಸಿನ ನೆರವನ್ನೂ ನೀಡುತ್ತಿದ್ದರು. ತಾಳ್ಮೆಯನ್ನು ಕಳೆದುಕೊಳ್ಳದ ಉಕಾಸು ಯಾರನ್ನೂ ಗದರಿಸುತ್ತಿರಲಿಲ್ಲ. ಅವರ ತಪ್ಪುಗಳನ್ನು ಮೌನವಾಗಿ, ಪರಿಣಾಮಕಾರಿಯಾಗಿ ತಿದ್ದಿ ಅವರನ್ನು ಸರಿ-ದಾರಿಗೆ ತರುತ್ತಿದ್ದರು.

ನಿಲಯದ ವಿದ್ಯಾರ್ಥಿಗಳನ್ನು ಉಕಾಸು ಮುಂಜಾನೆ ಆರು ಗಂಟೆಗೆಲ್ಲಾ ಎಬ್ಬಿಸಿ, ಪ್ರಾರ್ಥನಾ ಸಭೆಗಳನ್ನು ನಡೆಸುತ್ತಿದ್ದರು. ಪುಟ್ಟ ಪುಟ್ಟ ಧಾರ್ಮಿಕ ಉಪನ್ಯಾಸಗಳನ್ನು ನೀಡುತ್ತಿದ್ದರು. ಭಗವದ್ಗೀತೆಯ ಶ್ಲೋಕಗಳನ್ನು ಪಠಿಸಿ ವಿವರಿಸುತ್ತಿದ್ದರು. ವಿದ್ಯಾರ್ಥಿಗಳಿಗೆ ಉತ್ತಮ ಊಟ ಮತ್ತು ವಸತಿಗಳ ಕಡೆಗೆ ಗಮನ ನೀಡುತ್ತಿದ್ದರು. ಅವರ ಪರಿಪೂರ್ಣ ವ್ಯಕ್ತಿತ್ವ ವಿಕಾಸಕ್ಕೆ ಆದ್ಯತೆ ನೀಡುತ್ತಿದ್ದರು. ವಾರ್ಡನ್ ಕೆಲಸವನ್ನು ಅತ್ಯಂತ ಶ್ರದ್ಧೆಯಿಂದ ನಿರ್ವಹಿಸಿ ವಿದ್ಯಾರ್ಥಿಗಳನ್ನು ವಾತ್ಸಲ್ಯಪೂರ್ಣವಾಗಿ ನಡೆಸಿಕೊಂಡರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಪ್ರಥಮ ವಿದ್ಯಾರ್ಥಿಕ್ಷೇಮಪಾಲಕನ ಹುದ್ದೆ ಉಕಾಸು ಅವರನ್ನು ಅರಸಿ ಬಂದಿತು. ವಿಶ್ವವಿದ್ಯಾನಿಲಯದ ಹುಡುಗರ ಅಶಿಸ್ತನ್ನು ತಿದ್ದಿ, ಅವರ ಬೇಕು ಬೇಡಗಳ ಬಗ್ಗೆ ಆತ್ಮೀಯವಾಗಿ ಸ್ಪಂದಿಸುತ್ತಿದ್ದ ಉಕಾಸು ಅವರಿಗೆ ಆ ಹುದ್ದೆ ಅತ್ಯಂತ ಸೂಕ್ತವಾಗಿತ್ತು. ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂಯಮ, ಸ್ವಾವ-ಲಂಬನೆ ಮತ್ತು ಸಹಿಷ್ಣುತೆಗಳನ್ನು ಬೆಳೆಸಲು, ಅವರು ಬಹುವಾಗಿ ಶ್ರಮಿಸಿದರು. ಯುವ ವಿದ್ಯಾರ್ಥಿಗಳನ್ನು ಸನ್ಮಾರ್ಗದಲ್ಲಿ ನಡೆಸಿ ಅವರ ವ್ಯಕ್ತಿತ್ವವನ್ನು ಅರಳಿಸುವ ಗುರುತರವಾದ ಹೊಣೆಗಾರಿಕೆಯನ್ನು ಸಾರ್ಥಕವಾಗಿ ನಿರ್ವಹಿಸಿದರು.

ಉಕಾಸು ವಿದ್ಯಾರ್ಥಿ ಕ್ಷೇಮಾಭಿವೃದ್ಧಿಗಾಗಿ ಹತ್ತು ಹಲವು ಯೋಜನೆಗಳನ್ನು ಹಮ್ಮಿಕೊಂಡರು. ವಿದ್ಯಾರ್ಥಿಗಳ ಆಸಕ್ತಿ ಮತ್ತು ಸಾಮರ್ಥ್ಯಗಳಿಗೆ ಅನುಗುಣವಾದ ವಿಷಯಗಳ ಬಗ್ಗೆ ವಿವಿಧ ಉಪನ್ಯಾಸ ಮತ್ತು ಚರ್ಚಾಗೋಷ್ಠಿಗಳನ್ನು ಏರ್ಪಡಿಸಿದರು. ಅವರ ವೃತ್ತಿಜೀವನಕ್ಕೆ ಅನುಕೂಲವಾಗ ಬಹುದಾದ 'ಕಲಿಕೆ-ಗಳಿಕೆ' ಯೋಜನೆಯನ್ನು ಜಾರಿಗೆ ತಂದರು. ಉಚಿತ ಉಪಾಹಾರ, ಸಾಂಸ್ಕೃತಿಕ ಸ್ಪರ್ಧೆಗಳು, ಶ್ರಮದಾನ ಶಿಬಿರಗಳು ಮುಂತಾದ ರಚನಾತ್ಮಕ ಚಟುವಟಿಕೆಗಳನ್ನು ರೂಪಿಸುತ್ತಿದ್ದರು.


ಉಕಾಸು ವಿದ್ಯಾರ್ಥಿಗಳಿಗೆ ಸರಳ ಜೀವನದ ಅವಶ್ಯಕತೆಯನ್ನು ಮನದಟ್ಟು ಮಾಡಿಕೊಡಲು ಪ್ರಯತ್ನಿಸಿದರು. ಗ್ರಾಮಾಂತರ ವಿದ್ಯಾರ್ಥಿಗಳ ಕ್ಷೇಮಕ್ಕೆ ಗಮನ ಕೊಡುತ್ತಿದ್ದರು. ವಿಶ್ವವಿದ್ಯಾನಿಲಯ ಮತ್ತು ವಿದ್ಯಾರ್ಥಿನಿಲಯಗಳ ಆವರಣವನ್ನು ಸ್ವಚ್ಛವಾಗಿಡಲು, ವಿದ್ಯಾರ್ಥಿಗಳಿಂದ ಶ್ರಮದಾನ ಮಾಡಿಸುತ್ತಿದ್ದರು. ಇದರಿಂದಾಗಿ ಯುವಶಕ್ತಿಯ ಸದುಪಯೋಗ ಮತ್ತು ಸಮಾಜ ಕಲ್ಯಾಣ ಎರಡೂ ಸಾಧ್ಯವಾಗುತ್ತಿತ್ತು. ಸಂಗೀತಪ್ರಿಯರಾದ ಉಕಾಸು ಅವರಿಗೆ ಹಿಂದೂಸ್ತಾನಿ ಸಂಗೀತವೆಂದರೆ ಹೆಚ್ಚು ಆಸಕ್ತಿ. ಮದರಾಸು, ಹೈದರಾಬಾದ್, ಧಾರವಾಡ ಮುಂತಾದ ಕಡೆಗಳಿಂದ ಸಂಗೀತಗಾರರನ್ನು ಕರೆಸಿ, ಸಂಗೀತ ಕಛೇರಿಗಳನ್ನು ನಡೆಸುತ್ತಿದ್ದರು. ಪ್ರಸಿದ್ಧ ಸಂಗೀತಕಾರರ ಕ್ಯಾಸೆಟ್ಟುಗಳನ್ನು ತರಿಸಿ, ಆ ಹಾಡುಗಳು ವಿದ್ಯಾರ್ಥಿಗಳ ಕಿವಿಯ ಮೇಲೆ ಬೀಳುವಂತೆ ಮಾಡುತ್ತಿದ್ದರು.

ಉಕಾಸು ವಿದ್ಯಾರ್ಥಿ ಕ್ಷೇಮಪಾಲಕ ಹುದ್ದೆಯ ಜೊತೆಗೇ ರಾಷ್ಟ್ರೀಯ ಸೇವಾ ಯೋಜನೆಯ ಗೌರವ ನಿರ್ದೇಶಕರೂ ಆಗಿದ್ದರು. ಆ ಸಮಯದಲ್ಲಿ ನಡೆದ ಒಂದು ಘಟನೆ, ಉಕಾಸು ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿ. ಕಾಮನಕೊಪ್ಪಲಿನಲ್ಲಿ ಅಂತಾ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರ ವ್ಯವಸ್ಥೆಯಾಗಿತ್ತು. ಎಂಟು ಜಿಲ್ಲೆಗಳಿಂದ ಆಗಮಿಸಿದ ೧೦೦ಕ್ಕೂ ಹೆಚ್ಚು ಕಾಲೇಜು ವಿದ್ಯಾರ್ಥಿಗಳು ಅದರಲ್ಲಿ ಭಾಗವಹಿಸಿದ್ದರು. ಅವರಲ್ಲಿ ಹುಡುಗಿಯರೂ ಇದ್ದರು. ಶಿಬಿರಾಂತ್ಯದಲ್ಲಿ ಹುಡುಗರ ಮಧ್ಯೆ ಜಿಲ್ಲಾವಾರು ವೈಷಮ್ಯ ಬೆಳೆದು ಹೊಡೆದಾಟದ ಹಂತವನ್ನು ತಲುಪಿತು. ಬಿಗುವಿನ ವಾತಾವರಣ ಏರ್ಪಟ್ಟು ಒಬ್ಬ ಹುಡುಗನಿಗೆ ಚಪ್ಪಲಿಯ ಏಟೂ ಬಿದ್ದಿತ್ತು. ಸಂಘಟನಾಕಾರರು ಕಂಗಾಲಾದರು. ಉಕಾಸು ಅವರಿಗೆ ವಿಷಯವನ್ನು ತಿಳಿಸಿದರು. ಎಲ್ಲವೂ ಮಂಗಳಾಂತ್ಯವಾಗುವುದೆಂದು ಉಕಾಸು ಅವರ ದುಗುಡವನ್ನು ಹೋಗಲಾಡಿಸಲು ಪ್ರಯತ್ನಿಸಿದರು. ಉಕಾಸು ಸಂಘಟನಾಕಾರರೊಂದಿಗೆ ಕಾಮನಕೊಪ್ಪಲಿನ ಶಿಬಿರಕ್ಕೆ ನಡೆದರು. ಘಟನೆಗೆ ಸಂಬಂಧಿಸಿದ ಪ್ರಮುಖ ಹುಡುಗರನ್ನು ತಮ್ಮ ಕೊಠಡಿಗೆ ಕರೆಸಿಕೊಂಡು, ಘಟನಾವಳಿಯ ವಿಷಯವನ್ನು ಆಲಿಸಿದರು. ಅನಂತರ ಉಕಾಸು ಮಾತನಾಡತೊಡಗಿದಾಗ ಹುಡುಗರ ಮನವನ್ನಾಕ್ರಮಿಸಿದ್ದ ದ್ವೇಷಾಸೂಯೆಗಳ ಕರಿಮೋಡ ಮೆಲ್ಲ ಮೆಲ್ಲನೆ ಕರಗತೊಡಗಿತು. ಪಶ್ಚಾತ್ತಾಪದಿಂದ ದುಃಖಿತರಾದ ಹುಡುಗರು ಪರಸ್ಪರ ಕ್ಷಮೆಯಾಚಿಸಿದರು. ಪೂಜ್ಯ ಉಕಾಸು ಅವರ ಕ್ಷಮೆ ಕೋರಿದರು. ಚಪ್ಪಲಿಯಲ್ಲಿ ಹೊಡೆದ ಹುಡುಗ

ಅಂದು ಊಟ ಮಾಡದೆ ಪ್ರಾಯಶ್ಚಿತ್ತವನ್ನು ಕೈಗೊಂಡ. ದುಗುಡದಿಂದ ಕಂಗಾಲಾಗಿದ್ದ ಮನಸ್ಸುಗಳು ಹರ್ಷದಿಂದ ನಲಿದುವು. ಮಾರನೆಯ ದಿನ ಹುಡುಗರೆಲ್ಲಾ ಗೆಲುವಿನಿಂದ ಪರಸ್ಪರರನ್ನು ಬೀಳ್ಕೊಂಡರು. ವಿದ್ಯಾರ್ಥಿಗಳ ನಡುವೆ ಭುಗಿಲೆದ್ದಿದ್ದ ವೈಷಮ್ಯ, ಉಕಾಸು ಅವರ ಪ್ರವೇಶದಿಂದ ಇಬ್ಬನಿಯಂತೆ ಕರಗಿಹೋಗಿತ್ತು.

ಉಕಾಸು ಲೇಖಕರಾಗಿಯೂ ಪ್ರಸಿದ್ಧರಾಗಿದ್ದಾರೆ. ಜೀವನ ಚರಿತ್ರೆ, ವಿಮರ್ಶೆ, ಧರ್ಮ ಮತ್ತು ಪ್ರವಾಸ ಮುಂತಾದ ವಿಷಯಗಳನ್ನು ಒಳಗೊಂಡ ೨೫ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಅರವಿಂದರ ಕೆಲವು ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಅರವಿಂದರ 'ದಿವ್ಯಜೀವನ'ವನ್ನು ಕನ್ನಡೀಕರಣಗೊಳಿಸುತ್ತಿದ್ದಾಗ ಅವರಿಗೆ—'ಸಾಕು ನಿನ್ನ ರಚನೆ' ಎಂಬ ಅಶರೀರವಾಣಿಯು ಕನಸು ಬಿತ್ತಂತೆ! ಈ ಕೃತಿಯೇ ಇವರ ಕೊನೆಯ ಕೃತಿಯಾಯಿತು. ಅಧ್ಯಾಪಕರಾಗಿ, ಸಾಹಿತಿಯಾಗಿ, ವಿದ್ಯಾರ್ಥಿವತ್ಸಲರಾಗಿ, ಕರ್ಮಯೋಗಿಯಾಗಿ ಮತ್ತು ಸಮಾಜ ಸೇವಕರೆನಿಸಿ ಉಕಾಸು ಅವರ ವ್ಯಕ್ತಿತ್ವ ಸರ್ವಜನಾನುರಾಗಿಯಾಗಿತ್ತು.

ಸರ್ವರ ಒಳಿತನ್ನೇ ಬಯಸಿದ ಈ ಕರ್ಮಯೋಗಿಯ ಕಡೆಗಾಲ ಮಾತ್ರ ದುರಂತಮಯವಾಗಿತ್ತು. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ತಲೆಗೆ ಬಿದ್ದ ಏಟು ಅವರನ್ನು ಜೀವನದುದ್ದಕ್ಕೂ ಕಾಡಿತು. ಅದೇ ನೋವಿನಿಂದ ಅವರು ದಿನಾಂಕ: ೧೫–೭–೮೬ರಂದು ಗತಿಸಿದಾಗ, ಅವರ ಸಾವು ಅವರ ಆತ್ಮೀಯರನ್ನು ದಾಟಿ ಸುದ್ದಿ ಮಾಡಲೇ ಇಲ್ಲ. ಈಚೆಗೆ ಅವರ ಅಭಿಮಾನಿ ಬಳಗವು 'ನೀರವ ಸಾಧಕ" ಎಂಬ ಉಕಾಸು ಪುಣ್ಯಸ್ಮರಣ ಗ್ರಂಥವನ್ನು ಪ್ರಕಟಿಸಿ, ಅಗಲಿದ ಮಹಾಚೇತನಕ್ಕೆ ಗೌರವವನ್ನು ಅರ್ಪಿಸಿತು.



ಪ್ರಪಂಚ ಒಂದು ಸಿಲವು ಕನ್ನಡಿ. ಯಾರು ಹೇಗಿದ್ದರೆ ಅವರಿಗೆ ಅದು ಹಾಗೆ ಕಾಣುತ್ತದೆ.

....ಥ್ಯಾಕರೆ

ಜಠರ ಹುಣ್ಣಿನ ಹುಟ್ಟು ಹಾಗೂ ಸಾವು

ಡಾ|| ಸ. ಜ. ನಾಗಲೋಟಿಮಠ

೨೫ 'ಶಾಂತಾ' ಬಸವ ಕಾಲನಿ
ಬೆಳಗಾವಿ-೫೯೦ ೦೧೦

"ಉದರ ನಿಮಿತ್ತಂ ಬಹುಕೃತ ವೇಷಂ (ಮೋಸಂ)" ಎಂದರೇನು ? ಜಠರಾಗ್ನಿಯನ್ನು ಯಶಸ್ವಿಯಾಗಿ ಎದುರಿಸಿ ಸೋಲಿಸಿ ತನ್ನ ಪತಾಕೆಯನ್ನು ಜಠರದಲ್ಲೇ ನೆಟ್ಟು ಅಲ್ಲೇ ಬೆಳೆದು ವ್ಯಕ್ತಿಗೆ ಉದರಶೂಲೆ, ಕ್ಯಾನ್ಸರ್ ಮುಂತಾದ ರೋಗ ಬರಲು ಕಾರಣವಾಗುವ ಏಕಾಣುಜೀವಿಯ ವೇಷ ಮತ್ತು ಮೋಸ ಎರಡನ್ನೂ ಇಲ್ಲಿ ಕಾಣಬಹುದು, ಬದುಕಿನಲ್ಲಿ ಜಾಗರೂಕರಾಗಬಹುದು.

ಜಠರ ಹುಣ್ಣಿನ ಹುಟ್ಟು ಸಾವುಗಳ ಕಥೆ ಬಲು ರಂಜನೀಯವಾಗಿದೆ. ಅದರ ಹುಟ್ಟಿನ ಕಾರಣಗಳೇನು, ಎಂಬುದರ ಬಗ್ಗೆ ಅನೇಕ ವಿಜ್ಞಾನಿಗಳು ಹಲವಾರು ಕಾರಣಗಳನ್ನು ಸೂಚಿಸಿದ್ದರು. ಆಹಾರವನ್ನು ದೂಷಿಸಿದ್ದರು. ಆದರಲ್ಲೂ ಮೆಣಸಿನಕಾಯಿ, ಖಾರ, ಮಸಾಲೆಗಳನ್ನು ಹಳಿದಿದ್ದರು. ಕೆಲವರು ಅದು ಮಾನಸಿಕ ಒತ್ತಡದಿಂದ ಬರುವುದೆಂದೇ ಸಾರಿದ್ದರು. ಇವೆಲ್ಲವುಗಳ ಸಲುವಾಗಿ ಉಪಚರಿಸಿದರೂ ಜಠರ ಹುಣ್ಣು ಮಾಯುತ್ತಿರಲಿಲ್ಲ, ರೋಗಿಗಳನ್ನು ಪೀಡಿಸಿ ಪೀಡಿಸಿ ಸಾಯಿಸಿ ಬಿಡುತ್ತಿತ್ತು. ಆದರೆ ಇಂದು ಜಠರ ಹುಣ್ಣನ್ನು ಸುಲಭವಾಗಿ ಮಾಯಿಸಲು ಸಾಧ್ಯವಾಗಿದೆ.

೧೯೮೨ಕ್ಕಿಂತ ಹಿಂದೆ

ಮೊದಮೊದಲು ಆಹಾರದಲ್ಲಿಯ ಖಾರವೇ ಜಠರ ಹುಣ್ಣಿನ ಕಾರಣವೆಂದು ತಿಳಿದಿದ್ದೆವು. ಯಾರು ಖಾರ ಹಾಗೂ ಮೆಣಸಿನಕಾಯಿ ಜಾಸ್ತಿ ತಿನ್ನುವರೋ ಅವರಿಗೆ ಜಠರ ಹುಣ್ಣು ಬರುವದು ನಿಶ್ಚಿತ ಎನ್ನಲಾಗುತ್ತಿತ್ತು. ಮನೆಯಲ್ಲಿ ಯಾರಾದರೂ ಸ್ವಲ್ಪ ಜಾಸ್ತಿ ಖಾರ ತಿಂದರೆ "ಬೇಡ, ಎಚ್ಚರ ಇರಲಿ, ಜಠರ ಹುಣ್ಣು ಬಂದೀತು, ಜೋಕೆ, ಎಂದು ಹೇಳುತ್ತಿದ್ದರು. ಆಂಧ್ರ ಪ್ರದೇಶದಲ್ಲಿ ಜಠರ ಹುಣ್ಣು ಜಾಸ್ತಿ. ಯಾಕೆಂದರೆ ಅಲ್ಲಿ ಮೆಣಸಿನಕಾಯಿ ಜಾಸ್ತಿ ತಿನ್ನುವರು ಎಂದೇ ಪುಸ್ತಕಗಳು ಬರೆಯುತ್ತಿದ್ದವು. ಜಠರ ಹುಣ್ಣು ಪಡೆದ ರೋಗಿಗಳು ಕೇವಲ ಸಪ್ಪನೆಯ ಆಹಾರ ತಿನ್ನಬೇಕೆಂದು ನಿಯಮವಿತ್ತು. ರೋಗಿ ಏನಾದರೂ ಮಸಾಲೆ, ಮೆಣಸಿನಕಾಯಿ ತಿಂದರೆ ಮುಗಿಯಿತು. ಜಠರ ಹುಣ್ಣು ಸಿಡಿದೇಳುತ್ತಿತ್ತು. ಜಠರದಲ್ಲಿ ಬೆಂಕಿ ಬಿದ್ದಂತಾಗುತ್ತಿತ್ತು. ರೋಗಿ ನೋವಿನಿಂದ ಮುದ್ದೆಯಾಗುತ್ತಿದ್ದ. ಹೊರಳಾಡುತ್ತಿದ್ದ. ಬಾಯಿ ಬಡಿದುಕೊಳ್ಳಬೇಕಾಗುತ್ತಿತ್ತು. ಉತ್ತರ ಕರ್ನಾಟಕದ ಜನರು ಇದನ್ನು

ಹೊಯ್ಯುಕೊಳ್ಳುವುದು ಎನ್ನುತ್ತಾರೆ. ಹುಣ್ಣು ಶಾಂತವಾಗಬೇಕಾದರೆ ಹಾಲು ಕುಡಿಯಬೇಕಾಗುತ್ತಿತ್ತು. ಆಮ್ಲವನ್ನು ನಾಶಪಡಿಸುವಂಥ ಔಷಧ ಸೇವಿಸಬೇಕಾಗುತ್ತಿತ್ತು. ರೋಗಿಯನ್ನು ಸುಂದು ಬರುವಂತೆಮಾಡಿ ಮಲಗಿಸಬೇಕಾಗುತ್ತಿತ್ತು. ಒಂದು ಸಲ ಜಠರ ಹುಣ್ಣು ಬಂದರೆ ಸಾಮಾನ್ಯವಾಗಿ ಅದು ರೋಗಿಯೊಡನೆಯೇ ಹೋಗುತ್ತಿತ್ತು. ಗುಣವಾಗುವುದು ಎಂಬ ಮಾತೇ ಇರಲಿಲ್ಲ. ರೋಗಿ ಜೀವನವಿಡೀ ನರಳಿನರಳಿ ಸಂಕಟಪಡುತ್ತಿರುತ್ತಿದ್ದ.

ಇದು ಸಹಿಸಲಾರದ ಸ್ಥಿತಿಗೆ ಮುಟ್ಟಿದರೆ ರೋಗಿಯನ್ನು ಶಸ್ತ್ರಕ್ರಿಯಾತಜ್ಞರ ಕಡೆಗೆ ಕಳುಹಿಸುತ್ತಿದ್ದರು. ಅವರಿಗೆ ಒಂದೇ ದಾರಿ ಇತ್ತು. ಅದೆಂದರೆ ಹುಣ್ಣು ಪಡೆದ ಜಠರವನ್ನು ಕೊಯ್ದು ಹೊರತೆಗೆಯುತ್ತಿದ್ದರು. ಅಂದರೆ ರೋಗಿಯ ಅರ್ಧ ಅಥವಾ ಹೆಚ್ಚು ಭಾಗದ ಜಠರ ಹೊರಬರುತ್ತಿತ್ತು. ದೇಹದಲ್ಲಿ ಜಠರದ ಸ್ವಲ್ಪಭಾಗ ಮಾತ್ರ ಉಳಿಯುತ್ತಿತ್ತು. ಆಗ ಜಾಸ್ತಿ ತಿನ್ನಲು ಸಾಧ್ಯವಿದ್ದಿಲ್ಲ. ನೀರು ಕುಡಿಯಲು ಆಗುತ್ತಿರಲಿಲ್ಲ. ಯಾಕೆಂದರೆ ಇದ್ದ ಜಠರದಲ್ಲಿ ಸ್ಥಾನವೇ ಇರುತ್ತಿರಲಿಲ್ಲ. ರೋಗಿ ತನ್ನ ಉಳಿದ ಆಯುಷ್ಯವನ್ನೆಲ್ಲ ಅರ್ಧ, ಗಿರ್ಧ ಜಠರದಿಂದಲೇ ತೆಗೆಯಬೇಕಿತ್ತು. ಅರ್ಧ ಜಠರದ ತೊಂದರೆಗಳು ಕಡಿಮೆ ಇರಲಿಲ್ಲ. ಆದರೂ ಜಠರ ಹುಣ್ಣಿನ ನರಕಯಾತನೆಯ ಎದುರು ಅರ್ಧ ಜಠರದ ತೊಂದರೆಗಳು ಸಹ್ಯ ಎನಿಸಿದ್ದವು. ಅವುಗಳೊಡನೆ ತೊಳಲಾಡುತ್ತ ಜೀವಿಸಬೇಕಾಗುತ್ತಿತ್ತು.

ಇದಲ್ಲದೆ ಇನ್ನೊಂದು ಪ್ರಕಾರದ ಶಸ್ತ್ರಕ್ರಿಯೆಯೂ ರೂಢಿಯಲ್ಲಿತ್ತು. ಈ ವಿಧಾನದಲ್ಲಿ ಜಠರದಲ್ಲಿ ಒಂದು ರಂಧ್ರ ಕೊರೆಯುತ್ತಿದ್ದರು. ಈ ರಂಧ್ರದ ಮೂಲಕ ಆಹಾರವು ನೇರವಾಗಿ ದೂರದ ಸಣ್ಣ ಕರುಳಿನಲ್ಲಿ ಸುರುವಲ್ಪಡುತ್ತಿತ್ತು. ಇದರಿಂದ ಸಹಜವಾಗಿ, ನೈಸರ್ಗಿಕವಾಗಿ ನಡೆಯುತ್ತಿದ್ದ ಪಚನ ಕ್ರಿಯೆ ದಾರಿ ತಪ್ಪುತ್ತಿತ್ತು. ಆ ಪಚನಬಂದು ರೋಗಿಯ ಪೌಷ್ಟಿಕತೆ ಹಾಳಾಗುತ್ತಿತ್ತು. ರೋಗಿಯು ಜಠರ ಹುಣ್ಣಿನ ನೋವಿನ ಬದಲಾಗಿ ಆಹಾರ ಪೋಷಕಗಳ ಕೊರತೆಯಿಂದ ಬಳಲಲು ಸಿದ್ಧವಾಗಬೇಕಿತ್ತು.

ಮದ್ದುಗಳಿಗೊಂದು ಮಿತಿ ಇತ್ತು. ಮದ್ದುಗಳು ಕಾರ್ಯಹೀನವಾದಾಗ ರೋಗಿಯನ್ನು ಶಸ್ತ್ರಕ್ರಿಯೆಗೆ ರವಾನಿಸಬೇಕಾಗುತ್ತಿತ್ತು. ಕಾರಣ ಜಠರ ಹುಣ್ಣಿಗೆ ಶಸ್ತ್ರಕ್ರಿಯಾತಜ್ಞರೇ (ಅ-)ಮಂಗಳ ಹಾಡುತ್ತಿದ್ದವರು. ಔಷಧ ತಜ್ಞರಿಗೆ ಒಂದು ಮಿತಿ ಇತ್ತು. ಅವರು ದೂರದಿಂದಲೇ ರೋಗಿಯನ್ನು ನೋಡುತ್ತ ನಿಲ್ಲಬೇಕಾಗುತ್ತಿತ್ತು.

ಅಂದು ಜಠರ ಹುಣ್ಣನ್ನು ನಿದಾನಿಸಲು ಹಲವಾರು ಪರೀಕ್ಷೆಗಳನ್ನು ಮಾಡುತ್ತಿದ್ದರು. ಅವುಗಳಲ್ಲಿ ಬಲು ಮುಖ್ಯವಾದುದೆಂದರೆ ಜಠರ ರಸದಲ್ಲಿಯ ಆಮ್ಲದ ಪ್ರಮಾಣ ಹಾಗೂ ಉಗ್ರತೆ. ಅಲ್ಲದೆ ಅಪಚನವಾದ ಆಹಾರ ಪದಾರ್ಥ, ರಕ್ತ ವಸರುವಿಕೆ ಇತ್ಯಾದಿ ಪರೀಕ್ಷಿಸುತ್ತಿದ್ದರು. ಬೇರಿಯಮ್ ಹಾಲು ಕುಡಿಸಿ ಜಠರದ ಎಕ್ಸರೇ ಚಿತ್ರ ತೆಗೆದು ಹುಣ್ಣಿನ ವಸತಿ ಹಾಗೂ ಗಾತ್ರಗಳನ್ನು ಅಂದಾಜಿಸುತ್ತಿದ್ದರು. ಇದಲ್ಲದೆ ರೋಗಿಯ ರಕ್ತ, ಮೂತ್ರ, ಮಲ, ಪರೀಕ್ಷಿಸುತ್ತಿದ್ದರು. ಇಷ್ಟಕ್ಕೆ ಎಲ್ಲ ಮುಗಿಯುತ್ತಿತ್ತು.

೧೯೮೨ ರ ಬಳಿಕ

ಇತ್ತೀಚೆಗೆ ಜಠರ ಹುಣ್ಣಿನ ಹುಟ್ಟು ಸಾವುಗಳ ಕಥೆಯೇ ಬದಲಾಗಿದೆ, ಮೇಲೆ ಹೇಳಿದ ಪರೀಕ್ಷೆಗಳನ್ನು ಇಂದು ಮಾಡ ಬೇಕಿಲ್ಲ. ಮಾಡುವುದೂ ಇಲ್ಲ. ಮೊದಲು ವಿವರಿಸಿದ ಶಸ್ತ್ರಕ್ರಿಯೆಗಳನ್ನೂ ನಡೆಸುವು ದಿಲ್ಲ. ರೋಗಿಗಳು ಇಂದು ಶಸ್ತ್ರಕ್ರಿಯಾ ತಜ್ಞರ ಬಳಿಗೆ ಹೋಗುವದೇ ಇಲ್ಲ. ಕೆಲವು ಔಷಧ ಗುಳಿಗೆಗಳ ಮೇಲೆಯೇ ಸಂಪೂರ್ಣ ಉಪಚಾರ ನಡೆದಿದೆ. ಇಂದು ಜಠರ ಹುಣ್ಣನ್ನು ಸಂಪೂರ್ಣವಾಗಿ ಮಾಯುವಂತೆ ಮಾಡಬಹುದು. ಜಠರದ ಯಾವದೇ ಭಾಗ ವನ್ನು ಕೊಯ್ದು ಚೆಲ್ಲಬೇಕಾಗಿಲ್ಲ. ಹಿಂದೆ ನಡೆಯುತ್ತಿದ್ದ ಕಸರತ್ತುಗಳನ್ನು ಇಂದು ನೆನಪಿಸಿದರೆ ಮೋಜು ಎನಿಸುತ್ತದೆ. ನಗೆ ಬರುತ್ತದೆ.

ಹಾಗಾದರೆ ಆದ ಬದಲಾವಣೆಯಾದರೂ ಏನು? ಇಂದಿನ ಖಾರದ, ಮೆಣಸಿನಕಾಯಿ ಗಳ, ಮಸಾಲೆಯ ಶಕ್ತಿಕಳೆಗುಂದಿದೆಯೇ? ಅಥವಾ ಜನರು ಆ ಪದಾರ್ಥ ಮುಟ್ಟುವುದೇ ಇಲ್ಲವೊ? ಸುಳ್ಳು, ಎಲ್ಲವೂ ಹಾಗೆಯೇ ಇವೆ. ಇಂದು ಜಠರ ಹುಣ್ಣಿನ ರೋಗಿ ಭಯಬೀಳದೆ ಮಿರ್ಚಿಭಜಿ, ಖಾರ, ಚಟ್ನಿ ಗಳನ್ನು ಧಾರಾಳವಾಗಿ ಸೇವಿಸಬಹುದು, ಸವಿಯಬಹುದು.

ಬಂದ ಬದಲಾವಣೆ

ವಿಜ್ಞಾನ ಪ್ರಗತಿ ಕಂಡಿದೆ. ವೈದ್ಯ ವಿಜ್ಞಾನಿಗಳು ಸಾಕಷ್ಟು ಸಂಶೋಧನೆ ಮಾಡಿದ್ದಾರೆ. ಜಠರ ಹುಣ್ಣು ಹುಟ್ಟಲು, ಬೆಳೆಯಲು, ಮಾಯದೇ ಇರಲು ಕಾರಣ ವಾದ ಸೂಕ್ಷ್ಮಜೀವಿಯನ್ನು ಪತ್ತೆ ಹಚ್ಚಿ ದ್ದಾರೆ. ಇದೊಂದು ಬ್ಯಾಕ್ಟೀರಿಯಾ ಜೀವಿ, ಇದರ ಹೆಸರು 'ಹೆಲೆಕೋ ಬ್ಯಾಕ್ಟೀರಿಯಾ ಪೆಲೋರಿ' ಎಂದು, ಇದನ್ನು ಬಹಳ ವರ್ಷಗಳ ಹಿಂದೆ ವೈದ್ಯರು ಕಂಡಿದ್ದರೂ ಅದಕ್ಕೆ ಸಲ್ಲಬೇಕಾದ 'ಮರ್ಯಾದೆ' ಕೊಟ್ಟಿರಲಿಲ್ಲ. ಅದರ ಮಹತ್ವವನ್ನು ಮರಳಿ ೧೯೮೨ ರಲ್ಲಿ ಕಂಡುಕೊಳ್ಳಲಾಯಿತು. ಆ ಸ್ನಾತಕೋತ್ತರ ವಿದ್ಯಾರ್ಥಿಯನ್ನು ಹಾಗೂ ಅವನ ಪ್ರಾಧ್ಯಾಪಕರನ್ನು ಜಗತ್ತು ನಂಬ ಲಿಲ್ಲ. ಅವರು ಹೇಳುತ್ತಿದ್ದ ವಿವರಗಳಿಗೆ ನಿರ್ಲಕ್ಷ್ಯವೇ ಎದುರಾಯಿತು. ಅವರಷ್ಟು ತಲೆತಿರುಕರೇ ಇಲ್ಲವೆಂದು ಅಂದರು. ಅವರ ಸಂಶೋಧನೆಯನ್ನು ಕೇಳಲು ಕೇವಲ ನಾಲ್ಕೈದು ಜನ ಮಾತ್ರ ಇದ್ದರಂತೆ. ಅವರಲ್ಲಿ ಒಬ್ಬೊಬ್ಬರೂ ತೂಕಡಿಕೆಯಲ್ಲಿ ಇದ್ದಿರಬೇಕು. ಅಂದಿನ ವರೆಗೆ ವೈದ್ಯರು ನಂಬಿದ ಸಂಗತಿಯೆಂದರೆ ಜಠರವು ಬ್ಯಾಕ್ಟೀರಿಯಾ ಜೀವಿಗಳಿಂದ ಮುಕ್ತವಿರುವ ಸ್ಥಳ, ಯಾಕೆಂದರೆ ಜಠರಾಮ್ಲ ಎಲ್ಲ ಬ್ಯಾಕ್ಟೀರಿಯಾಗಳನ್ನು ಕೊಂದುಹಾಕು ವುದು. ಯಾವುದೇ ಬ್ಯಾಕ್ಟೀರಿಯಾ ಆಮ್ಲದ ದಾಳಿಯಿಂದ ಪಾರಾಗಬೇಕಾದರೆ ರಕ್ಷಣೆ ಕವಚ ಬೇಕಾಗಿತ್ತು. ಕ್ಷಯರೋಗಾಣುವಿಗೆ ಮಾತ್ರ ಕರ್ಣನಿಗಿದ್ದಂತೆ ಹುಟ್ಟಿನೊಡನೆಯೇ ಒಂದು ಕವಚ ಇರುತ್ತದೆ. ಕಾರಣ ಅದು ಪಾರಾಗಬಹುದು. ಉಳಿದೆಲ್ಲ ಬ್ಯಾಕ್ಟೀರಿಯಾ ಜೀವಿಸಲಾರವು ಎಂದೇ ತಿಳಿದಿದ್ದರು. ಅಂದಿನ ಅನಿಸಿಕೆ ತಪ್ಪು ಎಂಬುದನ್ನು ಈ ಶೋಧಕರು ಖಚಿತ ಮಾಡಿದರು.

ಹೆಲೆಕೋ ಬ್ಯಾಕ್ಟೀರಿಯಾ ಪೆಲೋರಿ ಒಂದು ಪ್ರಕಾರದ ಬ್ಯಾಕ್ಟೀರಿಯಾ ಜೀವಿ. ನೋಡಲು ಇದು ಸ್ಪ್ರಿಂಗಿನ ತುಂಡುಗಳಂತೆ

ಸುರುಳಿ ಹೊಡೆದಿರುತ್ತದೆ. ಇಲ್ಲವೆ ಮಣಿದಿರುತ್ತದೆ. ಚಲಿಸಲು ಇದಕ್ಕೆ ಅನುಕೂಲವಾದ ಬಾಲಗಳಿವೆ. ಈ ಜೀವಿ ಕಟ್ಟಿಗೆಯಲ್ಲಿ ಸ್ಕ್ರೂ ಮೊಳೆಯು ಸೇರಿದಂತೆ ತಿರುಗುತ್ತ ನುಸುಳುವುದು. ಇದರ ಗಾತ್ರ ಬಲು ಸೂಕ್ಷ್ಮ. ಕರ್ಣನಂತೆ ಈ ಜೀವಿಯೂ ದೇವರಿಂದ ಒಂದು ಶಕ್ತಿಯನ್ನು ಪಡೆದು ಹುಟ್ಟಿರುತ್ತದೆ. ಆ ಶಕ್ತಿಯೆಂದರೆ ತನ್ನ ದೇಹದ ಸುತ್ತಲೂ ಒಂದು ತೆಳ್ಳನೆಯ ಅನಿಲದ ಕವಚವನ್ನು ಸಿದ್ಧಗೊಳಿಸುವುದು. ಈ ಜೀವಿಯು ತನ್ನ ದೇಹದಲ್ಲಿದ್ದ ರಾಸಾಯನಿಕಗಳನ್ನು ಮಾನವ ಜಠರದ ಲೋಳೆಯ ಮೇಲೆ ಪ್ರಯೋಗಿಸುತ್ತದೆ. ಲೋಳೆಯಲ್ಲಿದ್ದ ಯೂರಿಯಾ ಪದಾರ್ಥವು ಒಡೆದು ಅಮೋನೀಯಾ ಅನಿಲ ಹುಟ್ಟುವುದು. ಈ ಅನಿಲವು ಜೀವಿಯನ್ನು ಸುತ್ತುವರೆದು ರಕ್ಷಣೆ ಒದಗಿಸುತ್ತದೆ. ಜಠರದ ಆಮ್ಲವು ಜೀವಿಯ ಸಮೀಪ ಬಂದರೆ ಈ ಅನಿಲವು ಆಮ್ಲವನ್ನು ನಿಷ್ಕ್ರಿಯೆಗೊಳಿಸುವುದು. ಇಂಥ ರಕ್ಷಣಾ ವಿಧಾನ ಹೊಂದಿರುವ ಈ ಜೀವಿಯು ಜಠರದ ಲೋಳ್ಪರೆಯಲ್ಲಿ ಜೀವಿಸಬಲ್ಲದು. ಬೆಳೆಯಬಲ್ಲದು. ತನ್ನ ಪೀಳಿಗೆಯನ್ನು ಹೆಚ್ಚಿಸಿ ಲೋಳ್ಪರೆಯ ಜೀವಕೋಶಗಳನ್ನು ನಾಶಪಡಿಸುವುದು. ಅಲ್ಲಿ ಉರಿಯಾತನೆ ಹುಟ್ಟಿಸುವುದು ಉರಿಯಾತನೆ ಉಗ್ರವಾದಂತೆ ಜಠರದ ಲೋಳ್ಪರೆಯಲ್ಲಿ ಹುಣ್ಣು ಹುಟ್ಟುವುದು. ಇದು ದೀರ್ಘ ಕಾಲದವರೆಗೆ ಉಳಿದು ಜಠರ ಹುಣ್ಣು ಎಂದು ಕರೆಯಲ್ಪಡುವುದು.

ತನಗೆ ಆದ ಗಾಯಗಳನ್ನು ಮಾಯುವಂತೆ ಮಾಡುವ ಶಕ್ತಿ ದೇಹಕ್ಕೆ ಇದೆ. ಇಂಥ ಪ್ರಯತ್ನ ಅವಶ್ಯವಾಗಿ ಪ್ರಾರಂಭವಾಗುತ್ತದೆ. ಆದರೆ ಈ ಪ್ರಯತ್ನವನ್ನು ಮುರಿದು ಹಾಕುವ ಚತುರತೆಯನ್ನು ಈ ಬ್ಯಾಕ್ಟೀರಿಯಾ ನಡೆಸುತ್ತದೆ. ಹುಣ್ಣು ಮಾಯದಂತೆ ಎಚ್ಚರ ವಹಿಸುವುದು ಹುಣ್ಣಿನಿಂದ ವಸರಲ್ಪಡುವ ರಸಿಕೆಯನ್ನು ನುಂಗಿ ಸುಖದಿಂದ ಜೀವನ ಸಾಗಿಸುವುದು. ಹುಣ್ಣು ಈ ಜೀವಿಗೆ ಒಂದು ಅಕ್ಷಯಪಾತ್ರೆ ಇದ್ದಂತೆ, ಇದು ನಮಗೆ ತಿಳಿಯದೇ ಇದ್ದಾಗ ನಾವು ಹಲವಾರು ಪ್ರಯತ್ನಗಳನ್ನು ಮಾಡಿದ್ದಾಯಿತು. ಅವುಗಳಲ್ಲಿ ಸಾಕಷ್ಟು ಸೋಲನ್ನು ಅನುಭವಿಸಿದ್ದಾಯಿತು. ಈ ಬ್ಯಾಕ್ಟೀರಿಯಾದ ಮಸಲತ್ತು ಇಲ್ಲಿಗೇ ಮುಗಿಯಿತು ಎಂದಲ್ಲ. ಅದು ಜಠರ ಹುಣ್ಣಿನ ಸುತ್ತಲೂ ಕುಳಿತು ಮಾಡಬಾರದ ಕೆಲಸ ಮಾಡಿ ಜಠರ ಹುಣ್ಣು ಕ್ಯಾನ್ಸರ್ ಹುಣ್ಣಾಗುವಂತೆ ಮಾಡುವ ಪ್ರಯತ್ನದಲ್ಲಿ ಇರುತ್ತದೆ. ಅನೇಕಸಲ ಅದರ ಪ್ರಯತ್ನದಿಂದ ಜಠರ ಕ್ಯಾನ್ಸರ್ ಮೂಡುವುದು.

ಒಂದು ವೇಳೆ ಈ ಜೀವಿಗಳನ್ನು ನಾಶಪಡಿಸಿ, ಜಠರವನ್ನು ಇವುಗಳ ದಾಳಿಯಿಂದ ರಕ್ಷಿಸಿದರೆ ಸಾಕು, ದೇಹದ ಮಾಯುವ ಶಕ್ತಿ ತನ್ನ ಕಾರ್ಯ ನಡೆಸಿ ಜಠರ ಹುಣ್ಣು ಸಂಪೂರ್ಣ ಮಾಯುವಂತೆ ಮಾಡುತ್ತದೆ. ಲೋಳ್ಪರೆಯಲ್ಲಿಯ ಉರಿಯಾತನೆ ಶಾಂತವಾಗುತ್ತದೆ. ರೋಗಿ ತನ್ನ ತೊಂದರೆಗಳಿಂದ ಮುಕ್ತನಾಗುವನು. ಈ ಜೀವಿಗಳನ್ನು ನಾಶಪಡಿಸುವ ಮದ್ದುಗಳು ಈಗ ಲಭ್ಯವಾಗಿವೆ. ಕೇವಲ ಒಂದೆರಡು ವಾರ ಮದ್ದು ಉಪಯೋಗಿಸಿದರೆ ಸಾಕು. ಎಲ್ಲವೂ ಸರಿಹೋಗುತ್ತದೆ.

ಈ ಬ್ಯಾಕ್ಟೀರಿಯಾವನ್ನು ಒಂದು ಸಲ ದೇಹದಿಂದ ಹೊರಹಾಕಿದರೆ ಸಾಕೇ? ಇಲ್ಲ

ಇಲ್ಲ. ಪದೇ ಪದೇ ಈ ಜೀವಿ ವಾತಾವರಣ ದಿಂದ ಜಠರ ಸೇರಲು ಸಾಧ್ಯ. ಹಾಗಾದರೆ ಅವು ಎಲ್ಲಿಂದ ಬರುತ್ತವೆ? ಈ ಜೀವಿಗಳು ಮಾನವನ ದೊಡ್ಡ ಕರುಳಿನಲ್ಲಿ ಹಾಗೂ ಪಶು ಗಳ ದೊಡ್ಡ ಕರುಳಿನಲ್ಲಿ ಸಾಮಾನ್ಯವಾಗಿ ಜೀವಿಸಿರುತ್ತವೆ. ಕಾರಣ ಅವು ಮಾನವರ ಹಾಗೂ ಪಶುಗಳ ಮಲದಲ್ಲಿ ವಿಸರ್ಜಿಸಲ್ಪಡು ತ್ತವೆ. ನಾವು ಸೇವಿಸುವ ಆಹಾರ ಪಾನೀಯ ಗಳು ಮಲ ಕಶ್ಮಲವಾಗಲು ಸಾಧ್ಯ. ಇಂಥ ಆಹಾರ ಕಶ್ಮಲತೆಯಿಂದಲೇ ಈ ರೋಗಾಣು ವಿನ ಪ್ರಸಾರ ಆಗುವುದು. ರೋಗಾಣುಗಳು ಜಠರ ಸೇರುತ್ತವೆ. ಮೊದಲಿನ ಕಥೆ ಮತ್ತೆ ಶುರುವಾಗುತ್ತದೆ.

ನಾವೆಲ್ಲ ಸುಶಿಕ್ಷಿತರು, ಆಹಾರ ಮಲ ಕಶ್ಮಲ ಆಗುವುದೆಂದರೇನು? ಅಂಥ ಆಹಾರ ವನ್ನು ನಾವು ಸೇವಿಸುವುದೆಂದರೇನು ಎಂದು ಹೇಳುವ ಜನರು ಇರಬಹುದು. ಆದರೆ ಭಾರತದಂಥ ಮುಂದುವರೆಯುತ್ತಿರುವ ದೇಶ ಗಳಲ್ಲಿ ಇದು ನಿತ್ಯ ಜರಗುತ್ತದೆ. ನಮಗೆ ಅದರ ಪರಿಚಯವಿಲ್ಲ ಅಷ್ಟೆ. ಅದು ನಮಗೆ ಅರಿವಿಲ್ಲದಂತೆ ನಡೆಯುತ್ತಿದೆ. ನಮ್ಮ ದೇಶ ದಲ್ಲಿಯ ಎಲ್ಲ ಭಾಗಗಳಲ್ಲಿ ಕಾಣುವ ಹಲವಾರು ರೋಗಗಳನ್ನು ಪರಿಶೀಲಿಸಿದರೆ ಅವೆಲ್ಲ ಆಹಾರ ಮಲ ಕಶ್ಮಲತೆಯಿಂದ ಬಂದವುಗಳೇ ಎಂಬುದು ತಿಳಿಯು ತ್ತದೆ. ಉದಾಹರಣೆಗೆ ಪೋಲಿಯೊ, ಸೊಂಕು, ಕಾಮಾಲೆ, ಆಮಶಂಕೆ, ಕಾಲರಾ, ಟೈಫಾಯಿಡ್, ಕರುಳಿನಲ್ಲಿ ಜೀವಿಸುವ ಪರಾನ್ನ ಜೀವಿ ಇತ್ಯಾದಿ ತೊಂದರೆಗಳು ಆಹಾರ ಮಲ ಕಶ್ಮಲತೆಯ ಕೂಸುಗಳೇ. ಮುಂದುವರೆದ ಪಾಶ್ಚಾತ್ಯ ದೇಶಗಳಲ್ಲಿ ಈ ರೋಗಗಳು ನೋಡಲೂ ಸಿಗಲಾರವು. ಅಂದರೆ ಅಲ್ಲಿ ಆಹಾರ ಮಲ ಕಶ್ಮಲತೆ ಇಲ್ಲವೇ ಇಲ್ಲವೆಂದು ಹೇಳ ಬಹುದು. ಮೇಲೆ ಹೆಸರಿಸಿದ ಯಾವುದೇ ಒಂದು ರೋಗ ಕಂಡಿತೆಂದರೆ ಸಾಕು ಆ ವ್ಯಕ್ತಿ ಮಲ ಕಶ್ಮಲ ಆಹಾರ ಸೇವಿ ಸಿರುವನೆಂದೇ ಅರ್ಥ. ಅದು ಅದರ ಪ್ರಮಾಣಪತ್ರ.

ಕಾರಣ ಈ ರೋಗಗಳೆಲ್ಲ ಹಾಗೂ ಜಠರ ಹುಣ್ಣು ಮಾಯವಾಗಬೇಕೆಂದರೆ ನಮ್ಮ ಆಹಾರ ಶುಚಿಯಾಗಿರಬೇಕು. ಅದನ್ನು ಶುಚಿಯಾಗಿ ಸೇವಿಸಬೇಕು. ಇದನ್ನು ಸಾಧಿಸುವ ಸಾಹಸ ನಮ್ಮದಾಗ ಬೇಕು. ಆಗ ಮಾತ್ರ ನಾವು ಜಠರ ಹುಣ್ಣಿನ ಸಾವನ್ನು ಕಾಣುತ್ತೇವೆ. ಈ ತೊಂದರೆ ಯನ್ನು ಜಗತ್ತಿನಿಂದಲೇ ನಿರ್ಮೂಲ ಮಾಡಲು ಸಾಧ್ಯ.

ಯೌವನ ಒಂದು ತಪ್ಪು. ಮಧ್ಯಮ ವಯಸ್ಸು ಹೋರಾಟದ್ದು. ಮುಪ್ಪು ಪಶ್ಚಾತ್ತಾಪದ್ದು.

—ಡಿಸರೆಲಿ

ಮನವಿದ್ದಲ್ಲಿ ಮಾರ್ಗ ಮತ್ತು ಸ್ವರ್ಗ

ಸರಸ್ವತಿ ಬಡೆಕ್ಕಿಲ
ಎಂ.ಐ.ಜಿ. ೩, ೧೦ ನೇ ಕ್ರಾಸ್
೨ ನೇ ಮೇನ್, ಶಾರದಾದೇವಿ ನಗರ
ಮೈಸೂರು—೫೭೦೦೨೩

ಕವಲುದಾರಿಯ ಮುಂದೆ ನೀ ಬಂದು ನಿಂದು
ಗುರಿ ಯಾವುದೆಂದು ಮುಂಗಾಣದಿರೆ ನೊಂದು
ಮನದ ಪೊರೆ ಪೊರೆಯೊಳುರಿಯೆದ್ದು ಭುಗಿಲಿಡಲು
ನಿನಗೇ ನೀನೇ, ಗೆಳೆಯ, ನಿನಗೆ ನೀನೇ!

ಗೋಪಾಲಕೃಷ್ಣ ಅಡಿಗ

ಆಗ ಹೇಮಂತಕಾಲ. ಅಂದು ಮುಂಜಾನೆ ಚಳಿ ಭೀಕರವಾಗಿತ್ತು. ಎತ್ತರದ ಗುಡ್ಡದ ತುದಿಯಲ್ಲಿದೆ ನಮ್ಮ ಮನೆ. ಕಣಿವೆಯಾಚೆಯಿಂದ ಸೂರ್ಯಕಿರಣ ನಮ್ಮ ಅಂಗಳಕ್ಕಿನ್ನೂ ತಲುಪಿರಲಿಲ್ಲ. ಕೊರೆವ ಕುಳಿರ್ಗಾಳಿ ನನ್ನ ಧೃತಿ ಕೆಡಿಸಿತ್ತು. ಒಂದು ದುರ್ಬಲ ಕ್ಷಣ ಯೋಚಿಸಿದೆ—ಮೈನಡಗುವ ಈ ಚಳಿಯಲ್ಲಿ ಹೊರಗೆ ಹೋಗುವುದೋ? ಬೇಡವೋ? ನನ್ನ ದಿನಚರ್ಯೆಯ ನಿಯಮ ಮುರಿಯಲೇ? ಒಣಗಿದ ಮರ, ಹುಲ್ಲುಗಳನ್ನು ಕತ್ತರಿಸುವುದು ನನ್ನ ನಿತ್ಯದ ಕೆಲಸ. ಅನುದಿನದ ಈ ಅಭ್ಯಾಸದ ಜತೆ ಬೆಳೆದುಬಂದ ಹಠವಾದಿ ಮನಸ್ಸು! ಮುಂದಿನ ಕ್ಷಣದಲ್ಲಿ ಕಾಲುಗಳು ಎಂದಿನಂತೆ ಪರಿಚಿತವಾದ ದಾರಿಯಲ್ಲಿ ನನ್ನನ್ನು ನಡೆಯಿಸಿಬಿಟ್ಟಿದ್ದುವು-

ಆದರೆ ಕಾಲ್ದಾರಿ ಎಂದಿನಂತಿರಲಿಲ್ಲ. ಹೊಸತಾಗಿ ಬಿದ್ದ ಹಿಮಧೂಳಿನಿಂದ ಮುಚ್ಚಿಹೋಗಿತ್ತು. ಎಚ್ಚರದಿಂದ ಕಾಲಿಡಬೇಕೆಂದು ಯೋಚಿಸುವಷ್ಟರೊಳಗೆಯೇ ಕೆಲಸ ಕೆಟ್ಟಿತ್ತು. ಕಾಲ್ದಾರಿ ಹಿಂದಕ್ಕೆ ಅಂಗಾತ ಬಿದ್ದುಬಿಟ್ಟಿದ್ದೆ. ಬೆನ್ನು ಸೊಂಟ ತೊಡೆಗಳಲ್ಲಿ ಅಲಗಿನಂತೆ ನೋವು ನುಗ್ಗಿಬಿಟ್ಟಿತ್ತು.

ಮುಂದೆ, ಆಸ್ಪತ್ರೆಯ ಹಾಸಿಗೆಯಲ್ಲಿ ನನ್ನನ್ನು ಪ್ರತಿಷ್ಠಾಪಿಸಲಾಯಿತು. ಕಾಲುಗಳನ್ನು ಸ್ವಸ್ಥಾನಕ್ಕೆ ಸೇರಿಸಲು ಮರಳಿನ ಚೀಲಗಳನ್ನು ಕಾಲಿಗೆ ಕಟ್ಟಿ ಜೋತಾಡಿಸಿದ್ದರು. ಹಲವು ದಿನಗಳ ಚಿಕಿತ್ಸೆ ನಡೆಯಿತು. ಅಷ್ಟಾದಾಗ ಒಂದು ದಿನ ಇದ್ದಕ್ಕಿದ್ದಂತೆ, ಝಕ್ಕನೆ ಮಿಂಚುಹೊಡೆದಂತೆ ಭಯದಲ್ಲಿ ಮುಳುಗಿ ಹೋದೆ. ಶರೀರ ದೌರ್ಬಲ್ಯದಿಂದ

ರೀಡರ್ಸ್ ಡೈಜೆಸ್ಟ್ ಮಾಸಪತ್ರಿಕೆಯಲ್ಲಿ ಪ್ರಕಟವಾದ ಪೆಂಡಲ್‌ಟನ್ ಡಡ್ಲಿ ಅವರ ಮೇಕಿಂಗ್ ದಿ ಮೋಸ್ಟ್ ಆಫ್ ಯುವರ್ ಲೈಫ್ ಪುಸ್ತಕದ "ಗೀವ್ ಯುವರ್ ಮೈಂಡ್ ಎ ಚಾನ್ಸ್" ಎಂಬ ಲೇಖನದ ಅನುವಾದ.

ಚಲಿಸಲಾಗದೆ ಇಲ್ಲೇ ಬಿದ್ದಿರುವೆನಲ್ಲಾ ! ಆಲಸಿಯಾಗಿ ಒಂದು ದಿನವೂ ಸುಮ್ಮನೆ ಕಳೆದವನಲ್ಲ ನಾನು. ಸೋಮಾರಿತನವೆಂದ ರೇನೇ ನನಗಾಗದು. ಸದಾ ಒಂದಲ್ಲ ಒಂದು ಕೆಲಸ ಮಾಡುತ್ತಿರುವುದೇ ನನ್ನ ಅಭ್ಯಾಸ. ಇಲ್ಲಿ ಮಲಗಿ ಯುಗವೇ ಕಳೆಯಿತೇನೋ ! ಇಲ್ಲಿಯ ನಿತ್ಯ ಕರ್ಮಗಳೂ ನನಗೆ ಹಿಡಿಸು ವಂಥದ್ದಲ್ಲ. ಆಸ್ಪತ್ರೆಯಲ್ಲಿ ರಾತ್ರಿಯ ಊಟ ಬಹಳ ಬೇಗನೆ. ರಾತ್ರಿ ಮಲಗುವುದೂ ಬೇಗನೆ. ಇಂಥ ಅಭ್ಯಾಸವಿಲ್ಲದ ನನಗೆ ಮಧ್ಯರಾತ್ರಿ ಕಳೆಯುವಷ್ಟರಲ್ಲಿ ಎಚ್ಚರಾಗಿ ಬಿಡುವುದು. ಮತ್ತೆ ಮುಂಬೆಳಗಿನವರೆಗೂ ನಿದ್ದೆ ಹತ್ತಿರ ಸುಳಿಯದು. ಸುತ್ತಲಿನವರೆಲ್ಲ ಅವರವರ ಕಕ್ಷೆಯೊಳಗೆ ಸುಖನಿದ್ದೆಯಲ್ಲಿ ಮುಳುಗಿರುವಾಗ ನಾನಿಲ್ಲಿ ರಾತ್ರಿ ಪಕ್ಷಿಯಂತೆ ಬಿಡುಗಣ್ಣಿನಿಂದ ಚಡಪಡಿಸುತ್ತಿರಬೇಕು. ಅತ್ತ ಮಲಗಿರಲೂ ಒಗ್ಗದೆ, ಇತ್ತ ಓದುತ್ತಿರೋಣವೆಂದರೆ ದೀಪದ ಸ್ವಿಚ್ ಹಾಕುವುದೂ ಸರಿಯೆನಿಸದೆ ಒದ್ದಾಡ ತೊಡಗಿದೆ. ತಳಮಳಿಸುತ್ತಿದ್ದ ನನ್ನ ಅಸಂತುಷ್ಟ ಮನವನ್ನು ರಂಜಿಸಲು, ಅಥವಾ ಜ್ಞಾನ ಸಂಪಾದಿಸಲು ನನ್ನ ಅಂತರಂಗವನ್ನೇ ಶೋಧಿಸುವ ಅನಿವಾರ್ಯತೆ ಒದಗಿ ಬಂತು.

ರಾತ್ರಿಯ ಜಾಗರಣೆಯನ್ನು ನನ್ನ ಸತ್ವ ಪರೀಕ್ಷೆಯಂತೆ, ಒಂದು ಪಂಥಾಹ್ವಾನದಂತೆ ಯಾವಾಗ ಸ್ವೀಕರಿಸಿಕೊಂಡೆನೋ ನೆನಪಾಗು ತ್ತಿಲ್ಲ. ಹಗಲಿನ ಓದುವಿಕೆಯಲ್ಲಿ—ಎಂದರೆ, ಹಗಲು ಸಿಗುತ್ತಿದ್ದ ಕಾಲಾವಕಾಶದಲ್ಲಿ ಎಲ್ಲ ತರದ ಪುಸ್ತಕಗಳನ್ನು ಗಬಗಬನೆ ಕಬಳಿಸುವ ಹೊಟ್ಟೆಬಾಕನಂತೆ ಓದಿ ಓದಿ ರಾಶಿಯೊಟ್ಟು ತ್ತಿದ್ದೆ. ಹೀಗೆ ಓದುತ್ತಿದ್ದಾಗ, ತತ್ವಜ್ಞಾನಿ ವಿಲಿಯಮ್ ಜೇಮ್ಸ್‌ರ ಒಂದು ವಾಕ್ಯ ಸರಣಿ ನನ್ನ ಕುತೂಹಲವನ್ನು ಕೆರಳಿಸಿತು. ಮನುಷ್ಯನ ಬುದ್ಧಿಕೌಶಲ್ಯದ ವಿಚಾರವಾಗಿ ಜೇಮ್ಸ್ ಬರೆದಿದ್ದರು—ನಿಜಸಂಗತಿಯೆಂದರೆ 'ನಾವು ಏನಾಗಿರಬೇಕಿತ್ತೋ ಅದರ ಅರ್ಧಾಂಶದಷ್ಟು ಮಾತ್ರ ಎಚ್ಚೆತ್ತಿದ್ದೇವೆ. ಅರ್ಥಾತ್ ನಾವಿಂದು ಉಪಯೋಗಿಸುತ್ತಿರು ವುದು ನಮ್ಮ ಬುದ್ಧಿಬಲದ ಅರ್ಧದಷ್ಟು ಮಾತ್ರ!'—ನನ್ನ ಎದೆಯೊಳಗೆ ಪ್ರಕಾಶಮಾನ ಸೆಳೆಮಿಂಚು ಝಲ್ಲೆಂದು ನುಗ್ಗಿ ನರನಾಡಿ ಗಳು ಝೇಂಕರಿಸಿದುವು ! ಆಗಲೇ ಸಂಕಲ್ಪ ಮಾಡಿಕೊಂಡೆ—ನನ್ನ ಮನಸ್ಸಿಗೊಂದಿಷ್ಟು ಅವಕಾಶ ನೀಡಬೇಕು, ಅದರ ಸಾಮರ್ಥ್ಯ ವೆಷ್ಟಿದೆಯೆಂದು ಪರೀಕ್ಷಿಸಬೇಕು.

ಅಂದೇ ರಾತ್ರಿ ಆ ಅರೆಗತ್ತಲ ಕೋಣೆ ಯಲ್ಲಿ ಅಕ್ಕಪಕ್ಕದ ಸಹವಾಸಿಗಳ ಸುಖವಾದ ಗೊರಕೆಯ ಲಯಬದ್ಧ ಏರಿಳಿತದ ಉಸಿರನ್ನಾಲಿಸುತ್ತಾ ನನ್ನ ಪ್ರಪ್ರಥಮ ಪ್ರಯೋಗ ಪ್ರಾರಂಭಿಸಿದೆ. ಅಂದು ಮೊದಲ್ಗೊಂಡು ಪ್ರತಿ ಬಾರಿಯೂ ನನ್ನ ಆತ್ಮಶೋಧ ಫಲಕಾರಿಯಾಯಿತು.

ಹಲವುಕಾಲ ವ್ಯಾಪಾರ—ವಹಿವಾಟಿನ ಲ್ಲಿದ್ದ ನಾನು ದೂರವಾಣಿಗೆ ಅತಿಯಾಗಿ ಅಂಟಿಕೊಂಡಿದ್ದೆ. ಆ ಸಲಕರಣೆ ಕೆಟ್ಟು ಹೋದರೆ, ಅಥವಾ ಸಂಭಾಷಣೆಯಲ್ಲಿ ಅಡಚಣೆಯಾದರೆ ಪೀಡೆಗೊಳಗಾಗುತ್ತಿದ್ದೆ. ದೂರವಾಣಿ ಯಂತ್ರ ಕೆಡಲು, ನಯ ನಾಜೂಕಿಲ್ಲದೆ, ಒರಟಾಗಿ ಅದನ್ನು ಬಳಸಿ ಕೊಳ್ಳುತ್ತಿದ್ದುದೇ ಮುಖ್ಯ ಕಾರಣವಾಗಿರು ತ್ತಿತ್ತು. ಆದರೆ ಈಗ ಆಸ್ಪತ್ರೆಯ ಮಂಚದಲ್ಲಿ ಮಲಗಿರುವಾಗ, ಅದೊಂದೇ ನನಗುಳಿದ ಸಂಪರ್ಕ ಸಾಧನ. ನನ್ನ ಕಛೇರಿಯ ಸಿಬ್ಬಂದಿಯವರೊಂದಿಗೆ ವ್ಯವಹರಿಸಲು,

ಎಲ್ಲೆಲ್ಲೋ ನೆಲೆಸಿರುವ ನನ್ನ ಮನೆ ಮಂದಿಯೊಡನೆ, ಸಂಬಂಧಿಕರೊಡನೆ ಮಾತುಕತೆಯಾಡಲು, ಎಲ್ಲದಕ್ಕೂ ದೂರವಾಣಿಯೊಂದೇ ನನ್ನ ಏಕೈಕ ಮಿತ್ರನೆಂಬ ಅರಿವು ಮೂಡಿಬಂತು.

ನನ್ನ ಸೊಂಟಕ್ಕೆ ಏಟು ಬೀಳುವ ಮುನ್ನಾದಿನವಷ್ಟೆ, ಸಾರ್ವಜನಿಕ ಸಂಬಂಧಗಳ ಸುಧಾರಣೆಗಾಗಿ ಹೊಸತೊಂದು ಕಾರ್ಯ ವಿಧಾನವನ್ನು ರೂಪಿಸಿಕೊಂಡು ದುಡಿಯಲು ಪ್ರಾರಂಭಿಸಿದ್ದೆ. ಆ ಬಳಿಕ ಆಸ್ಪತ್ರೆ ಸೇರಿದಂದಿನಿಂದ ಕಛೇರಿಯ ಸಂಬಂಧ ಪೂರ್ಣವಾಗಿ ಕಡಿದುಹೋಗಿತ್ತು. ಸ್ವಲ್ಪ ಚೈತನ್ಯ ಕೂಡಿಬಂತೆಂದು, ನಿನ್ನೆ ಅಲ್ಲಿಯ ಕಾರ್ಯಕಲಾಪಗಳನ್ನು ವಿಚಾರಿಸತೊಡಗಿದೆ. ಕಛೇರಿಯ ಸಹಕಾರ್ಯದರ್ಶಿಗೆ ದೂರವಾಣಿಯಲ್ಲಿ ನಾನಾಡಿದ ಮಾತುಗಳು ಅರ್ಥವಾದಂತೆ ತೋರಲಿಲ್ಲ. ಗಲಿಬಿಲಿಗೊಂಡವನಂತೆ ಅದೇ ಮಾತುಗಳನ್ನು ಪುನಃ ಹೇಳಲು ಕೇಳಿಕೊಂಡ. ಎಲ್ಲ ವಿಷಯಗಳನ್ನು ಮತ್ತೊಮ್ಮೆ, ಮಗುದೊಮ್ಮೆ, ವಿವರವಾಗಿ ಆಲಿಸಿಕೊಂಡ ಮೇಲೆಯೂ ಪ್ರಯೋಜನವಾದಂತೆ ನನಗನಿಸಲಿಲ್ಲ. ಅವನೊಬ್ಬ ಮೂರ್ಖನೆಂಬ ತೀರ್ಮಾನಕ್ಕೆ ಬಂದಿದ್ದೆ ನಾನು.

ಆದರೆ ಇಂದು ರಾತ್ರಿ ಸಂಪೂರ್ಣ ತತ್ಪರತೆಯಿಂದ ನನ್ನ ಆ ಸಂಭಾಷಣೆಯ ಒಂದೊಂದೇ ಎಳೆಯನ್ನು ಬಿಡಿಸಿದಾಗ ಫಳ್ಳನೆ ಮಿಂಚಿದ ವಸ್ತುಸ್ಥಿತಿಯಿಂದ ಪಾತಾಳಕ್ಕೇ ಇಳಿದುಹೋದೆ.

ನನ್ನ ವಾಗ್ವಿಲಾಸಕ್ಕೆ ನಾನೇ ನಾಚಿಕೊಂಡೆ! ಆ ಕಗ್ಗತ್ತಲ ರಾತ್ರಿಯಲ್ಲೂ ನನ್ನ ಮುಖದ ಬಣ್ಣ ಬದಲಾದಂತೆನಿಸಿತು. ಯಾವುದೇ ಶಿಸ್ತಿಲ್ಲದ, ಅವಸರದ ನನ್ನ ಮಾತುಗಾರಿಕೆ, ನಿರ್ಲಕ್ಷ್ಯ ದಬ್ಬಾಳಿಕೆಯ ದರ್ಪವನ್ನು ಬಿಂಬಿಸುವ ನನ್ನ ಧ್ವನಿ ಎಲ್ಲವೂ ನನ್ನಮನಃಪಟದಮೇಲೆ ಹಾದುಹೋದುವು. ಅದಕ್ಕೆ ಮೆರುಗೇರುವಂತೆ ಫೋನಿನಲ್ಲಿ ಕೇಳಿ ಬರುತ್ತಿದ್ದ ಕಿರಿಕಿರಿ ಶಬ್ದ ಸಂಚಾರ! ಎಂಥ ಆತ್ಮೀಯ ಗೆಳೆಯನೂ ಕೂಡ ನನ್ನ ನಿರ್ಮಮ, ನಿರಾಸಕ್ತ ಭಾವವನ್ನು ಗುರುತಿಸಿಬಿಡಬಹುದಿತ್ತು. ಆ ಘಟನೆಯ ಶಬ್ದ ಚಿತ್ರವನ್ನು ಗಮನಿಸುತ್ತಾ, ನಾಯಿಯೊಂದು ಮೂಸುತ್ತಾ ಗುರುತು ಹಿಡಿವ ರೀತಿಯಲ್ಲಿ ನನ್ನ ಮನಸ್ಸು ಆ ದಿನ ಕಳೆದು ಹೋದ ಕ್ಷಣಗಳ, ಘಳಿಗೆಗಳ, ಎಲ್ಲ ದೂರವಾಣಿ ಸಂಭಾಷಣೆಗಳ ಹಿಂದೆ, ಮುಂದೆ ಒಳಹೊರಗೆಲ್ಲ ಸುಳಿದಾಡಿತು ಅವುಗಳಲ್ಲಾಗಿ ಹೋದ ತಪ್ಪುಗಳನ್ನು ಗುರುತಿಸುತ್ತಾ ಮತ್ತಿನ್ನು ಹೇಗಿರಬೇಕಾಗಿತ್ತು, ಏನೆಂದು ಉತ್ತರಿಸಿದ್ದರೆ ಚೆನ್ನಿತ್ತು, ಎಲ್ಲವನ್ನು ಪುನಾರಚಿಸತೊಡಗಿದೆ–ಧ್ವನಿ ಹೇಗಿರಬೇಕು, ವಾಕ್ಯಸರಣಿ ಹೇಗಿರಬೇಕು, ನುಡಿಗಟ್ಟುಗಳ ಬಳಕೆ ಎಲ್ಲೆಲ್ಲಿ ಯಾವಾಗ, ಎಂದೆಲ್ಲ ಯೋಚಿಸುತ್ತಾ ಮತ್ತೆ ಮತ್ತೆ ಮೆಲುಕು ಹಾಕಿದಾಗ ನನಗೇ ಆಶ್ಚರ್ಯವಾಗಿತ್ತು. ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ವಿಧಾನಗಳು ಸಮರ್ಪಕವಾಗಿ ರೂಪುಗೊಳ್ಳತೊಡಗಿದ್ದುವು. ಒಮ್ಮೆ ಈ ರೀತಿ ಎಚ್ಚೆತ್ತುಕೊಂಡಮೇಲೆ ನಾನು ಟೆಲಿಫೋನ್ ಮೂಲಕ ನಡೆಸುತ್ತಿದ್ದ ವ್ಯವಹಾರಗಳು ಅಭಿವೃದ್ಧಿ ಹೊಂದಿದವೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಈ ಪ್ರಕಾರ ಯಶಸ್ಸು ದೊರಕಿದ ಮೇಲೆಯೇ ಇರಬೇಕು,–ಇಂಥ ನಿದ್ದೆ ಬಾರದ ಅಪರರಾತ್ರಿಯ ಏಕಾಂತದ ಚಿಂತನೆಯನ್ನು ಜೀವನದ ಇತರ ಸಮಸ್ಯೆಗಳಿಗೆ, ಮುಖ್ಯವಾಗಿ ನನ್ನ ವೈಯಕ್ತಿಕ ಜೀವನದ ಅಧ್ಯಯನಗಳಿಗೆ ವಿಸ್ತರಿಸಿದರೆ ಹಲವು ವಿಧದಲ್ಲಿ ಉತ್ತಮ ಫಲಿತಾಂಶ ದೊರಕಬಹುದೆಂಬ ವಿಶ್ವಾಸ ಮೂಡತೊಡಗಿತು.

ಮಾಡಲು ಕೆಲಸವೂ ಇಲ್ಲದೆ, ನಿದ್ದೆಯೂ ಬಾರದೆ ! ಹೇಗೆ ಕಾಲಹರಣ ಮಾಡಲಿ ?' ಎಂದು ಚಿಂತಿಸುತ್ತಿದ್ದ ನಾನು ಹಠಾತ್ತನೆ ಬದಲಾಗಿ ಹೋದೆ. ನಾನು ಏನೇನೆಲ್ಲ ಸಾಧಿಸಿ ಜಯಿಸಬೇಕೆಂದು ಹಂಬಲಿಸಿದ್ದೆನೋ ಅವುಗಳಿಗಾಗಿ ಈ ರಾತ್ರಿ ಕಾಲದ ಏಕಾಂತಕ್ಕೆ ಇನಿತೂ ಭಂಗವಿಲ್ಲದ, ಪೂರ್ಣ ಬಿಡುವಿನ ಕಾಲಾವಕಾಶದ, ಉಪಯೋಗ ಮಾಡಿಕೊಂಡೆನಲ್ಲದೆ ಆ ಕಾಲಾವಧಿ ಇನ್ನಷ್ಟು ದೀರ್ಘವಾಗಿದ್ದರೆ ಚೆನ್ನ ಎಂದೆನಿಸತೊಡಗಿತ್ತು.

ನನ್ನ ಆಸ್ಪತ್ರೆವಾಸ ಅಂತ್ಯಗೊಂಡು ಮನೆಗೆ ಬಂದೆ. ಶರೀರ ಸ್ಥಿತಿಯನ್ನು ಸುಧಾರಿಸುವ ಯತ್ನವಾಗಿ ಒಂದು ಕ್ರಮಬದ್ಧ ವೇಳಾಪಟ್ಟಿಯನ್ನು ನಿರ್ಮಿಸಿಕೊಂಡೆ. ಆದರೆ ನನ್ನ ಏಕಾಗ್ರ ಚಿಂತನೆಗೆ ಕಾಲಾವಕಾಶ ಒದಗಿಸುವುದೂ ಇದರ ಮುಖ್ಯ ಉದ್ದೇಶವಾಗಿತ್ತು. ಹಗಲೆಲ್ಲ, ಹೂದೋಟದಲ್ಲಿ ಕುಳಿತು ಓದುತ್ತಲೋ, ವಸಂತದ ಮೊದಲ ದಿನಗಳ ಪ್ರಾತಃ ಸೂರ್ಯನ ಸುಖೋಷ್ಣ ರಶ್ಮಿಯಲ್ಲಿ ಮುಳುಗಿ ಮೈನೆನೆಯಿಸುವುದರಲ್ಲೋ, ನೋಡಲು ಬರುವ ಗೆಳೆಯರ, ಬಂಧುಗಳ ಜತೆ ಮಾತುಗಳಲ್ಲೋ, ಕಳೆದುಹೋಗುತ್ತಿತ್ತು. ಪ್ರತಿ ರಾತ್ರಿ, ವಿಶೇಷ ಅಡ್ಡಿಯೊದಗದಿದ್ದಲ್ಲಿ ಬೇಗನೆ ಮಲಗಿಬಿಡುತ್ತಿದ್ದೆ. ನಡುರಾತ್ರಿಯವರೆಗೆ ಸುಖವಾಗಿ ನಿದ್ದಿಸುತ್ತಿದ್ದೆ. ರಾತ್ರಿ ಸುಮಾರು ಹನ್ನೆರಡು ಇಲ್ಲವೆ ಒಂದು ಗಂಟೆಯಹೊತ್ತಿಗೆ ಎಚ್ಚರವಾಗುತ್ತಿತ್ತು. ಆಗ ನನ್ನ ಮನೋಬುದ್ಧಿಗಳೆರಡೂ ಪೂರ್ಣ ಜಾಗೃತವಾಗುತ್ತಿದ್ದುವು. ಅನಿರ್ಬಾಧಿತ ನಿಸ್ತಬ್ಧತೆಯ ಏಕಾಂತ ಘಳಿಗೆಗಾಗಿ ಕಾತರದಿಂದ ಕಾಯುತ್ತಿದ್ದೆ.

ಈ ತೆರನಾಗಿ ನಿರಾತಂಕ ಏಕಾಂತದ ಆತ್ಮಾವಲೋಕನೆಯಿಂದ ನನ್ನ ಮನೋಬಲ ವರ್ಧಿಸತೊಡಗಿತ್ತು. ದೂರವಾಣಿಯಲ್ಲಿ ನಡೆಸುವ ವಾರ್ತಾಲಾಪದಿಂದ ಪರಸ್ಪರ ವೈಯಕ್ತಿಕ ಸಂಬಂಧಗಳು ಆತ್ಮೀಯತೆಯ ಬೆಸುಗೆಯನ್ನು ಹೊಸೆಯ ತೊಡಗಿದುವು. ನನ್ನ ಕೌಟುಂಬಿಕರ, ಸ್ನೇಹಿತರ ಸರದಿಯೊಳಗಿನ ವಿಚಾರವಿದು. ಆದರೆ ಬೇರೆ ಕ್ಷೇತ್ರಗಳಲ್ಲಿ ನನ್ನ ವರ್ತನೆಗಳು ಹೇಗಿವೆಯೆಂದು ಒಮ್ಮೆಯಾದರೂ ಯೋಚಿಸಿದ್ದೆನೇ? ನನ್ನ ಕಛೇರಿಯ ಸಹೋದ್ಯೋಗಿಗಳ ಕಡೆಗೆ ಸಾಕಷ್ಟು ಗಮನ ಹರಿಸಿರುವೆನೇ ? ಅವರ ಬಗ್ಗೆ ಇದುವರೆಗೆ ಚಿಂತಿಸಿರುವೆನೇ ? ಈ ಪ್ರಶ್ನೆಗಳ ಚಿಂತನ ಮಂಥನಗಳನ್ನು ಮುಂದಿನ ರಾತ್ರಿಗಳ 'ಸ್ವಾಧ್ಯಾಯ'ದಲ್ಲಿ ನಡೆಸತೊಡಗಿದೆ. ಈ ಪ್ರಶ್ನೋತ್ತರ ಮಾಲೆ ಕೊನೆಗೊಳ್ಳಲು ಒಂದೆರಡು ವಾರಗಳೇ ಬೇಕಾದುವು.

ಎಳೆಯ ತರುಣ 'ಜೋನ್ಸ್' ನನ್ನ ಮನಃಪಟಲದಲ್ಲಿ ಕಾಣಿಸಿಕೊಂಡ. ಇದೇ ಹೇಮಂತದ ಹಿಂದು ಮುಂಜಾನೆ ಆತ ಎಂಥ ಮಹಾನ್ ಕಲ್ಪನೆಯನ್ನು ನನ್ನ ಮುಂದಿರಿ

ಿದ್ದ! ಅವನ ಮಾತಿನಲ್ಲಿ ಎಂಥ ಉತ್ಸಾಹ ಥಿತ್ತು! ಮುಖದಲ್ಲಿ ಉಕ್ಕುತ್ತಿದ್ದ ಆತ್ಮ ವಿಶ್ವಾಸ! ಆದರೆ ನಾನೇನು ಮಾಡಿದ್ದೆ?— "ಈ ಮೊದಲೇ ಪ್ರಯತ್ನಿಸಿ, ಪ್ರಯೋಜನ ಿಲ್ಲ, ಎಂದು ಬಿಟ್ಟುಕೊಟ್ಟ ವಿಚಾರ"— ಎಂದು ಥಟ್ಟನೆ ಹೇಳಿ ತಲೆಕೊಡಹಿ ಅವನ ಸ್ಕಾಚೆಗೆ ಸರಿಸಿಬಿಟ್ಟಿದ್ದೆ.

ಅಂದಿನ ಘಟನೆಯ ಚಿತ್ರವನ್ನು ಮನದ ಮುಂದೆ ತಂದು ನಿಲ್ಲಿಸಿಕೊಂಡೆ. ನನ್ನ ಉತ್ತರದಿಂದ ಯುವಕನ ಕಣ್ಣುಗಳಲ್ಲಿ ತಕ್ಷಣ ನಿರ್ಲಿಪ್ತ ಭಾವ ಕಾಣಿಸಿಕೊಂಡಿತ್ತು. ಮುಖವು ಗಂಭೀರವಾಗಿ ಕಠಿಣಗೊಳ್ಳ ತೊಡಗಿತ್ತು. ಅವನು ಮಾಡಿದ ಪ್ರಸ್ತಾಪದಲ್ಲಿ ಖಂಡಿತವಾಗಿ ಏನೋ ಹುರುಳು ಇದ್ದಿರ ಬಹುದು ಅದನ್ನು ಸಮರ್ಪಕ ರೀತಿಯಲ್ಲಿ ತಿದ್ದಿಕೊಂಡು ಪ್ರಸ್ತುತಪಡಿಸಿದ್ದರೆ, ಪ್ರಯೋಜನವಾಗಬಲ್ಲ ಒಂದು ಅತ್ಯುತ್ತಮ ನಿಕ್ ಸೂಚಿಯಾಗುತ್ತಿರಲಿಲ್ಲವೇ? ಕೇವಲ ಒಂದು ಬಾರಿ ಅದರ ಪ್ರಯೋಗ ಮಾಡಿ ನೋಡಿದ್ದರೆ ನನಗೆ ಯಾವ ನಷ್ಟವಾಗು ತ್ತಿತ್ತು? ಛೆ!

ಈ ಯೋಚನೆ ಬಂದುದೇ ತಡವಾಗಿ! ಮತ್ತೊಂದು ಕ್ಷಣವೂ ತಡಮಾಡಬಾರದು! ೆಳಗಾಗುವತನಕ ಕಾಯಲು ನನ್ನಿಂದ ಸಾಧ್ಯ! ಕೂಡಲೇ ಜೋನ್ಸ್‌ನ ಕಲ್ಪನೆಯು ಣಾಲಿಯನ್ನು "ಮಂಜೂರು ಮಾಡಿ ರ್ಯಗತಗೊಳಿಸಬೇಕೆಂದು" ಕಛೇರಿಗೆ ದೇಶ ನೀಡಿದೆ. (ನಿರೀಕ್ಷೆ ಮೀರಿ ಯೋಜನೆ ಸಫಲವಾಯಿತು ಕೂಡ!)

ಇದುವರೆಗೂ ನಾನು ಕೈಗೊಳ್ಳುತ್ತಿದ್ದ ರ್ಧಾರಗಳು ತಕ್ಷಣದಲ್ಲೇ ಕಾರ್ಯರೂಪ ಕ್ಕಿಳಿಸುತ್ತಿದ್ದ ವೈಖರಿಗಳು, ಕೇವಲ ನನ್ನ ಮನಸ್ಸಿನ ಮೇಲ್ಪದರದ ಆಲೋಚನೆಗಳ ಫಲಸ್ವರೂಪಗಳಿಂದೂ, ಆ ರೀತಿಯ ವರ್ತನೆ ನನಗೆ ಅಭ್ಯಾಸವಾಗಿಬಿಟ್ಟುದಲ್ಲದೆ ಅದೇ ನನ್ನ ಸ್ವಭಾವ ಎಂಬಷ್ಟು ನನ್ನಲ್ಲಿ ಸೇರಿಹೋಗಿರು ವುದು ಸ್ಪಷ್ಟವಾಯಿತು.

ಎಂದಿನಂತೆ ಓದುತ್ತಿದ್ದಾಗ 'ಮಾಯ್ಯರ್ ಲಿಂಕ್' ಎಂಬ ತತ್ವಜ್ಞಾನಿಯ ವಾಕ್ಯ ವೊಂದು ನನ್ನನ್ನು ಚಕಿತಗೊಳಿಸಿತು. ಅತ್ಯಂತ ಸರಳ ಶಬ್ದಗಳಲ್ಲಿ ಆತ ಬರೆದಿದ್ದ— "ನನ್ನೊಳಗೆ ನಾನು ತಿಳಿದುಕೊಳ್ಳ ಬೇಕಾದ್ದು ಇನ್ನೂ ತುಂಬಾ ಇದೆ"— ಇದೊಂದು ಪಂಥಾಹ್ವಾನವೀಯುವಂಥ ಆಲೋಚನೆಯೆಂದು ನನಗನಿಸಿತು. ಇನ್ನೊಂದು, ಆ ಸಿದ್ಧಾಂತವನ್ನು ಅನುದಿನದ ಕಾರ್ಯಕಲಾಪಗಳಲ್ಲಿ ಅಳವಡಿಸಿದಾಗ ಉಂಟಾಗುವ ಪ್ರಯೋಜನಗಳು—ಇವೆರಡೂ ಅತ್ಯಾಶ್ಚರ್ಯಕರವಾಗಿದ್ದುವು. ವರ್ಷಗಳು ರುಳಿದಂತೆಲ್ಲ, ಮನಸ್ಸು ಹೆಚ್ಚು ಹೆಚ್ಚು ವಿಸ್ತೃತಗೊಳ್ಳುವುದು ಅನುಭವವೇದ್ಯವಾಗು ವುದು. ಆದರೆ ಅದಕ್ಕೆ ಆಳ ಚಿಂತನೆಯ ಅಭ್ಯಾಸ ಮಾಡಬೇಕಾಗುವುದು, ಚಿಂತನೆ ಮಾಡಲು ಕಲಿಯಬೇಕಾಗುವುದು. ಇಂಥ ಪ್ರಾಮಾಣಿಕ ಪ್ರಯತ್ನದಿಂದ ಮಾತ್ರ ಮನಸ್ಸಿನ ಉದ್ದಗಲ ಆಳಗಳು ಅನುಭವಕ್ಕೆ ಬರಬೇಕಷ್ಟೆ. ಈಗೀಗ ಅಪಘಾತವಾದುದು— ನನ್ನ ಸೌಭಾಗ್ಯವೆಂದೇ ಭಾವಿಸತೊಡಗಿದ್ದೆ.

ಅಲ್ಲಿಂದೀಚೆಗೆ ನನ್ನ ಓದುವಿಕೆ ದಿನೇ ದಿನೇ ಹೆಚ್ಚು ಹೆಚ್ಚು ವಿಸ್ತಾರವಾಗ ತೊಡಗಿತು. ಓದುತ್ತಾ ಹೋದಂತೆ ನನಗೂ ಮೊದಲೇ ಹಲವರು ನನ್ನಂತೆ ಈ ಮಹಾ

ಈ ಪ್ರಕಾರ ಯಶಸ್ಸು ದೊರಕಿದ ಮೇಲೆಯೇ ಇರಬೇಕು,–ಇಂಥ ನಿದ್ದೆ ಬಾರದ ಅಪರರಾತ್ರಿಯ ಏಕಾಂತದ ಚಿಂತನೆಯನ್ನು ಜೀವನದ ಇತರ ಸಮಸ್ಯೆಗಳಿಗೆ, ಮುಖ್ಯವಾಗಿ ನನ್ನ ವೈಯಕ್ತಿಕ ಜೀವನದ ಅಧ್ಯಯನಗಳಿಗೆ ವಿಸ್ತರಿಸಿದರೆ ಹಲವು ವಿಧದಲ್ಲಿ ಉತ್ತಮ ಫಲಿತಾಂಶ ದೊರಕಬಹುದೆಂಬ ವಿಶ್ವಾಸ ಮೂಡತೊಡಗಿತು.

ಮಾಡಲು ಕೆಲಸವೂ ಇಲ್ಲದೆ, ನಿದ್ದೆಯೂ ಬಾರದೆ! ಹೇಗೆ ಕಾಲಹರಣ ಮಾಡಲಿ?' ಎಂದು ಚಿಂತಿಸುತ್ತಿದ್ದ ನಾನು ಹಠಾತ್ತನೆ ಬದಲಾಗಿ ಹೋದೆ. ನಾನು ಏನೇನೆಲ್ಲ ಸಾಧಿಸಿ ಜಯಿಸಬೇಕೆಂದು ಹಂಬಲಿಸಿದ್ದೆನೋ ಅವುಗಳಿಗಾಗಿ ಈ ರಾತ್ರಿ ಕಾಲದ ಏಕಾಂತಕ್ಕೆ ಇನಿತೂ ಭಂಗವಿಲ್ಲದ, ಪೂರ್ಣ ಬಿಡುವಿನ ಕಾಲಾವಕಾಶದ, ಉಪಯೋಗ ಮಾಡಿಕೊಂಡೆನಲ್ಲದೆ ಆ ಕಾಲಾವಧಿ ಇನ್ನಷ್ಟು ದೀರ್ಘವಾಗಿದ್ದರೆ ಚೆನ್ನ ಎಂದೆನಿಸತೊಡಗಿತ್ತು.

ನನ್ನ ಆಸ್ಪತ್ರೆವಾಸ ಅಂತ್ಯಗೊಂಡು ಮನೆಗೆ ಬಂದೆ. ಶರೀರ ಸ್ಥಿತಿಯನ್ನು ಸುಧಾರಿಸುವ ಯತ್ನವಾಗಿ ಒಂದು ಕ್ರಮಬದ್ಧ ವೇಳಾಪಟ್ಟಿಯನ್ನು ನಿರ್ಮಿಸಿಕೊಂಡೆ. ಆದರೆ ನನ್ನ ಏಕಾಗ್ರ ಚಿಂತನೆಗೆ ಕಾಲಾವಕಾಶ ಒದಗಿಸುವುದೂ ಇದರ ಮುಖ್ಯ ಉದ್ದೇಶವಾಗಿತ್ತು. ಹಗಲೆಲ್ಲ, ಹೂದೋಟದಲ್ಲಿ ಕುಳಿತು ಓದುತ್ತಲೋ, ವಸಂತದ ಮೊದಲ ದಿನಗಳ ಪ್ರಾತಃ ಸೂರ್ಯನ ಸುಖೋಷ್ಣ ರಶ್ಮಿಯಲ್ಲಿ ಮುಳುಗಿ ಮೈನೆನೆಯಿಸುವುದರಲ್ಲೋ, ನೋಡಲು ಬರುವ ಗೆಳೆಯರ, ಬಂಧುಗಳ ಜತೆ ಮಾತುಗಳಲ್ಲೋ, ಕಳೆದುಹೋಗುತ್ತಿತ್ತು. ಪ್ರತಿ ರಾತ್ರಿ, ವಿಶೇಷ ಅಡ್ಡಿಯೊದಗದಿದ್ದಲ್ಲಿ ಬೇಗನೆ ಮಲಗಿಬಿಡುತ್ತಿದ್ದೆ. ನಡುರಾತ್ರಿಯವರೆಗೆ ಸುಖವಾಗಿ ನಿದ್ದಿಸುತ್ತಿದ್ದೆ. ರಾತ್ರಿ ಸುಮಾರು ಹನ್ನೆರಡು ಇಲ್ಲವೆ ಒಂದು ಗಂಟೆಯಹೊತ್ತಿಗೆ ಎಚ್ಚರವಾಗುತ್ತಿತ್ತು. ಆಗ ನನ್ನ ಮನೋಬುದ್ಧಿಗಳೆರಡೂ ಪೂರ್ಣ ಜಾಗೃತವಾಗುತ್ತಿದ್ದುವು. ಅನಿರ್ಬಾಧಿತ ನಿಸ್ತಬ್ಧತೆಯ ಏಕಾಂತ ಘಳಿಗೆಗಾಗಿ ಕಾತರದಿಂದ ಕಾಯುತ್ತಿದ್ದೆ.

ಈ ತೆರನಾಗಿ ನಿರಾತಂಕ ಏಕಾಂತದ ಆತ್ಮಾವಲೋಕನೆಯಿಂದ ನನ್ನ ಮನೋಬಲ ವರ್ಧಿಸತೊಡಗಿತ್ತು. ದೂರವಾಣಿಯಲ್ಲಿ ನಡೆಸುವ ವಾರ್ತಾಲಾಪದಿಂದ ಪರಸ್ಪರ ವೈಯಕ್ತಿಕ ಸಂಬಂಧಗಳು ಆತ್ಮೀಯತೆಯ ಬೆಸುಗೆಯನ್ನು ಹೊಸೆಯ ತೊಡಗಿದುವು. ನನ್ನ ಕೌಟುಂಬಿಕರ, ಸ್ನೇಹಿತರ ಸರದಿಯೊಳಗಿನ ವಿಚಾರವಿದು. ಆದರೆ ಬೇರೆ ಕ್ಷೇತ್ರಗಳಲ್ಲಿ ನನ್ನ ವರ್ತನೆಗಳು ಹೇಗಿವೆಯೆಂದು ಒಮ್ಮೆಯಾದರೂ ಯೋಚಿಸಿದ್ದೆನೇ? ನನ್ನ ಕಛೇರಿಯ ಸಹೋದ್ಯೋಗಿಗಳ ಕಡೆಗೆ ಸಾಕಷ್ಟು ಗಮನ ಹರಿಸಿರುವೆನೇ? ಅವರ ಬಗ್ಗೆ ಇದುವರೆಗೆ ಚಿಂತಿಸಿರುವೆನೇ? ಈ ಪ್ರಶ್ನೆಗಳ ಚಿಂತನ ಮಂಥನಗಳನ್ನು ಮುಂದಿನ ರಾತ್ರಿಗಳ 'ಸ್ವಾಧ್ಯಾಯ'ದಲ್ಲಿ ನಡೆಸತೊಡಗಿದೆ. ಈ ಪ್ರಶ್ನೋತ್ತರ ಮಾಲೆ ಕೊನೆಗೊಳ್ಳಲು ಒಂದೆರಡು ವಾರಗಳೇ ಬೇಕಾದುವು.

ಎಳೆಯ ತರುಣ 'ಜೋನ್ಸ್' ನನ್ನ ಮನಃಪಟಲದಲ್ಲಿ ಕಾಣಿಸಿಕೊಂಡ. ಇದೇ ಹೇಮಂತದ ಹಿಂದು ಮುಂಜಾನೆ ಆತ ಎಂಥ ಮಹಾನ್ ಕಲ್ಪನೆಯನ್ನು ನನ್ನ ಮುಂದಿರ

ದ್ದ! ಅವನ ಮಾತಿನಲ್ಲಿ ಎಂಥ ಉತ್ಸಾಹ ತ್ತು! ಮುಖದಲ್ಲಿ ಉಕ್ಕುತ್ತಿದ್ದ ಆತ್ಮ ವಿಶ್ವಾಸ! ಆದರೆ ನಾನೇನು ಮಾಡಿದ್ದೆ?— 'ಈ ಮೊದಲೇ ಪ್ರಯತ್ನಿಸಿ, ಪ್ರಯೋಜನ ಇಲ್ಲ, ಎಂದು ಬಿಟ್ಟುಕೊಟ್ಟ ವಿಚಾರ"— ಎಂದು ಥಟ್ಟನೆ ಹೇಳಿ ತಲೆಕೊಡಹಿ ಅವನ ನ್ನಾಚೆಗೆ ಸರಿಸಿಬಿಟ್ಟಿದ್ದೆ.

ಅಂದಿನ ಘಟನೆಯ ಚಿತ್ರವನ್ನು ಮನದ ಮುಂದೆ ತಂದು ನಿಲ್ಲಿಸಿಕೊಂಡೆ. ನನ್ನ ಉತ್ತರದಿಂದ ಯುವಕನ ಕಣ್ಣುಗಳಲ್ಲಿ ತಕ್ಷಣ ನಿರ್ಲಿಪ್ತ ಭಾವ ಕಾಣಿಸಿಕೊಂಡಿತ್ತು. ಮುಖವು ಗಂಭೀರವಾಗಿ ಕಠಿಣಗೊಳ್ಳ ತೊಡಗಿತ್ತು. ಅವನು ಮಾಡಿದ ಪ್ರಸ್ತಾಪದಲ್ಲಿ ಖಂಡಿತವಾಗಿ ಏನೋ ಹುರುಳು ಇದ್ದಿರ ಬಹುದು ಅದನ್ನು ಸಮರ್ಪಕ ರೀತಿಯಲ್ಲಿ ತಿದ್ದಿಕೊಂಡು ಪ್ರಸ್ತುತಪಡಿಸಿದ್ದರೆ, ಪ್ರಯೋಜನವಾಗಬಲ್ಲ ಒಂದು ಅತ್ಯುತ್ತಮ ದಿಕ್‌ಸೂಚಿಯಾಗುತ್ತಿರಲಿಲ್ಲವೇ? ಕೇವಲ ಒಂದು ಬಾರಿ ಅದರ ಪ್ರಯೋಗ ಮಾಡಿ ನೋಡಿದ್ದರೆ ನನಗೆ ಯಾವ ನಷ್ಟವಾಗು ತ್ತಿತ್ತು? ಛೆ!

ಈ ಯೋಚನೆ ಬಂದುದೇ ತಡವಾಗಿ! ಮತ್ತೊಂದು ಕ್ಷಣವೂ ತಡಮಾಡಬಾರದು! ಬೆಳಗಾಗುವತನಕ ಕಾಯಲು ನನ್ನಿಂದ ಅಸಾಧ್ಯ! ಕೂಡಲೇ ಜೊನ್ಸ್‌ನ ಕಲ್ಪನೆಯ ಪ್ರಣಾಲಿಯನ್ನು "ಮಂಜೂರು ಮಾಡಿ ಕಾರ್ಯಗತಗೊಳಿಸಬೇಕೆಂದು" ಕಛೇರಿಗೆ ಆದೇಶ ನೀಡಿದೆ. (ನಿರೀಕ್ಷೆ ಮಿರಿ ಆ ಯೋಜನೆ ಸಫಲವಾಯಿತು ಕೂಡ!)

ಇದುವರೆಗೂ ನಾನು ಕೈಗೊಳ್ಳುತ್ತಿದ್ದ ನಿರ್ಧಾರಗಳು ತಕ್ಷಣದಲ್ಲೇ ಕಾರ್ಯರೂಪ ಕ್ಕಿಳಿಸುತ್ತಿದ್ದ ವೈಖರಿಗಳು, ಕೇವಲ ನನ್ನ ಮನಸ್ಸಿನ ಮೇಲ್ಪದರದ ಆಲೋಚನೆಗಳ ಫಲಸ್ವರೂಪಗಳಿಂದೂ, ಆ ರೀತಿಯ ವರ್ತನೆ ನನಗೆ ಅಭ್ಯಾಸವಾಗಿಬಿಟ್ಟುದಲ್ಲದೆ ಅದೇ ನನ್ನ ಸ್ವಭಾವ ಎಂಬಷ್ಟು ನನ್ನಲ್ಲಿ ಸೇರಿಹೋಗಿರು ವುದು ಸ್ಪಷ್ಟವಾಯಿತು.

ಎಂದಿನಂತೆ ಓದುತ್ತಿದ್ದಾಗ 'ಮಾಯ್ಯರ್ ಲಿಂಕ್' ಎಂಬ ತತ್ವಜ್ಞಾನಿಯ ವಾಕ್ಯ ವೊಂದು ನನ್ನನ್ನು ಚಕಿತಗೊಳಿಸಿತು. ಅತ್ಯಂತ ಸರಳ ಶಬ್ದಗಳಲ್ಲಿ ಆತ ಬರೆದಿದ್ದ— "ನನ್ನೊಳಗೆ ನಾನು ತಿಳಿದುಕೊಳ್ಳ ಬೇಕಾದ್ದು ಇನ್ನೂ ತುಂಬಾ ಇದೆ"— ಇದೊಂದು ಪಂಥಾಹ್ವಾನವೀಯುವಂಥ ಆಲೋಚನೆಯೆಂದು ನನಗನಿಸಿತು. ಇನ್ನೊಂದು, ಆ ಸಿದ್ಧಾಂತವನ್ನು ಅನುದಿನದ ಕಾರ್ಯಕಲಾಪಗಳಲ್ಲಿ ಅಳವಡಿಸಿದಾಗ ಉಂಟಾಗುವ ಪ್ರಯೋಜನಗಳು—ಇವೆರಡೂ ಅತ್ಯಾಶ್ಚರ್ಯಕರವಾಗಿದ್ದುವು. ವರ್ಷಗಳು ರುಳಿದಂತೆಲ್ಲ, ಮನಸ್ಸು ಹೆಚ್ಚು ಹೆಚ್ಚು ವಿಸ್ತೃತಗೊಳ್ಳುವುದು ಅನುಭವವೇದ್ಯವಾಗು ವುದು. ಆದರೆ ಅದಕ್ಕೆ ಆಳ ಚಿಂತನೆಯ ಅಭ್ಯಾಸ ಮಾಡಬೇಕಾಗುವುದು, ಚಿಂತನೆ ಮಾಡಲು ಕಲಿಯಬೇಕಾಗುವುದು. ಇಂಥ ಪ್ರಾಮಾಣಿಕ ಪ್ರಯತ್ನದಿಂದ ಮಾತ್ರ ಮನಸ್ಸಿನ ಉದ್ದಗಲ ಆಳಗಳು ಅನುಭವಕ್ಕೆ ಬರಬೇಕಷ್ಟೆ. ಈಗೀಗ ಅಪಘಾತವಾದುದು— ನನ್ನ ಸೌಭಾಗ್ಯವೆಂದೇ ಭಾವಿಸತೊಡಗಿದ್ದೆ.

ಅಲ್ಲಿಂದೀಚೆಗೆ ನನ್ನ ಓದುವಿಕೆ ದಿನೇ ದಿನೇ ಹೆಚ್ಚು ಹೆಚ್ಚು ವಿಸ್ತಾರವಾಗ ತೊಡಗಿತು. ಓದುತ್ತಾ ಹೋದಂತೆ ನನಗೂ ಮೊದಲೇ ಹಲವರು ನನ್ನಂತೆ ಈ ಮಹಾ

ಪರಿಶೋಧನೆಯನ್ನು ಮಾಡಿರುವರೆಂದು ತಿಳಿಯಿತು, ಅಲೆಗ್ಸಾಂಡರ್ ಹ್ಯಾಮಿಲ್ಟನ್ ಒಮ್ಮೆ ಹೀಗೆ ಹೇಳಿದ್ದ–"ನನ್ನ ಎಲ್ಲಾ ಪ್ರತಿಭೆ ಅಡಗಿರುವುದು ಇಲ್ಲಿ–ನಾನು ಒಂದು ವಿಷಯವನ್ನು ಕೈಗೆತ್ತಿಕೊಂಡೆನೆಂದರೆ, ಅದರ ಆಮೂಲಾಗ್ರ ಅಧ್ಯಯನ ಮಾಡುತ್ತೇನೆ. ರಾತ್ರಿ ಹಗಲು ಅದೇ ವಿಚಾರ ನನ್ನ ಕಣ್ಣ ಮುಂದಿರುತ್ತದೆ. ಜನರು ಯಾವುದನ್ನು ಪ್ರತಿಭೆಯ ಫಲವೆನ್ನುತ್ತಾರೋ ಅದು ಪರಿಶ್ರಮ ಮತ್ತು ಚಿಂತನೆಗಳ ಫಲವೇ ಆಗಿರುತ್ತದೆ.

ಆಧುನಿಕ ಜಗತ್ತಿನಲ್ಲಿ 'ಸಾಮಾನ್ಯ'ಕ್ಕಿಂತ —ಭಿನ್ನವಾದ, ಅಥವಾ ವಿಶಿಷ್ಟವೆನಿಸುವ– ಸೃಜನಾತ್ಮಕ ಆಲೋಚನೆಗಳನ್ನು ನೆರವೇರಿಸಿ ವಿಜಯ ಸಂಪಾದಿಸುವುದು ಅತಿ ಕಷ್ಟ. ಹಾಗಿದ್ದರೂ, ಅಸಾಧ್ಯವೇನಲ್ಲ, ಮೊದಲನೆಯದಾಗಿ, ಮನಸ್ಸನ್ನು ಆಕರ್ಷಿಸಿ ವಿಚಲಿತಗೊಳಿಸಲಾಗದಿರುವಂಥ ಪರಿಸರ, ಸನ್ನಿವೇಶವಿರಬೇಕು. ಗೌಜಿಗದ್ದಲವಿಲ್ಲದ ಶಾಂತ ವಾತಾವರಣ ತುಂಬ ಅನುಕೂಲಕರ. ಇಂಥ ಪರಿವೇಷ್ಟನದೊಳಗೆ ಇರಬೇಕಾದರೆ ಸೂಕ್ತವಾದ ಸಮಯ ಮನೆಮಂದಿಯೆಲ್ಲ ನಿದ್ದೆಯಲ್ಲಿ ಮುಳುಗಿರುವಂಥ–ರಾತ್ರಿಯ ಕೊನೆಯಜಾವ; ಪಕ್ಷಿಗಳ ಚಿಲಿಪಿಲಿ ಗಾನ ಕಿವಿಗಳನ್ನು ಮೃದುವಾಗಿ ತಟ್ಟುವುದಕ್ಕೂ ಮೊದಲಿನ,ನಿಸ್ತಬ್ಧ ರಾತ್ರಿ,ಇಂಥ ಬ್ರಾಹ್ಮೀ(?) ಮುಹೂರ್ತವು ಹಲವರಿಗೆ ಅನುಕೂಲವೆನಿಸ ಬಹುದು. ಇನ್ನು ಕೆಲವರಿಗೆ ಅದಕ್ಕೂ ಮೊದಲಿನ ಜಾವ ನಿದ್ರಾಹೀನತೆಯಿಂದ ಅತ್ತಿತ್ತ ಹೊರಳುತ್ತ ಸಂಕಟಪಡುವಕಾಲವು ಅತ್ಯುತ್ತಮ ಅವಕಾಶವೆನಿಸಬಹುದು. ಇವೆರಡೂ ಸರಿಹೊಂದದ–ರಾತ್ರಿಯೆಲ್ಲ ನಿಶ್ಚಿಂತೆಯಿಂದ ನಿದ್ದೆ ಮಾಡಬಲ್ಲ ಹಗಲೆಲ್ಲ ಸದಾ ದುಡಿಯುವ,–ಒಂದಲ್ಲ ಒಂದು ಕೈಕೆಲಸ ಮಾಡುವ, ಮಾಡಿದ್ದೇ ಮಾಡು ತ್ತಿರುವ–ಉದಾಹರಣೆಗೆ, ಇಸ್ತ್ರಿ ಮಾಡು ತ್ತಿರುವುದು, ಹುಲ್ಲು ಹೆರೆಯುತ್ತಿರುವುದು, ಹೊಲಿಗೆ, ಹೆಣಿಗೆ ಕೆಲಸಮಾಡುವುದು, ಇತ್ಯಾದಿ ಪ್ರತಿನಿತ್ಯ ಮಾಡುವ, ಮನಸ್ಸು ಕೈಗಳಿಗೆ ಅಭ್ಯಾಸವಾಗಿರುವಂಥ ಕೆಲಸ ಮಾಡುವವರಿಗೆ, ಕೆಲಸದ ಸಮಯವೇ ಗಂಭೀರ ಚಿಂತನೆಗಳಿಗೆ ಯೋಗ್ಯಕಾಲವೆಂದು ನನ್ನೆಣಿಕೆ. ಹಾಗೆಂದು ಬುದ್ಧಿ ಮನಸ್ಸುಗಳು ಕೂಡಿ ಕೆಲಸ ಮಾಡಬೇಕಾಗಿರುವಲ್ಲಿ ಅಥವಾ ಹೆಚ್ಚಿನ ಶಾರೀರಿಕ ಬಲ ಪ್ರಯೋಗ ಮಾಡಬೇಕಾಗಿರುವ ಸಂದರ್ಭದಲ್ಲಿ ಇಂಥ ನಿರ್ಲಿಪ್ತಭಾವದ ಚಿಂತನೆಗೆ ಸೂಕ್ತ ಸಮಯ ಖಂಡಿತವಾಗಿಯೂ ಅಲ್ಲ. ಆದ್ದರಿಂದ ಅವರವರ ಕಾಲಾವಕಾಶವನ್ನು ನಿರ್ಣಯಿ ಸಲು ಅವರೇ ತಕ್ಕವರು.


ಹೀಗೆ ಯಾವ ಕಾಲವೆಂದು ನಿಶ್ಚಯಿಸಿ ಕೊಂಡು, ಅದಕ್ಕನುಗುಣವಾಗಿ ತಮ್ಮನ್ನು ನೆಲೆಗೊಳಿಸಿ, ತಮ್ಮ ಗಂಭೀರ ಸಮಸ್ಯೆಗಳು ಯಾವುದೆಂದು ಪರಿಶೀಲಿಸಿ ಆಯ್ಕೆ ಮಾಡಿ ಕೊಳ್ಳಿರಿ–ಅದು ವ್ಯಾಪಾರ ವ್ಯವಹಾರವೇ ಇರಲಿ, ಅಥವಾ ವೈಯಕ್ತಿಕ ಸಂಬಂಧಗಳ ವಿಷಯವಿರಲಿ, ಆದರೆ ಸಮಸ್ಯೆ ನಿಜವಾ ಗಿಯೂ ಗಂಭೀರವಿರುವುದಾದರೆ ಮಾತ್ರ. ಕೇವಲ ಹೊತ್ತು ಕಳೆಯುವ ಆಧಾರ ಹೀನ ಕಲ್ಪನೆಗಳ ಚಿಂತನೆಯಾಗಿರಕೂಡದು.

ಸಮಸ್ಯೆಯ ಅಧ್ಯಯನಕ್ಕೆ ಸಾಕಷ್ಟು ಸಮಯ ನೀಡಿರಿ. ಎಲ್ಲ ಅಂಶಗಳಿಗೆ ಕೂಲಂಕುಶ ಗಮನಹರಿಸಿ ವಿಶ್ಲೇಷಣೆ ಮಾಡಿರಿ. ತೀರ್ಮಾನಗಳು ಹಲವಾರು

ಕೈಗೆಟಕಬಹುದು. ಆದರೆ ಯಾವುದು ಸ್ವೀಕಾರಾರ್ಹ ಎಂಬುದನ್ನು ನಿರ್ಧರಿಸಲು ಅದರ ಹಿಂದೆ ಮುಂದೆ ಶೋಧನೆ ನಡೆಸಿರಿ. ಅಷ್ಟಾದರೂ ಕ್ಲುಪ್ತಕಾಲದಲ್ಲಿ ತೀರ್ಮಾನವಾಗದಿದ್ದರೆ ಆ ವಿಚಾರವನ್ನು ತಾತ್ಕಾಲಿಕವಾಗಿಟ್ಟು ಯೋಚನೆಗೆ ವಿದಾಯ ಹೇಳಿರಿ. ಮುಂದೆಯೊಂದು ದಿನ ಅನುಕೂಲ ಕಾಲ ನಿಗದಿಗೊಳಿಸಿ ಮೊದಲಿಂದ ಪ್ರಾರಂಭಿಸಿರಿ.

ನನ್ನ ಅನುಭವ ತೋರಿಸುವುದು ಹೀಗೆ—ನಮ್ಮ ಬುದ್ಧಿಯನ್ನು ಬೆಳೆಯಿಸಿ ಅದರ ಶಕ್ತಿಯನ್ನು ಹಿಗ್ಗಿಸಿ, ಅದರ ಪ್ರಖರತೆಯನ್ನು ಹೆಚ್ಚಿಸಿ, ಅದರ ಸರಿಯಾದ ಉಪಯೋಗ ಮಾಡಿಕೊಂಡರೆ, ಆನಂದಪೂರ್ಣ ಹೊಸ ಜೀವನ, ಮತ್ತು ಜೀವನದ ಉಪಯುಕ್ತತೆ ಬೆಳೆಯುತ್ತಾ ಹೋಗುವುದು ಖಂಡಿತ.

ನನ್ನ ಈ ಸಂತೃಪ್ತ ಜೀವನದಲ್ಲಿ ಒಂದೇ ಒಂದು ಕೊರತೆ. ನನ್ನ ತೊಡೆಯೆಲುಬು ಹತ್ತಾರು ವರ್ಷಗಳ ಹಿಂದೆಯೇ ಮುರಿದು ಹೋಗಿದ್ದರೆ ಎಷ್ಟು ಚೆನ್ನಾಗಿತ್ತು! ಈ ಎಂಬತ್ತೊಂಬತ್ತರ—ವಯಸ್ಸಿನಲ್ಲಿ ಗಳಿಸಿಕೊಂಡ ಜ್ಞಾನ ಅಂದೇ ಬರುತ್ತಿತ್ತಲ್ಲವೇ?



ನಿನ್ನಲ್ಲಿ ಸಾಸುವೆ ಕಾಳಿನಷ್ಟು ಆತ್ಮವಿಶ್ವಾಸವಿದ್ದರೂ ಸಾಕು; ನಿನಗೆ ಯಾವ ಕೆಲಸವೂ ಕಷ್ಟ ಅಲ್ಲ.

—ಏಸುಸ್ವಾಮಿ

ಅಸಕ್ತರೂ, ದುರ್ಬಲರೂ ಆದವರಲ್ಲಿ ಉತ್ಸಾಹ ಇರುವುದಿಲ್ಲ. ಉತ್ಸಾಹಿಗಳು ಮಾತ್ರವೇ ಸಂಪತ್ತನ್ನು ಅನುಭವಿಸುವರು.

—ಭಾಸ

ಮುಕ್ತಿ

ಟಿ. ಎಸ್. ಲಲಿತ

೭೦೩, ಮೊದಲನೆ ಮಹಡಿ
೧೬ನೇ ಮೇನ್, ಸರಸ್ವತೀಪುರಂ,
ಮೈಸೂರು–೫೭೦೦೦೯

ಚಮಾರ ದುಖಿ, ಮನೆಯ ಮುಂದಿನ ಅಂಗಳ ಗುಡಿಸುತ್ತಿದ್ದ. ಅವನ ಹೆಂಡತಿ ಝುರಿಯಾ, ಕೊಠಡಿಯ ಗೋಡೆಗಳಿಗೆ ಮಣ್ಣು ಮೆತ್ತುತ್ತಿದ್ದಳು. ಇಬ್ಬರ ಕೆಲಸವೂ ಮುಗಿದಾಗ "ನೀವು ಪಂಡಿತ ಬಾಬಾರ ಬಳಿ ಹೋಗಿಬಂದಿದ್ದರೆ ಒಳ್ಳೆಯದಿತ್ತು" ಎಂದಳು ಝುರಿಯಾ.

"ಹೌದು, ಇನ್ನೊಂದೇ ನಿಮಿಷ" ಎಂದ ದುಖಿ, ಯೋಚಿಸಿ ಕೇಳಿದ "ಬಂದರೆ ಅವರೆಲ್ಲಿ ಕುಳಿತುಕೊಳ್ಳುತ್ತಾರೆ?"

"ಠಾಕುರಾಣಿಯನ್ನು ಕೇಳಿ, ಒಂದು ಮಂಚ ತರಬಾರದೆ?"

"ಒಂದೊಂದ್ಸಲ ನೀನೂ ತುಂಬಾ ವಿಚಿತ್ರವಾಗಿ ಮಾತಾಡ್ತೀಯಾ. ಠಾಕುರಾಣಿಯನ್ನ ಕೇಳಿ ಮಂಚ ತರೋದೆ? ಮಂಚ ಇರ್ಲಿ, ಅವ್ರು ಕುಡಿಯೋಕೆ ಒಂದು ಲೋಟ ನೀರೂ ಸಹ ಕೊಡೋಲ್ಲ, ನಂಗೆ. ಮನೇಲಿರೋದ್ನೇ ತೊಳ್ದಿಡು. ಅವ್ರು ಬರೋ ಹೊತ್ಗೆ, ಅದು ಒಣಗಿರುತ್ತೆ."

"ಛೆ, ಛೆ, ಪಂಡಿತಜಿ ನಮ್ಮ ಮಂಚದ ಮೇಲೆ ಕೂತ್ಕೋತಾರಾ? ಅಂಥ ವಿಷಯಗಳಲ್ಲಿ ಅವ್ರು ತೀರಾ ಸಂಪ್ರದಾಯಸ್ತರು."

"ನಾನ್ಹೇಳೋದು ಕೇಳು. ಮೊಹವಾ ಎಲೆಗಳನ್ನು ಜೋಡ್ಸಿ ಕೂತ್ಕೊಳ್ಳೋ ಪೀಠದ ಹಾಗೆ ಮಾಡು, ನನ್ನ ಕೋಲು ತಾ. ಒಂದಿಷ್ಟು ಎಲೆ ಕಿತ್ಕೊಂಬರ್ತೀನಿ" ಎಂದ ದುಖಿ.

"ಬೇಡ, ಆ ವಿಷಯ ನನಗಿರ್ಲಿ. ನೀವು ಪಂಡಿತಜಿ ಹತ್ರ ಬೇಗ ಹೋಗೋದು ಒಳ್ಳೇದು. ಅವ್ರಿಗೆ ಕೊಡ್ಬೇಕಾದ ಯಾವ ಪಾದಾರ್ಥಾನೂ ಮುಟ್ಬೇಡಿ. ಭೋರಿಯ ಮಗಳನ್ನು ನಿಮ್ಮೊಂದಿಗೆ ಕರೆದೊಯ್ದು, ಎಲ್ಲಾ ಸಾಮಾನುಗಳನ್ನೂ ತರುವಂತೆ ಅವ್ಳಿಗೆ ಹೇಳಿ— ಒಂದು ಸೇರು ಹಿಟ್ಟು, ಅರ್ಧ ಸೇರು ಅಕ್ಕಿ, ಕಾಲು ಸೇರು ಬೇಳೆ, ಅರ್ಧ ಪಾವು ತುಪ್ಪ, ಉಪ್ಪು, ಎಣ್ಣೆ ಎಲ್ಲವೂ, ತುಂಬ ಎಚ್ಚರಿಕೆಯಿಂದಿರಿ. ಪಂಡಿತಜೀ ತುಂಬಾ ಕೋಪಿಷ್ಟರು. ಅವರಿಗೆ ಸಿಟ್ಟು ಬಂದಾಗ, ಅವರ ಹೆಂಡತಿಯನ್ನೂ ಸುಮ್ಮನೆ ಬಿಡುವವರಲ್ಲಾ. ಸಧ್ಯ ಏನನ್ನೂ ಮುಟ್ಟಬೇಡಿ."

ಹೆಂಡತಿಯ ಎಲ್ಲ ಸೂಚನೆಗಳನ್ನೂ ಮನದಲ್ಲೇ ತುಂಬಿಕೊಂಡ ದುಖಿ, ಒಂದು ಕಂತೆ ಹುಲ್ಲು ಹಿಡಿದು, ಪಂಡಿತಜಿಯ ಮನೆಗೆ ಹೊರಟ. ಪಂಡಿತಜಿಯನ್ನು ಆಹ್ವಾನಿಸಲು

ಮೂಲ : ಪ್ರೇಮ್‌ಚಂದ್‌ರ ಹಿಂದಿ ಕಥೆ.

ಬರಿಗೈಲಿ ಹೋಗುವಂತಿಲ್ಲ. ಅವರಿಗೆ ಕಾಣಿಕೆ ಕೊಡಲು ಹುಲ್ಲಿನ ಕಂತೆ ಬಿಟ್ಟು ಅವನಲ್ಲಿ ಮತ್ತೇನಿದೆ ?

ಆ ಹಳ್ಳಿಯ ಪೂಜಾರಿ ಘನರಾಮ, ತನ್ನ ದೈವಭಕ್ತಿ ಹಾಗೂ ಧಾರ್ಮಿಕತೆಗೆ ಹೆಸರಾಗಿದ್ದ. ಬೆಳಗೆದ್ದ ಕೂಡಲೇ ಪ್ರಾರ್ಥನೆ ಹೇಳಲು ಶುರು ಮಾಡಿದರೊ, ಸರಿಯಾದ ಪೂಜೆ ಶುರುವಾಗುತ್ತಿದ್ದುದು ಬೆಳಗಿನ ಎಂಟು ಗಂಟೆಗೆ. ಅರ್ಧ ಗಂಟೆ ಚಂದನ ತೇಯುವುದರಲ್ಲಿ ಕಳೆಯುತ್ತಿತ್ತು. ಸಾಕಷ್ಟು ಸಮಯ ಮೂರು ಪಟ್ಟೆ ಚಂದನವನ್ನು ಹಣೆಗೆ ನಾಜೂಕಾಗಿ ಹಚ್ಚಿ ಮಧ್ಯೆ ಕುಂಕುಮದ ಬೊಟ್ಟನ್ನು ಎಚ್ಚರಿಕೆಯಿಂದ ಇಟ್ಟುಕೊಳ್ಳುವುದಕ್ಕೇ ಬೇಕು. ಆನಂತರ ತೋಳು, ಎದೆಗೆಲ್ಲಾ ಚಂದನ ಹಚ್ಚಿಮುಗಿಸಿ, ದೇವರ ಮೂರ್ತಿಗೆ ಅಭಿಷೇಕ ಮಾಡಿ ಚಂದನ ಹಚ್ಚಿ, ಅಲಂಕರಿಸಿ, ಗಂಟೆ ಬಾರಿಸುತ್ತ ಆರತಿಯಾಗಬೇಕು. ಹತ್ತು ಘಂಟೆಯ ಹೊತ್ತಿಗೆ ಪೂಜೆ ಮುಗಿದಾಗ, ಇಬ್ಬರೋ ಮೂವರೋ ಭಕ್ತರು ಬಾಗಿಲ ಬಳಿ ಕಾದಿರುತ್ತಿದ್ದರು. ಅವರು ಕೊಡುತ್ತಿದ್ದ ಪದಾರ್ಥಗಳು ಬೆಳಗಿನಿಂದ ಮಾಡಿದ ಕೆಲಸಕ್ಕೆ ಪರಿಹಾರದಂತಿತ್ತು. ಇದು ಅವನ ಜೀವನೋಪಾಯಕ್ಕಿದ್ದ ಒಂದೇ ದಾರಿ.

ಇಂದು ಪಂಡಿತಜಿ ಪೂಜೆ ಮುಗಿಸಿ ಹೊರಬಂದಾಗ ಚಮಾರ ದುಖಿಯೇ ಕಣ್ಣಿಗೆ ಕಂಡ. ಪಂಡಿತಜಿಯನ್ನು ಕಂಡ ಕೂಡಲೇ ಗೌರವದಿಂದ ಎದ್ದು ನಿಂತು, ನೆಲಮುಟ್ಟಿ ನಮಸ್ಕರಿಸಿ, ಕೈಮುಗಿದು ಪಕ್ಕಕ್ಕೆ ನಿಂತ. ಪಂಡಿತನ ದಷ್ಟ ಪುಷ್ಟ ಮುಖ, ಎಣ್ಣೆ ಹಾಕಿದ ತಲೆ, ಉಬ್ಬಿದ ಗಲ್ಲ, ಪ್ರಕಾಶಮಾನವಾಗಿ ಹೊಳೆಯುವ ಕಣ್ಣುಗಳು, ಪವಿತ್ರ ಚಂದನ ನೋಡಿ, ಅವನಲ್ಲಿ ಹೊಸ ಆಸೆಯೊಂದು ತುಂಬಿತು.

“ಏನು ದುಖಿಯಾ, ಈ ಕಡೆ ಬಂದೆ ?”

“ಹುಜೂರ್, ಇವತ್ತು ನನ್ನ ಮಗನ ಮದುವೆಯ ನಿಶ್ಚಿತಾರ್ಥವಾಗಬೇಕು. ನೀವು ದಯವಿಟ್ಟು ಬಂದು ಒಂದು ಪ್ರಶಸ್ತ ಘಳಿಗೆ ನೋಡಿಕೊಡಬೇಕೆಂದು ಪ್ರಾರ್ಥನೆ. ಯಾವಾಗ ನಿಮಗೆ ಸ್ವಲ್ಪ ಬಿಡುವು ಸಿಗಬಹುದು ?”

ಪಂಡಿತ ತೀರಾ ಗಡಿಬಿಡಿಯಲ್ಲಿದ್ದಂತೆ ನಟಿಸುತ್ತ “ಈ ದಿನ ನನಗೆ ತುಂಬಾ ಕೆಲಸ ಇದೆ. ಬಹುಶಃ ಈ ದಿನ ಸಂಜೆಯವರೆಗೂ ನನಗೆ ಬರಲಾಗುವುದಿಲ್ಲವೆನಿಸುತ್ತಿದೆ.”

ದಯವಿಟ್ಟು ನಿಮಗೆ ಎಷ್ಟು ಬೇಗ ಸಾಧ್ಯವೋ, ಅಷ್ಟು ಬೇಗ ಬನ್ನಿ ಮಹರಾಜ್. ನಾನು ಎಲ್ಲ ಸಿದ್ಧತೆಗಳನ್ನು ಮಾಡಿದ್ದೀನಿ.... ಈ ಹುಲ್ಲನ್ನು ಎಲ್ಲಿಡಲಿ ?”

“ಅದನ್ನು ಹಸುಗೆ ಕೊಡು, ನೋಡು ನೀನಿಲ್ಲಿರುವಾಗಲೇ, ಮುಂದಿನ ಅಂಗಳವನ್ನೆಲ್ಲ ಗುಡಿಸಿ ನೆಲವನ್ನೆಲ್ಲ ಸಗಣಿಯಿಂದ ಸಾರಿಸಿಬಿಡು. ಅಷ್ಟರಲ್ಲಿ ನಾನು ಊಟ ಮಾಡಿ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ತೀನಿ. ಆಮೇಲೆ ನಾವಿಬ್ರೂ ಒಟ್ಟಿಗೆ ನಿನ್ನ ಮನೆಗೆ ಹೋಗೋಣ. ಹಾ, ಅಂದ್ಹಾಗೆ ಅಲ್ಲಿ ಬಿದ್ದಿರೋ ದಿಮ್ಮ್ಯನ ಕಡಿದಿಟ್ಟು, ತೋಟದಿಂದಷ್ಟು ಹುಲ್ಲು ತಂದ್ಬಿಡು.”

ದುಖಿ ತಕ್ಷಣ ಕೆಲಸಕ್ಕಿಳಿದ. ಅಂಗಳ ಗುಡಿಸಿ, ಸಾರಿಸುವಷ್ಟರಲ್ಲೇ ೧೨ ಘಂಟೆ. ಪಂಡಿತಜಿ ಊಟಕ್ಕೆ ಹೋಗಿದ್ದರು. ಬೆಳಗಿನಿಂದ ಏನೂ ತಿನ್ನದ ದುಖಿಗೆ ವಿಪರೀತ ಹಸಿವು. ಮನೆಯೋ, ಸುಮಾರು ಮೈಲಿ

ದೂರ. ಮನೆಗೆ ಹೋದರೆ ಪಂಡಿತಜಿ ಸಿಟ್ಟಾಗ ಬಹುದೆಂದು ಯೋಚಿಸಿದ. ತನ್ನ ಹಸಿವು ಮರೆತು, ಮರ ಕಡಿಯತೊಡಗಿದ. ದಿಮ್ಮಿ ಬಲು ಗಟ್ಟಿಯಾಗಿತ್ತು. ಸಾಕಷ್ಟು ಜನ ಅದನ್ನು ಕಡಿಯಲು ಪ್ರಯತ್ನಿಸಿ ಸುಮ್ಮ ನಾಗಿದ್ದರು. ದುಖಿಗೆ ಕೇವಲ ಹುಲ್ಲು ಕತ್ತರಿಸಿ ಅಭ್ಯಾಸ. ಅವನ ಮೊಂಡು ಕತ್ತಿಗೆ ಹುಲ್ಲು ಮಣಿದರೂ ಮರದ ದಿಮ್ಮಿ ಮಾತ್ರ ಶತ-ಪ್ರಯತ್ನಕ್ಕೂ ಜಗ್ಗಲಿಲ್ಲ. ದುಖಿಗೆ ವಿಪರೀತ ಆಯಾಸವಾಗಿತ್ತು. ಕಾಲುಗಳು ನಡುಗು ತ್ತಿದ್ದವು. ಕೈಗಳು ಮೇಲೇಳದಂತಾಗಿ "ಒಂದೆರಡು ದಮ್ಮು ಹುಕ್ಕ ಎಳೆದರಾದರೂ ಸ್ವಲ್ಪ ಬಲ ಬಂದೀತೇನೋ ಅಂದು ಕೊಂಡರೂ, ಈ ಹಳ್ಳಿಯಲ್ಲಿ ಅವನಿಗೆ ಹುಕ್ಕ ಸಿಗಬೇಕೆಲ್ಲಿ? ಇದು ಬ್ರಾಹ್ಮಣರಿರುವ ಹಳ್ಳಿ, ಅವರು ಹುಕ್ಕ ಸೇದುವವರಲ್ಲ. ಸಮೀಪ ದಲ್ಲೇ ಗೌಂಡನೊಬ್ಬ ವಾಸಿಸುತ್ತಿದ್ದುದು ಇದ್ದಕ್ಕಿದ್ದಂತೆ ನೆನಪಾದಾಗ, ತೃಪ್ತಿಯ ನಿಟ್ಟುಸಿರೊಂದನ್ನು ಹೊರ ಹಾಕಿದ. ಅವ ನಿಂದ ಹುಕ್ಕ ಕೇಳಿ ತೆಗೆದುಕೊಂಡು, ಪಂಡಿತಜಿಯ ಮನೆಯ ಹಿಂದಿನ ಬಾಗಿಲಿಂದ ಅಂಗಳಕ್ಕೆ ಬಂದು "ಪಂಡಿತಜಿ, ಹುಕ್ಕ ಹೊತ್ತಿಸಿಕೊಳ್ಳಲು ಸ್ವಲ್ಪ ಬೆಂಕಿ ಸಿಗುತ್ತ ದೆಯೇ?" ಎಂದು ಕೇಳಿದ.

ಪಂಡಿತಜಿ ಊಟ ಮಾಡುತ್ತಿದ್ದ.

"ಬೆಂಕಿ ಕೇಳುತ್ತಿರುವ ಈ ಮನುಷ್ಯ ಯಾರು?" ಎಂದಳು ಪಂಡಿತನ ಹೆಂಡತಿ.

"ಓ, ಅವನೇ, ಚಮಾರ ದುಖಿ. ಮರ ಕತ್ತರಿಸುವಂತೆ ಅವನಿಗೆ ಹೇಳಿದ್ದೇನೆ. ಅವನಿ ಗಷ್ಟು ಬೆಂಕಿ ಕೊಡು."

"ಜಾತಿ, ಧರ್ಮದ ಎಲ್ಲ ವ್ಯತ್ಯಾಸಾನೂ ನೀವು ಮರೆತಿರೋ ಹಾಗಿದೆ. ಚಮಾರ, ಧೋಬಿ ಯಾರು ಬೇಕಾದ್ರೂ, ಇದು ಪಂಡಿತಜಿ ಮನೆ ಅಲ್ಲ, ಯಾವ್ದೋ ತಂಗು ದಾಣ ಅನ್ನೋ ಹಾಗೆ ಸೀದಾ ಒಳಗೆ ಬರ್ತಾರೆ. ಇಲ್ಲಿಂದ ತಕ್ಷಣ ಹೊರಟು ಹೋಗು ವಂತೆ ಅವನಿಗೆ ಹೇಳಿ, ಇಲ್ದಿದ್ರೆ ಅವನ ಮುಖಾನಾ ಸೀದಿಸಿಬಿಡ್ತೀನಿ."

ಪಂಡಿತಜಿ ಸಮಾಧಾನಿಸುವಂತೆ ಹೇಳಿದ "ಅವ್ನು ಮಾಡ್ತಿರೋದು ನಮ್ಮ ಕೆಲ್ಸಾನೇ ಅಂತ ಯಾಕೆ ಅರ್ಥವಾಗಲ್ಲ ನಿಂಗೆ? ಬೇರೆ-ಲ್ಲಾದ್ರೂ ಆ ಮರಾನ ಕಡಿಸಬೇಕಾದ್ರೆ ಕಡೇ ಪಕ್ಷ ನಾಲ್ಕಾಣೇನಾದ್ರೂ ಕೊಡ್ಬೇಕು. ಅವ್ನು ನಮ್ಮ ಯಾವ್ದೇ ಸಾಮಾನನ್ನೂ ಮುಟ್ಟಿಲ್ಲ. ಅವ್ನು ನಿಂತ ನೆಲವೇನೂ ಅಪವಿತ್ರ ವಾಗ್ಬಿಡೋಲ್ಲ; ಒಂದೆರ್ಡು ಕೆಂಡ ಕೊಟ್ರೇ ನಾಯ್ತು?"

"ಅವ್ನು ಮನೆ ಒಳ್ಗೆ ಬಂದಿದ್ಯಾಕೆ?"

ವಾಗ್ವಾದಕ್ಕೆ ತಡೆ ಹಾಕುವ ಉದ್ದೇಶ ದಿಂದ "ಸರಿ, ಸರಿ, ಅದೇನೋ ತಪ್ಪು. ಅವ್ನಿ ಗೊಂದೆರ್ಡು ಕೆಂಡ ಕೊಟ್ಟು ಆಚೆ ಕಳಿಸ್ಬಾರ್ದ?"

ಇದನ್ನೆಲ್ಲ ಕೇಳುತ್ತಿದ್ದ ದುಖಿ, ತನ್ನ ತಪ್ಪರಿತು ಪಶ್ಚಾತ್ತಾಪಪಡುತ್ತಿದ್ದ, ಪಂಡಿತನ ಹೆಂಡತಿ ಹೊರ ಬರುತ್ತಿದ್ದಂತೆ "ಅಂಗಳಕ್ಕೆ ಕಾಲಿಟ್ಟು ತಾನು ತಪ್ಪು ಮಾಡಿದೆ. ಕೀಳು ಜಾತಿ ಜನ ನಾವು. ಅಷ್ಟು ಬುದ್ಧಿ ಇಲ್ಲ ನಮಗೆ. ಮತ್ತೊಮ್ಮೆ ಹೀಗೆ ಮಾಡುವ ದಿಲ್ಲ." ಎಂದು ಕೈಮುಗಿದು ಹೇಳಿದ. ಪಂಡಿತನ ಹೆಂಡತಿ ದೂರದಿಂದಲೇ ಕೆಂಡ ವನ್ನವನತ್ತ ಬೀಸಿ ಒಗೆದಾಗ, ಒಂದು ದುಖಿಯ ಮೇಲೇ ಬಿತ್ತು. ತಟಕ್ಕನೆ ಹೆಜ್ಜೆ ಹಿಂದಿಟ್ಟು, ತನ್ನ ಬಟ್ಟೆಯನ್ನು ಝಾಡಿಸಿ ಕೊಂಡ. ಒಬ್ಬ ಪವಿತ್ರಬ್ರಾಹ್ಮಣನ ಮ

ಯನ್ನು ಅಪವಿತ್ರಗೊಳಿಸಿದ್ದಕ್ಕೆ ಇದು ಶಿಕ್ಷೆ. ಬ್ರಾಹ್ಮಣರ ಬಗ್ಗೆ ತಪ್ಪು ಮಾಡಿದರೆ, ಅದು ಕೂಡಲೇ ಫಲ ತೋರಿಸುತ್ತದೆ. ಅದಕ್ಕೇ ಎಲ್ಲರೂ ಅವರ ಬಗ್ಗೆ ಹೆದರುತ್ತಾರೆ. ಯಾರೂ ಅವರಿಗೆ ತೊಂದರೆ ಮಾಡುವ ದಾರ್ಷ್ಟ್ಯ ತೋರುವುದಿಲ್ಲ.

ಪಂಡಿತನ ಹೆಂಡತಿಗೆ, ಕೆಂಡ ಎಸೆದಾಗಿನಿಂದ ಮನಸ್ಸಿಗೆ ಕಿರಿಕಿರಿಯಾಗಿತ್ತು. ಪಂಡಿತ ಊಟ ಮುಗಿಸಿದ ಅನಂತರ "ಆ ಚಮಾರನಿಗೆ ತಿನ್ನಲು ಏನಾದರಷ್ಟು ಕೊಡಿ. ಬೆಳಗಿನಿಂದ ಕೆಲಸ ಮಾಡಿದ್ದಾನೆ, ಹಸಿದಿರಬೇಕು" ಎಂದಳು.

"ಸಾಕಷ್ಟು ಚಪಾತಿ ಮಿಕ್ಕಿದೆಯೆ?"

"ಹೂ, ಒಂದೆರಡು."

"ಒಂದೆರಡು! ಎಲ್ಲಿಗೆ ಸಾಕು? ಅವನಿಗೆ ಅದರ ಹತ್ತರಷ್ಟಾದರೂ ಬೇಕು."

ತನ್ನ ತಪ್ಪನ್ನು ತಿಳಿದುಕೊಂಡ ಪಂಡಿತನ ಪತ್ನಿ "ಅಯ್ಯೋ ದೇವ್ರೆ, ಹಾಗಾದ್ರೆ ಈ ಯೋಚನೇನ ನಾವು ಬಿಟ್ಬಿಡೋದೇ ಒಳ್ಳೇದು" ಎಂದಳು.

"ಜೋಳದ ಹಿಟ್ಟೇನಾದ್ರೂ ಇದ್ರೆ, ಅವ್ನಿಗೆ ಒಂದಷ್ಟು ರೊಟ್ಟಿ ಮಾಡು. ಈ ಕೀಳು ಜನಕ್ಕೆ ಹಸಿವೆ ಜಾಸ್ತಿ."

"ಈಗ್ಲೇ ಸಾಕಾಗಿದೆ. ಮತ್ತಾರು ಒದ್ದಾಡ್ತಾರೆ. ಆ ವಿಷಯ ಅಲ್ಲಿಗೇ ಬಿಡೋಣ" ಎಂದಳು ಪಂಡಿತನ ಪತ್ನಿ.

ಹುಕ್ಕಾದ ಒಂದೆರಡು ದಮ್ಮು ಎಳೆದ ದುಖಿ ಮತ್ತೆ ಕೆಲಸ ಶುರು ಮಾಡಿದ. ಹುಕ್ಕಾ ಅವನ ಚೈತನ್ಯವನ್ನು ಮರುಕಳಿಸಿತ್ತು. ಏನಾದ್ರೂ ದಿಮ್ಮಿ ತುಂಡಾಗುವ ಸೂಚನೆಯಂತೂ ಇಲ್ಲ. ಆ ವೇಳೆಗೆ ಬಂದ ಗೌಂಡ "ದಾದ, ನೀನು ಯಾಕೆ ಜೀವ ತೇಯ್ತಾ ಇದೀಯೆ? ಈ ದಿಮ್ಮೀನ ಕತ್ತರಿಸೋದು ಸುಲಭ ಅಲ್ಲ."

"ತಮ್ಮ, ಇಷ್ಟೇ ಅಲ್ಲ, ನಾನಿನ್ನೂ ಗದ್ದೆಯಿಂದ ಹುಲ್ಲು ತರಬೇಕು" ಎಂದ ದುಖಿ.

"ನಿನಗೆ ತಿನ್ನಲು ಏನಾದ್ರೂ ಕೊಟ್ಟಿದ್ರಾ? ನೀನ್ಯಾಕೆ ಊಟ ಕೊಡಿ ಅಂತ ಕೇಳಲ್ಲ?"

"ಬ್ರಾಹ್ಮಣರನ್ನು ನಾನು ಹೇಗೆ ಕೇಳಲಿ? ನಾವವ್ರಿಗೆ ಕೊಡ್ಬೇಕೇ ಹೊರ್ತು, ಅವ್ರಿಂದ ನಾವು ತಗೋಬಾರ್ದು" ಎಂದ ದುಖಿ.

"ಮೂರ್ಖನ ಹಾಗಾಡ್ಬೇಡ. ಊಟ ಕೊಡೀಂತ ಅವ್ರನ್ನ ಕೇಳು. ಜಮೀನ್ದಾರ, ಯಾಕೆ ಸರ್ಕಾರಿ ಅಧಿಕಾರಿಗಳು ಕೂಡ, ದಿನದ ಕೆಲ್ಸ ಮಾಡ್ಸಿಕೊಂಡಿದ್ದಕ್ಕೆ ಏನಾದ್ರೂ ಕೊಡ್ತಾರೆ. ಆದ್ರೆ ಈ ಪಂಡಿತನ್ನ ನೋಡು. ಎಲ್ರನ್ನೂ ಮೀರ್ಸಿದ್ದಾನೆ. ದಿನದ ಕೆಲ್ಸಕ್ಕೆ ಬದ್ಲಾಗಿ ಊಟ ಕೂಡ ಕೊಡಲ್ಲ; ಇವ್ನು ದೇವರ ಮನುಷ್ಯ. ನೋಡು, ನೀನಿಷ್ಟು ಕಷ್ಟ ಪಡ್ತಿರೋವಾಗ, ಅವ್ನು ಹೇಗೆ ಸುಖವಾಗಿ ನಿದ್ದೆ ಮಾಡ್ತಿದಾನೆ?"

"ಅಷ್ಟು ಜೋರಾಗಿ ಮಾತಾಡ್ಬೇಡ. ಅವ್ರು ಕೇಳ್ಸಿಕೊಂಡಾರು" ಎನ್ನುತ್ತ ಪುನಃ ಕೆಲಸ ಶುರು ಮಾಡಿದ ದುಖಿ. ಗೌಂಡನಿಗೆ ಆ ದೃಶ್ಯ ನೋಡುವುದಾಗಲಿಲ್ಲ. ದುಖಿಯ ಕೈಯಿಂದ ಕೊಡಲಿ ಕಿತ್ತುಕೊಂಡು ಅರ್ಧ ಗಂಟೆಯವರೆಗೂ ಮರ ಕತ್ತರಿಸಲು ಪ್ರಯತ್ನಿಸಿದ. ಊಹುಂ. ಮರ ಜಗ್ಗಲಿಲ್ಲ. ಬೇಸರದಿಂದ ಕೊಡಲಿಯನ್ನು ಪಕ್ಕಕ್ಕೆಸೆದು "ನೋಡು, ನಿನ್ನ ಕಡೇ ಉಸಿರಿರೋವರ್ಗೂ ಪ್ರಯತ್ನಿಸಿದ್ರೂ, ಈ ಮರ ಕಡ್ಯೋಕಾಗಲ್ಲ.

ನಾನೇನು ಹೇಳಿದೀನಿ ಕೇಳು" ಎನ್ನುತ್ತ ಅಲ್ಲಿಂದ ನಡೆದುಬಿಟ್ಟ.

ದುಖಿ ಯೋಚಿಸತೊಡಗಿದ, ಅವನ ಮನೆಯಲ್ಲೇ ಅವನು ಲಕ್ಷ್ಯ ಕೊಡಬೇಕಾದ ಸಾಕಷ್ಟು ಕೆಲಸಗಳಿದ್ದವು. ಒಂದಷ್ಟು ಹುಲ್ಲು ತಂದು ಹಾಕಿ. ಮರುದಿನ ಬಂದು ಸೌದೆ ಒಡೆಯುವುದಾಗಿ ಪಂಡಿತನಿಗೆ ಹೇಳಬೇಕೆಂದುಕೊಂಡ. ಕೆಲಸ ಮುಗಿದಾಗ ನಾಲ್ಕು ಘಂಟೆಯಾಗಿತ್ತು. ಬಟ್ಟೆಯನ್ನೇ ತಲೆ ಕೆಳಗಿರಿಸಿ, ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಲು ಯೋಚಿಸಿದ ದುಖಿ. ಪಂಡಿತ ನಿದ್ರೆ ತೀರಿಸಿ ಹೊರ ಬಂದಾಗ, ದುಖಿ ನಿದ್ದೆ ಮಾಡುತ್ತಿದ್ದುದನ್ನು ಕಂಡ.

"ದುಖಿಯಾ, ಏಳು ಸೋಮಾರಿ, ಇಡೀ ದಿನ, ಹಿಡಿ ಹುಲ್ಲು ತರೋದ್ರಲ್ಲೇ ಕಾಲ ಕಳೆದ್ಬಿಟ್ಟೆ. ದಿಮ್ಮಿ ಹೇಗಿತ್ತೋ ಹಾಗೇ ಇದೆ. ನೀನೇನಾದ್ರೂ ಅರ್ಧ ಮನಸ್ಸಿನಿಂದ ಕೆಲ್ಸ ಮಾಡಿದ್ರೆ, ಒಳ್ಳೇ ಮುಹೂರ್ತ ಗೊತ್ತು ಮಾಡೋ ಕೆಲ್ಸಾನೂ ಹಾಗೇ ಆಗತ್ತೆ. ಆಮೇಲೆ ನನ್ನ ಬಯ್ಬೇಡ. ಕೊಡ್ಲಿ ತಗೋ, ಅದೊಂದೇ ಸಣ್ಣ ತುಂಡುಸೌದೆ. ಅದ್ನ ಕತ್ತರ್ಸೋಕೆ ನಿಂಗೆ ಒಂದು ನಿಮಿಷಕ್ಕಿಂತ ಜಾಸ್ತಿ ಬೇಡ."

ದುಖಿ ಎದ್ದು ಪುನಃ ಕೈಲಿ ಕೊಡಲಿ ಹಿಡಿದ. ಪಂಡಿತನನ್ನು ನೋಡುತ್ತ ತಾನು ಹೇಳಬೇಕೆಂದಿದ್ದ ಮಾತುಗಳೆಲ್ಲ ಮರೆತೇ ಹೋದವು. ಹಸಿವಿನಿಂದ ತಾಳ ಹಾಕುತ್ತಿದ್ದ ಹೊಟ್ಟೆ ಬೆನ್ನುಹುರಿಗಂಟಿತ್ತು. ಕೈ, ಕಾಲುಗಳು ಅಲುಗಾಡಲು ನಿರಾಕರಿಸಿದವು. ಆದರೂ ಕೆಲಸ ಮಾಡಲೇಬೇಕಿತ್ತು? ದಂಪತಿಗಳ ಭವಿಷ್ಯ, ಸಂಸಾರದ ಸಂತೋಷವೆಲ್ಲಾ ಆ ಸುಮುಹೂರ್ತದ ಮೇಲೇ ಅವಲಂಬಿಸಿತ್ತು. ತನ್ನನ್ನು ಉಳಿಸುವುದು, ಅಳಿಸುವುದು ಎರಡೂ ಪಂಡಿತಜಿಯ ಕೈಲಿತ್ತು. ತೂರಾಡುತ್ತಿದ್ದ ಕಾಲುಗಳೊಂದಿಗೆ ಪುನಃ ದಿಮ್ಮಿ ಕಡಿಯಲು ಪ್ರಾರಂಭಿಸಿದ ದುಖಿ. ಪಂಡಿತಜಿ ಬಂದು ಸ್ವಲ್ಪ ದೂರದಲ್ಲಿ ನಿಂತರು. "ಹಾ, ಹಾಗೇ, ಇನ್ನೊಂದೇಟು ಬಲವಾಗಿ ಹಾಕು. ಒಂದು ನಿಮಿಷಕ್ಕಿಂತ ಹೆಚ್ಚಿನ ಸಮಯವೇನೂ ಅದಕ್ಕೆ ಬೇಡ. ಇನ್ನು ಸ್ವಲ್ಪ ಜೋರಾಗಿ."

ದುಖಿಯಾ ಆವೇಶ ಬಂದವನಂತೆ ಕೆಲಸ ಮಾಡತೊಡಗಿದ. ಸ್ವಲ್ಪ ಸಮಯದ ಹಿಂದಿದ್ದ ಹಸಿವು, ನಿಶ್ಶಕ್ತಿ ಎಲ್ಲವೂ ಮಾಯವಾದಂತಿತ್ತು. ತನ್ನ ಶಕ್ತಿಯ ಬಗ್ಗೆ ತನಗೇ ಆಶ್ಚರ್ಯವೆನಿಸಿ, ಒಂದು ಘಂಟೆಯವರೆಗೂ ದಿಮ್ಮಿ ಕಡಿಯುತ್ತಲೇ ಹೋದ. ಕಟ್ಟ ಕಡೆಗೆ ಬಿರುಕು ಬಿಟ್ಟ ದಿಮ್ಮಿ, ಸ್ವಲ್ಪ ವೇಳೆಯಲ್ಲೇ ಎರಡು ತುಂಡಾಯ್ತು. ಕೊಡಲಿ ದುಖಿಯ ಕೈಗಳಿಂದ ಜಾರಿ ಬಿತ್ತು. ಅದರೊಂದಿಗೇ ತೀವ್ರ ಬಳಲಿದ್ದ ದುಖಿ ಕೂಡ ಕೆಳಗೆ ಬಿದ್ದ.

"ಇಷ್ಟು ಬೇಗ ನಿನಗೆ ಆಯಾಸವಾಯಿತ?" ಕೂಗಿದ ಪಂಡಿತ.

"ಸೌದೆಯನ್ನೆಲ್ಲಾ ಸಣ್ಣಗೆ ಸೀಳಿ ಹಾಕು, ಒಂದು ನಿಮಿಷದ ಕೆಲಸವೂ ಅಲ್ಲ."

ದುಖಿ ಚಲಿಸುವ ಸೂಚನೆಯನ್ನೇ ತೋರದಾದ. ಪಂಡಿತಜಿ ಅವನನ್ನು ಒತ್ತಾಯಿಸದೆ ಸಂಜೆಗಾಗಿ ಬಟ್ಟೆ ಬದಲಿಸಲು ಒಳನಡೆದ. ಪುನಃ ಆತ ಹೊರ ಬಂದಾಗ ದುಖಿ ಇನ್ನೂ ನೆಲದ ಮೇಲೆ ಬಿದ್ದಿರುವುದನ್ನು ಕಂಡ.

"ವಿಶ್ರಾಂತಿ ತಗೊಂಡಿದ್ದು ಇನ್ನೂ ಮುಗೀಲಿಲ್ವಾ? ಮೇಲೇಳು, ನಾನು ಸಿದ್ಧನಾಗಿದ್ದೀನಿ, ಹೋಗೋಣ."

ಈಗಲೂ ದುಖಿ ಮಿಸುಕಾಡಲಿಲ್ಲ. ಪಂಡಿತಜಿ ಹತ್ತಿರ ಹೋಗಿ ನೋಡಿದಾಗ ದುಖಿ ಸತ್ತಿದ್ದ! ದಿಗ್ಭ್ರಮೆಗೊಂಡ ಪಂಡಿತ ಮನೆಯೊಳಗೋಡಿ, ಹೆಂಡತಿಗೆ ಕೂಗಿ ಹೇಳಿದ "ದುಖಿ ಸತ್ತುಹೋಗಿದ್ದಾನೆ."

"ಈಗಿನ್ನೂ ಸೌದೆ ಒಡೆಯುತ್ತಿದ್ದನಲ್ಲ ಅವನು?" ಆಶ್ಚರ್ಯಗೊಂಡ ಪಂಡಿತನ ಹೆಂಡತಿ ಕೇಳಿದಳು.

"ವಿಪರೀತ ಬಳಲಿಕೆಯಿಂದ ಆತ ಸತ್ತಿದ್ದಾನೆ. ಈಗೇನು ಮಾಡೋದು?"

"ಅದರ ಬಗ್ಗೆ ಯೋಚನೆ ಮಾಡೋದೇನಿದೆ? ನೀವೇನು ಅವನನ್ನು ಕೊಂದಿಲ್ವಲ್ಲಾ? ಬಂದು ಹೆಣ ಒಯ್ಯುವಂತೆ, ಚಮಾರನ ಹಟ್ಟಿಗೊಂದು ಸಂದೇಶ ಕಳಿಸಿ" ದೃಢವಾಗಿ ಹೇಳಿದಳು ಪಂಡಿತನ ಪತ್ನಿ. ಈ ಸುದ್ದಿ ಹಳ್ಳಿಯಲ್ಲಿ ಕಾಳ್ಗಿಚ್ಚಿನಂತೆ ಹಬ್ಬಿತು. ಸಂಪ್ರದಾಯಸ್ಥರು ಆ ದಾರಿಯಲ್ಲಿ ಬರುವುದನ್ನೇ ಬಿಟ್ಟರು. ಅದೇ ದಿಕ್ಕಿನಲ್ಲಿದ್ದ ಹಳ್ಳಿಯ ಬಾವಿಗೆ ನೀರು ತರಲು ಹೋಗುವುದನ್ನು ನಿಲ್ಲಿಸಿದರು. ಪವಿತ್ರರಾದ ತಾವು, ಚಮಾರನ ಹೆಣದ ಪಕ್ಕ ಹಾದು ಹೋಗಿ, ಅಪವಿತ್ರರಾಗುವುದೆ?

ಈ ಸುದ್ದಿ ಕೇಳಿದ ಕೂಡಲೇ, ಗೌಂಡ ಚಮಾರನ ಹಟ್ಟಿಗೋಡಿದ. ಈ ವಿಷಯವನ್ನು ಪೋಲೀಸರಿಗೆ ತಿಳಿಸಬೇಕು. ಯಾರಾದರೂ ಹೆಣ ತರಲು ಹೋದರೆ, ಅವರನ್ನು ಪೋಲೀಸರಿಗೆ ಹಿಡಿದುಕೊಡಲಾಗುವುದೆಂದು ಎಲ್ಲರನ್ನೂ ಎಚ್ಚರಿಸಿದ. ಒಬ್ಬ ಮನುಷ್ಯ ಸತ್ತಿದ್ದಾನೆ. ಅದಕ್ಕೆ ಕಾರಣ ಒಬ್ಬ ಬ್ರಾಹ್ಮಣ, ಅಂದ ಮಾತ್ರಕ್ಕೆ ತಪ್ಪು ಕಡಿಮೆಯದೇನಲ್ಲವಲ್ಲ.'

ಚಮಾರರರು ಹಿಮ್ಮೆಟ್ಟಿದರು. ಅವರನ್ನು ನಿಯಂತ್ರಿಸಲು ಪೋಲೀಸರ ಬೆದರಿಕೆಯೇ ಸಾಕಿತ್ತು. ನ್ಯಾಯಕ್ಕೆ ವಿರೋಧವಾಗಿ ಕೆಲಸ ಮಾಡಲು ಯಾರಿಗೆ ಇಷ್ಟ?

ಸಂಜೆಯಾದರೂ ಯಾರೂ ಬರದಿದ್ದಾಗ ಪಂಡಿತಜೀ ತಾನೇ ಚಮಾರರ ಹಟ್ಟಿಗೆ ಹೋದ. ಆಗಲೂ ಚಮಾರರರು ಬರಲು ನಿರಾಕರಿಸಿದರು. ಬೆದರಿಕೆ, ಅನುನಯ ಎಲ್ಲವೂ ನಿಷ್ಫಲ. ಸ್ವರ್ಗದಲ್ಲಿ ತಮ್ಮ ಜಾಗ ಕಳೆದುಕೊಳ್ಳುವ ಹೆದರಿಕೆಗಿಂತ, ಪೋಲೀಸರ ಹೆದರಿಕೆ ಬಲವತ್ತರವಾಗಿತ್ತು. ಪಂಡಿತ ನಿರಾಶನಾಗಿ ಹಿಂತಿರುಗಬೇಕಾಯ್ತು.

ಮಧ್ಯರಾತ್ರಿಯ ವೇಳೆಯಾದರೂ ಹೆಣ ತೆಗೆಯಲು ಯಾರೂ ಬರಲಿಲ್ಲ. ಚಮಾರ ಹೆಂಗಸರ ಅಳು, ಆ ಕಲ್ಲು ವಿಗ್ರಹಗಳ ಶಾಂತಿಯನ್ನೂ ಕೆಡಿಸುವಂತಿತ್ತು. ಆದರೆ ಬ್ರಾಹ್ಮಣರು ಚಮಾರನ ಹೆಣ ತೆಗೆಯುವುದು ಹೇಗೆ ಸಾಧ್ಯ? ಶಾಸ್ತ್ರಗಳೂ ಸಮ್ಮತಿಸುವುದಿಲ್ಲವಲ್ಲ!

ಕಟ್ಟಕಡೆಗೆ ಆ ಹೆಂಗಸರೂ ಎದ್ದು ಹೋದರು. ಆದರೂ ಯಾವೊಬ್ಬ ಚಮಾರನ ಸುಳಿವೂ ಇಲ್ಲ. ಮೃತ ಶರೀರ, ದುರ್ಗಂಧ ಬೀರುತ್ತಿತ್ತು. ಪಂಡಿತಜಿ ಗೊಂದಲಕ್ಕೆ ಸಿಕ್ಕಿಬಿದ್ದಿದ್ದ. ಇದ್ದಕ್ಕಿದ್ದಂತೆ ಅವನಿಗೊಂದು ಆಲೋಚನೆ ಹೊಳೆಯಿತು. ಮನೆಯೊಳಗೋಡಿ ಉದ್ದನೆಯ ಹಗ್ಗವೊಂದನ್ನು ತಂದು ಒಂದು ತುದಿಗೆ ಕುಣಿಕೆ ಬಿಗಿದು, ಅದನ್ನು

ಹೆಣದ ಕಾಲು ತೂರುವಂತೆ ಬೀಸಿ ಒಗೆದ. ಹಗ್ಗದ ಮತ್ತೊಂದು ತುದಿ ಹಿಡಿದು, ಹೆಣವನ್ನು ಊರಾಚೆಯ ಹೊಲಗಳತ್ತ ಎಳೆದೊಯ್ದ. ಇನ್ನೂ ಬೆಳಗಿನ ಝಾವ. ಹಳ್ಳಿ, ಎಲ್ಲ ನಿದ್ರೆಯಲ್ಲಿತ್ತು. ಪಂಡಿತಜಿ ಹಿಂತಿರುಗಿ, ಮನೆ ಸೇರಿ, ಗಂಗೆಯ ನೀರಿನಲ್ಲಿ ಶುಭ್ರವಾಗಿ ಸ್ನಾನ ಮಾಡಿ, ದುರ್ಗಾಪಾಠ ಪಠಣಕ್ಕೆ ಶುರು ಮಾಡಿದ. ಆಚೆ ಹೊಲದಲ್ಲಿ ನರಿ, ಹದ್ದುಗಳು ದುಖಿಯನ ಹೆಣದ ಸುತ್ತ ಸೇರಿದ್ದವು. ಭಕ್ತಿ, ಸೇವೆ, ನಂಬಿಕೆಯ ಜೀವನಕ್ಕೆ ಸರಿಯಾದ ಪರಿಹಾರ ದೊರೆತಿತ್ತು —ಆ ಚಮಾರನ ಮುಕ್ತಿಯಲ್ಲಿ!



ಭೇದಭಾವಗಳನ್ನು ಹೊತ್ತುಕೊಂಡೇ ನಾವು ಹುಟ್ಟಿಬರುವುದಿಲ್ಲ. ಅವನ್ನು ನಾವು, ಬುದ್ಧಿಪೂರ್ವಕ ಕಲಿಯುತ್ತೇವೆ. ಎಲ್ಲರೂ ಹುಟ್ಟಿ ಬಂದುದು ತಾಯಿಯ ಹೊಟ್ಟೆಯಿಂದಲೇ, ಯಾರೂ ಮೇಲಿಂದಲೇ ಹುಟ್ಟಿ ಬಂದಿಲ್ಲ. ಭೇದಭಾವವಿಲ್ಲದೇ ತಾಯಿ ಹೊಟ್ಟೆಯಿಂದಲೇ ಹುಟ್ಟಿಬಂದ ನಾವೆಲ್ಲರೂ ಭೇದಭಾವ ತೊರೆದು ಜೀವಿಸಲು ಕಲಿಯಬೇಕು.

—ಶ್ರೀ ಚೈತನ್ಯ

ನಮ್ಮ ಕಷ್ಟಕಾರ್ಪಣ್ಯಗಳನ್ನು ಹೋಗಲಾಡಿಸಿಕೊಳ್ಳಲು ಹೋರಾಡುವಾಗಲೆಲ್ಲ ಇತರರಿಗೂ ಅಂತಹ ಕಷ್ಟಕಾರ್ಪಣ್ಯಗಳಿರುತ್ತವೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

—ಅಬ್ರಾಹಂ ಲಿಂಕನ್

ಒಣಭೂಮಿಯಲ್ಲಿ ಕೃಷಿ ಸಾಧ್ಯತೆಗಳು

ಎ. ಪಿ. ಚಂದ್ರಶೇಖರ
'ಇಂದ್ರಪ್ರಸ್ಥ', ಸಾವಯವಫಾರ್ಮ ಮತ್ತು ನರ್ಸರಿ
ಕಳಲವಾಡಿ ಗ್ರಾಮ, ಅಂಚೆ ಉದ್ಬೂರು
ಮೈಸೂರು ೫೭೦ ೦೦೮

ಬೇಲಿ ಬೇಕು—ಶತ್ರು ಒಳ ಬರದಂತೆ ತಡೆಯಲು, ಮಿತ್ರ ಕಳೆದುಹೋಗದಂತೆ ಕಾಪಾಡಲು ; ಬೇಲಿ ಇರಬೇಕು—ನನ್ನ ಅಹಂಕಾರಕ್ಕೆ ಮಿತಿ ವಿಧಿಸಲು ಮತ್ತು ನನ್ನ ವಿರುದ್ಧ ನನ್ನನ್ನೇ ರಕ್ಷಿಸಲು ! ಬೇಲಿ ಎಂದರೆ ಏನು ? ನಿಸರ್ಗದೊಂದಿಗೆ ಇರುವಾತನಿಗೆ ವಿವರಣೆ ಅನಗತ್ಯ ; ದೂರವಾದವನಿಗೆ ವಿವರಣೆ ವ್ಯರ್ಥ.

ನಮ್ಮ ಜೀವನದ ಉದ್ದೇಶ ಏನು ?

ಸುಖ ಸಂತೋಷ —ಮನುಷ್ಯರಾದ ನಮ್ಮೆಲ್ಲರ ಜೀವಿತದ ಉದ್ದೇಶ. ನಮ್ಮೆಲ್ಲ ಕಾರ್ಯ, ಚಟುವಟಿಕೆಗಳು ಮುಖದ ಅರಸುವಿಕೆಯಲ್ಲಿ ನಡೆಯುತ್ತಿದೆ. ನಾವು ಕೆಲಸ ಮಾಡುವುದು ಅಥವಾ ಮಾಡದಿರುವುದು ಸುಖಕ್ಕಾಗಿಯೆ. ನಾವು ಸುಖವಾಗಿರಲು ಏನು ಬೇಕು? ಧಾರಾಳವಾಗಿ ಆಹಾರ ಬೇಕು. ತಿರುಗಾಡಬೇಕು. ಕಾರು, ಟಿ.ವಿ. ಫ್ರಿಜ್ ಹೀಗೆ ಹಲವೊಂದು ವಸ್ತುಗಳು ಬೇಕು. ನಮ್ಮ ನೆರೆಮನೆಯಲ್ಲಿರುವುದು ನಮಗೆ ಬೇಕು. ನಮ್ಮ ನೆರೆ ದೇಶಗಳಲ್ಲಿರುವುದು ನಮಗೆ ಬೇಕು. ನಾವು ಇಂಗ್ಲೀಷರಾಗಬೇಕು. ಅಮೇರಿಕದವರಾಗಬೇಕು. ನಮ್ಮ ಅಗತ್ಯತೆಗಳು ಅವರವಾಗಬೇಕು.

ಆಹಾರಕ್ಕಾಗಿ ಕಾಡು ಕಡಿದು ಕೃಷಿ ಮಾಡಿದ್ದೇವೆ. ಗೊಬ್ಬರಕ್ಕಾಗಿ ರಾಸಾಯನಿಕಗಳನ್ನು ಸಂಸ್ಕರಿಸಿದ್ದೇವೆ. ನೀರಾವರಿಗಾಗಿ ಜಲ ಯೋಜನೆಗಳನ್ನು ಕೈಗೊಂಡಿದ್ದೇವೆ. ಕೀಟ ವೈರಿನಾಶಕ್ಕಾಗಿ ಮಾರಕಾಸ್ತ್ರಗಳನ್ನು ಆವಾಹಿಸಿದ್ದೇವೆ. ನಮಗೆ ಸುಖ ಕೊಡುವ ವಸ್ತುಗಳನ್ನು ಸೃಷ್ಟಿಸಲು ಕೈಗಾರಿಕೆಗಳನ್ನು ಕೈಗೊಂಡಿದ್ದೇವೆ ಮಾರ್ಪಾಟು ಮಾಡಿದ್ದೇವೆ. ಧಾರಾಳವಾಗಿ ಹಣ ಸಂಪಾದಿಸಿದ್ದೇವೆ.

ಹವಾನಿಯಂತ್ರಿತ ಮನೆಯಲ್ಲಿ ವಾಸ ಮಾಡುತ್ತೇವೆ. ಲಕ್ಷಗಟ್ಟಲೆ ಖರ್ಚು ಮಾಡಿ ಬೆಳೆಯುವ ಸ್ಟ್ರಾಬೆರಿ, ತಿನ್ನುವ ಸಾಮರ್ಥ್ಯ ಪಡೆದಿದ್ದೆವೆ. ಸಂಸ್ಕರಿಸಿದ ಸೂರ್ಯಕಾಂತಿ ಎಣ್ಣೆಯಲ್ಲಿ ಹುರಿದು, ಸುಂದರವಾಗಿ ಕವಚಗಳೊಳಗೆ ತುಂಬಿ ಮಾರುವ ಆಲೂಗಡ್ಡೆ ಚಿಪ್ಸನ್ನು ಎಲ್ಲೆಂದರಲ್ಲಿ, ಎಷ್ಟೆಂದರಷ್ಟು ತಿನ್ನುವ ಯೋಗ್ಯತೆ ಹೊಂದಿದ್ದೇವೆ. "ದಿನಕ್ಕೊಂದು ಮೊಟ್ಟೆ ಆರೋಗ್ಯದ ಗುಟ್ಟು —ವಂಚಕರ ಪ್ರಚಾರ ತಂತ್ರವನ್ನು ನಾವು

ಸ್ವೀಕರಿಸಿದ್ದೇವೆ. ವಿಕೃತ ಕಾಮನೆಗಳಿಂದ ಅಂತೋರಿಯಂ ಗ್ಲಾಡಿಯೋಲಸ್‌ಗಳಂಥಾ ದುಬಾರಿ ಹೂವುಗಳನ್ನು ನಮ್ಮ ಸುಂದರವಾದ ಮೇಜುಗಳ ಮೇಲೆ ಅಲಂಕರಿಸಿದ್ದೇವೆ. ಮನೆಯಲ್ಲಿ ಮಾಳಿಗೆಯ ಮೇಲೆ—ಮೇಲೊಂದು ಮಂಚ, ಮಂಚದ ಮೇಲೊಂದು ಮೆತ್ತನೆಯ ಹಾಸಿಗೆ. ಅಲ್ಲಿ ಸೊಂಟ ನೋವು ಬರುವವರೆಗೆ ಮಲಗುವಷ್ಟು ಮುಂದುವರಿದಿದ್ದೇವೆ.

ಸುಖ ಎಲ್ಲಿದೆ?

ಹೀಗೆ ಸುಖೋಪಭೋಗಗಳ ಉತ್ತುಂಗದಲ್ಲಿರುವ ನಾನು (ನಾವು) ಸಾಮಾನ್ಯರ ನೂರಾರು ಮನೆಗಳಿಗೆ ಸಮಾನವಾಗುವಷ್ಟು ಬೆಲೆಯುಳ್ಳ ಕಾರೊಂದರಲ್ಲಿ ಒಂದು ದಿನ ಪ್ರಯಾಣ ಮಾಡುತ್ತಿದ್ದೆ. ಬೇಸಿಗೆಯ ಕಾಲ. ಬರೇ ಬಿಸಿಲು ಬೋಳು ಮಾರ್ಗ. ಮಾರ್ಗ ಮಧ್ಯದಲ್ಲಿ ಕಾರು ಕೆಟ್ಟುಹೋಯಿತು, ಕಾರಿನಲ್ಲಿ ಹೋಗುವುದನ್ನು ಕಲಿತಿರುವ ನಾನು ರಿಪೇರಿಯನ್ನು ಕಲಿತಿಲ್ಲ. ಸಂದರ್ಭದ ಒತ್ತಡದಲ್ಲಿ ನಾನು ನಡೆಯುವುದು ಅನಿವಾರ್ಯವಾಯಿತು. ನನಗೆ ಕಾಲಿದೆ ನಿಜ. ಆದರೆ ಕಾಲಿಗೆ ನಡೆದು ರೂಢಿ ಇಲ್ಲ. ಬಿಸಿಲೋ ಬಿಸಿಲು, ತಲೆ ಹೊಟ್ಟಿ ಹೋಗುವ ಬಿಸಿಲು ಎಲ್ಲೂ ನಿಲ್ಲಲು, ಕೂರಲು ಆಸ್ಪದವಿಲ್ಲ. ಬೋಳು, ಬೋಳು, ಬೋಳು. "ತಲೆ ಇಲ್ಲದಿದ್ದರೇ ಎಷ್ಟು ಚೆನ್ನಾಗಿತ್ತು" ಎಂದೆನಿಸುತ್ತಿತ್ತು. ಬಳಲಿದೆ. ಬಾಯಾರಿದೆ. ಹಸಿದಿದೆ.

ಆ ಬಿಸಿಲಲ್ಲಿ ನನಗೆ ಭಾರವಾಗಿದ್ದ ನನ್ನ ತಲೆಯನ್ನು ಸ್ವಲ್ಪ ತಿರುಗಿಸಿ ನೋಡಲಾಗಿ ನನ್ನ ಅದೃಷ್ಟಕ್ಕೆ ಅಲ್ಲೊಂದು ಮರವಿತ್ತು. ವಿಶಾಲವಾಗಿ ತನ್ನ ರೆಂಬೆ ಕೊಂಬೆಗಳನ್ನು ಆಕಾಶದ ವಿಸ್ತಾರದಲ್ಲಿ ಹರಡಿತ್ತು. ನನ್ನನ್ನು ಪ್ರೀತಿಯಿಂದ ಕರೆದಿತ್ತು. ಅದು ನೇರಳೆ ಹಣ್ಣಿನ ಮರವಾಗಿತ್ತು. ಹಲವಾರು ಹಕ್ಕಿಗಳ ನೆಲೆಯಾಗಿತ್ತು.

"ಹುಲಿ ಹಸಿದರೂ ಮಾಂಸವನ್ನಲ್ಲದೆ ಹಣ್ಣು ತಿನ್ನದಂತೆ" ಅಂಥಾ ಆತ್ಮಾಭಿಮಾನ ಅದಕ್ಕೆ ಆದರೆ ನನ್ನ ಅಂತಸ್ತನ್ನು ಕಾಯ್ದುಕೊಳ್ಳುವ ಸಂದರ್ಭ ಅದಾಗಿರಲಿಲ್ಲ, ಆ ಸಾಮರ್ಥ್ಯ ನನಗಿರಲಿಲ್ಲ. ಹಕ್ಕಿಗಳು ಕಚ್ಚಿ ಬಿದ್ದಿದ್ದ ನೇರಳೆ ಹಣ್ಣುಗಳನ್ನು ಆಯ್ದು ತಿನ್ನತೊಡಗಿದೆ. ಅಂತಾರಾಷ್ಟ್ರೀಯ ಗುಣಮಟ್ಟವನ್ನು ಕಾಯ್ದುಕೊಂಡು ಬೆಳೆದಂಥ. ಆಕರ್ಷಕವಾದ, ಆ್ಯಪಲ್, ದ್ರಾಕ್ಷಿಗಳಂಥಾ ಹಣ್ಣುಗಳನ್ನು ಮಾತ್ರ ತಿನ್ನುತ್ತಿದ್ದ ನನ್ನ ನಾಲಿಗೆಗೂ ಈ ನೇರಳೆ ಹಣ್ಣುಗಳು ಆಪ್ಯಾಯಮಾನವಾದವು. ಹಸಿವು ಬಾಯಾರಿಕೆಗಳಡಗಿದವು. ಉನ್ನತವಾದ ಹಾಸಿಗೆಯ ಮೇಲೆ ಮಲಗಿದರೂ ನಿದ್ರೆ ಬಾರದಿರುವ ಈ ದೇಹಕ್ಕೆ ಆ ಮರದ ಅಡಿಯ ತರಗೆಲೆಯ ಹಾಸು ಸುಖದ ಸುಷುಪ್ತಿಗೆಯಾಯಿತು.

"ಹಸಿದಾಗ ತಿಂದರೆ ಸುಖ. ನಿದ್ರೆ ಬಂದಾಗ ಮಲಗಿದರೆ ಸುಖ. ಸುಖ ಹಸಿವಿನಲ್ಲಿದೆ–ತಿಂಡಿತೀರ್ಥಗಳಲ್ಲಿಲ್ಲ. ಸುಖ ದಣಿವಿನಲ್ಲಿದೆ–ಹಾಸಿಗೆಯಲ್ಲಿಲ್ಲ"–ಮರದ ಅಡಿಯಲ್ಲಿ ನಿದ್ರೆಯಿಂದೆದ್ದಾಗ ನನ್ನಲ್ಲಿ ಜ್ಞಾನೋದಯವಾಯಿತು. ನನ್ನ ತಲೆ ಹೊಟ್ಟಿ ಹೋಗುವ ಬಿಸಿಲಿನಲ್ಲೂ ಈ ಮರ ಅದೆಷ್ಟು ಸೊಂಪಾಗಿದೆ, ಸುಂದರವಾಗಿದೆ, ಸಂತಸವಾಗಿದೆ, ಸುಖವಾಗಿದೆ! ತನ್ನ ಸುಖವನ್ನು ಸಂತಸವನ್ನು ಎಷ್ಟೊಂದು ಜೀವಿಗಳಿಗೆ ಹಂಚಿದೆ. ಆಸರೆಯಾಗಿದೆ. ಎಷ್ಟೊಂದು ಜೀವಿಗಳಿಗೆ ಆಹಾರವಾಗಿದೆ. ಆಗಂತುಕನಾದ ನನ್ನನ್ನೂ ಪ್ರೀತಿಯಿಂದಲೇ ಸ್ವಾಗತಿಸಿದೆ.

ಸುಖ ಹೆಚ್ಚಿಸುವ ಬಗೆ ಏನು ?

ಇಷ್ಟೊಂದು ನಿಃಸ್ವಾರ್ಥವಾಗಿ ಸುಖವನ್ನು ಹಂಚುವುದರಿಂದ ಮರಗಳ ಸುಖ ಕಡಿಮೆಯಾಗುವುದಿಲ್ಲವೇ ? ಸುಖ ಹಂಚುವುದರಿಂದ ಹೆಚ್ಚುವುದು. ಹಾಗಾದರೆ ನಾನೇನು ಮಾಡಬೇಕು ? ನಿಮ್ಮ ಅನುಭವ ಹೇಗೋ ನನಗೆ ಗೊತ್ತಿಲ್ಲ ಭಾರಿಯಾದ ಬಂಗಲೆಯೊಳಗೆ ಸಿಗದ ಸುಖ, ವಿದ್ಯುತ್, ಫಂಖದ ಕೆಳಗೆ ಬಾರದ ಸುಖ, ಹವಾನಿಯಂತ್ರಿತ ಕೊಠಡಿಯಲ್ಲೂ ದೊರೆಯದ ಸುಖ, ಮಧ್ಯಾಹ್ನದ ಬಿರು ಬಿಸಿಲಲ್ಲಿ ಮಹತ್ತಾಗಿ ಬೆಳೆದ ಮರದ ಕೆಳಗೆ ಸಿಗುತ್ತದೆ ಹಾಗಾದರೆ ಆಧುನಿಕ ತಂತ್ರವಿದ್ಯೆಯಾವುದು ?

'ಅತ್ಯಂತ ಪುರಾತನವಾದ, ಆದರೂ ಅತ್ಯಾಧುನಿಕವಾದ ಮರಗಳನ್ನು ಬೆಳೆಸುವುದೊಂದೇ ಎಲ್ಲ ಸಮಸ್ಯೆಗಳಿಗೆ ಪರಿಹಾರವೆಂಬ ಶುದ್ಧ ಸತ್ಯ ನನಗೆ ಗೋಚರವಾಯಿತು. ಬಿರು ಬಿಸಿಲಲ್ಲಿ ನನ್ನ ಬೇಗೆಯನ್ನು ತಣಿಸಿದ, ಎಲ್ಲರ ಬೇನೆಗಳನ್ನು ತಣಿಸಬಲ್ಲ ಮರಗಳನ್ನು ಹೆಚ್ಚು ಹೆಚ್ಚು ಬೆಳೆಸುವುದರಿಂದ ಸ್ವಕಾರ್ಯವೂ, ಸಮಾಜಕಾರ್ಯವೂ ಏಕಕಾಲದಲ್ಲಿ ನಡೆಯುತ್ತವೆಂಬ ಸತ್ಯ ಸಾಕಾರವಾಯಿತು.

ಒಣಭೂಮಿ ಅಭಿವೃದ್ಧಿಗೆ ತಂತ್ರಜ್ಞಾನವೇನು ?

ಒಣಭೂಮಿಯಲ್ಲಿ ಕೃಷಿ ಸಾಧ್ಯತೆಗಳ ಬಗೆಗೆ ಮಾತನಾಡುತ್ತ, ನೂರು ತಂತ್ರಗಳ ಬಗ್ಗೆ ಹೇಳಬಹುದು. ಸಾವಿರ ಕೋಷ್ಟಕಗಳನ್ನು ಕೊಡಬಹುದು. ಮೇಲ್ಪಟ್ಟು ಮಾತುಗಳನ್ನು ಆಡಬಹುದು. ಆದರೆ ಮರಗಿಡಗಳನ್ನುಳಿದು ಹಸುರಿನ ಬುಡತರಿದು ಏನು ಮಾಡಿದರೂ ಪ್ರಯೋಜನವಾಗಲಾರದು, ಒಣಭೂಮಿಯಲ್ಲಿ ನಡೆದು ಸೋತ ನನ್ನಲ್ಲಿ ಹೊಸತನವನ್ನು ತುಂಬಿದ ಮರ ಗಿಡಗಳು (ಹಸುರು) ಪ್ರಕೃತಿಯ ಅದ್ಭುತ ತಂತ್ರವಿದ್ಯೆ. ಬೆಂಕಿಯ ಚೆಂಡಾಗಿದ್ದ ಭೂಮಿಯನ್ನು ಜೀವಧಾರಕವಾಗಿಸಿದ ಮಾಂತ್ರಿಕ ಶಕ್ತಿ ಮರಗಿಡಗಳು ಕಾರು, ಫ್ರಿಜ್, ಟಿ. ವಿ. ಗಳಿಗಿಂತ ಮೊದಲು ಬೇಕಾದದ್ದು ಶುದ್ಧಗಾಳಿ, ನೀರು ; ಮಣ್ಣನ್ನು ಸೃಷ್ಟಿಮಾಡಿದ ಆದರ್ಶ ರೂಪಿ ಮರಗಿಡಗಳು.

ಜೀವ ಸೃಷ್ಟಿಯಲ್ಲಿ ಮರಗಳ ಪಾತ್ರವೇನು ?

ಇಂಥ ಮರಗಿಡಗಳು ಭೂಮಿಯಲ್ಲಿ ಶೇಕಡಾ ೭೦ ಆದ ಅಂದಿನ ಪರಿಸರದಲ್ಲಿ ಮಾನವನ ಅವತಾರವಾಯಿತು. ಯಾಕಾಯಿತು ? ನನ್ನ ತರ್ಕ ಹೀಗೆ ಮೊದಲೇ ಹೇಳಿದಂತೆ ಭೂಮಿ ಬೆಂಗಾಡಾಗಿತ್ತು. ಇಲ್ಲಿ ಹಂತ ಹಂತಗಳಲ್ಲಿ ಹಸಿರು ಉತ್ತಾರಣೆಗೊಳ್ಳುತ್ತ ಜೀವಿಗಳೂ ಹೆಚ್ಚುತ್ತ ಹೋದುವು. ನೀರಿನಿಂದ, ಗಾಳಿಯಿಂದ ಬೀಜ ಪ್ರಸಾರವಾಗದ ಸಂದರ್ಭಗಳಲ್ಲೆಲ್ಲಾ ಈ ಜೀವಿಗಳು ಬೀಜಪ್ರಸಾರದಲ್ಲಿ ನೆರವಾದುವು. ಕೀಟಗಳಿಂದ, ಹಕ್ಕಿಗಳಿಂದ, ಪ್ರಾಣಿಗಳಿಂದ ಬೀಜಪ್ರಸಾರ ಹೆಚ್ಚುತ್ತ ಹೋದಂತೆ ಹೆಚ್ಚು ಹೆಚ್ಚು ಕಾಡು ಬೆಳೆಯಿತು. ಜೀವಿಗಳು ಹೆಚ್ಚಾದಷ್ಟು ಕಾಡು ಹೆಚ್ಚುತ್ತಾ ಹೋಯಿತು. (ಕಡಿಮೆ ಆದದ್ದಲ್ಲ) ಹೆಚ್ಚುತ್ತಾ ಹೋದ ಕಾಡನ್ನು ಕಡಿಮೆ ಮಾಡಲು ಮನುಷ್ಯ ಸೃಷ್ಟಿಗೊಂಡನೇ ? ಖಂಡಿತ ಅಲ್ಲ. ಶೇಕಡಾ ೭೦ ಕಾಡು ಪ್ರಕೃತಿಯಲ್ಲಿ ನಿರ್ಮಾಣವಾಗಲು

ಅನೇಕ ಜೀವಿಗಳು ಪಾಲುಗೊಂಡವು ಆದರೆ ಉಳಿದ ಮೂವತ್ತು ಭಾಗ? ತುಂಬು ಸಮಸ್ಯೆಯ ಭೂ ಭಾಗದಲ್ಲಿ ಕಾಡು ಬೆಳೆಸುವ ಸಾಮರ್ಥ್ಯ ಈ ಜೀವಿಗಳಿಗೆ ಇಲ್ಲವೆಂದು ತಿಳಿದು ಪ್ರಕೃತಿ ಅತ್ಯಂತ ಸಮರ್ಥ ಜೀವಿಯಾದ ಮನುಷ್ಯನನ್ನು ಸೃಷ್ಟಿ ಮಾಡಿತು. ಆದರೆ ಮನುಷ್ಯ ಮಾಡಿದ್ದೇನು?

ಸುಖದ ವಿಪರೀತ ಕಲ್ಪನೆಯಲ್ಲಿ ಅತಿರೇಕವಾಗಿ ಕಾಡು ಕಡಿದು ಶೇಕಡಾ ಏಳಕ್ಕೆ ಇಳಿಸಿದ್ದು. ಎಲ್ಲೆಲ್ಲೂ ಮತ್ತೆ ಒಣಭೂಮಿ ಮಾಡಿದ್ದು ಪ್ರಕೃತಿಯ ಎಲ್ಲಾ ಚಿತ್ರಗಳನ್ನು ನಾಶಗೊಳಿಸಿದ್ದು.

ತತ್ವವಿಲ್ಲದ ತಂತ್ರವಿದ್ಯೆಯಿಂದ ಪ್ರಗತಿ ಸಾಧ್ಯವೇ?

ತಂತ್ರ ವಿದ್ಯೆ ಎಂದರೆ ಪ್ರಕೃತಿನಾಶ ಮಾತ್ರ ಎಂದಾಗಿದೆ ಇಂದು ಕಾರ್ಖಾನೆಗಳು ಎಂದೂ ಉತ್ಪಾದನಾ ಕ್ಷೇತ್ರಗಳಲ್ಲ. ಪ್ರಕೃತಿಯ ಪರಿವರ್ತನೆಯ ತಾಣಗಳು. ನಿಜವಾದ ನಿರ್ಮಾಣ, ನಿಜವಾದ ಸೃಷ್ಟಿ ಮರಗಳಿಂದ ಮಾತ್ರ. ಇದು ಕೇವಲ ತರ್ಕವಲ್ಲ. ವಾಸ್ತವತೆಗೆ ಹಿಡಿದ ಕನ್ನಡಿ.

ಆದರ್ಶದ ಪರಿಕಲ್ಪನೆ, ಆ ಕುರಿತು ಚಿಂತನೆ ಇಲ್ಲದೆ ಯಾವ ಅಭಿವೃದ್ಧಿಯೂ ಸಾಧ್ಯವಿಲ್ಲ. ಒಣಭೂಮಿ ಅಭಿವೃದ್ಧಿ ಹೇಗೆ? ನಾನು ಈ ಮೊದಲು ಪ್ರಸ್ತಾಪಿಸಿದ ಪ್ರಕೃತಿ ನಿರ್ಮಾಣ ಕಥೆ ಮನವರಿಕೆಯಾಗಿ ಒಣ ಭೂಮಿಯ ಅಭಿವೃದ್ಧಿ ಕನಸು ಮಾತ್ರ ಆದೀತು. ತತ್ವ, ತರ್ಕ ಅರ್ಥವಾದರೆ ಮುಂದಿನ ಕೆಲಸ—ವೃಕ್ಷಾಧಾರಿತ ಕೃಷಿ. ಆಗ ಜೀವನ ಬಹಳ ಸಲೀಸು.

ನನ್ನ ತರ್ಕ ಕೇಳುತ್ತಾ ನಿಮ್ಮಲ್ಲಿ ಖಂಡಿತವಾಗಿ ಒಂದು ಪ್ರಶ್ನೆ ಉದ್ಭವಿಸಿರಬಹುದು —"ಹಾಗಾದರೆ ನಾವು ಶಿಲಾಯುಗಕ್ಕೆ ಹೋಗಬೇಕೇ?" ಬೇಡ ಖಂಡಿತ ಬೇಡ, ನಾವು ಶಿಲಾಯುಗಕ್ಕೆ ಹೋಗಬಾರದು. ಅದಕ್ಕಾಗಿ ಕೇವಲ ಐವತ್ತು ವರ್ಷಗಳಷ್ಟು ಮಾತ್ರ ಹಿಂದಕ್ಕೆ ಹೋಗಬೇಕು. ಶೇಕಡಾ ಇಪ್ಪತ್ತು–ಮೂವತ್ತು ಕಾಡಿದ್ದ ಆ ದಿನಗಳು ನಮಗಿಂದು ಬೇಕು. ಹಾಗಾಗದಿದ್ದರೆ, ನಾವು ಇನ್ನೂ ಕಾಡನ್ನು ಕಳಕೊಂಡು, ಒಣಭೂಮಿ, ಒಣಕೆರೆ ಹೆಚ್ಚುತ್ತಾ ಹೋಗುವುದು. ಆಗ ನಾವು ಹೋಗುವುದು ಶಿಲಾಯುಗಕ್ಕೂ ಅಲ್ಲ. ಸರೀಸೃಪ ಯುಗಕ್ಕೂ ಅಲ್ಲ. ಅದಕ್ಕು ಹಿಂದೆ ಅಮೀಬಾಯುಗಕ್ಕೆ.

ನಾವು–ಆಧುನಿಕವಾದ ಯಾವುದೇ ಸರ್ಕಸ್ಸು ಮಾಡಬಹುದು ಆದರೆ ಶೇಕಡಾ ಮುವತ್ತು ಕಾಡು ಉಳಿಸಿಕೊಂಡು. ನಮ್ಮ ಮೂಲಭೂತ ಅಗತ್ಯಗಳಾದ ಗಾಳಿ, ನೀರು, ಮಣ್ಣಿನ ಆರೋಗ್ಯವನ್ನು ಕಾಯ್ದುಕೊಂಡು.

ಒಣಭೂಮಿ ಅಭಿವೃದ್ಧಿ ಎಂಬುದು ಮಹೋನ್ನತ ಆದರ್ಶ ಇದನ್ನು ತ್ಯಾಗದ ಸೈದ್ಧಾಂತಿಕ ಹಿನ್ನೆಲೆ ಇಲ್ಲದೆ ಸಾಧಿಸುವುದು, ಎಂದೂ ಸಾಧ್ಯವಿಲ್ಲ. ಬದು ಕಟ್ಟುವುದು, ಅಡ್ಡ ಉಳುಮೆ ಮಾಡುವುದು, ಕೆರೆ ಕಟ್ಟೆಗಳನ್ನು ನಿರ್ಮಿಸುವುದು, ಹೊಳೆತ್ತುವುದು, ನೀರು ಕಟ್ಟಿ ಸೇರುವಂತೆ ಕಣಿ ಮಾಡುವುದು ವನಮಹೋತ್ಸವ ಇತ್ಯಾದಿಗಳು ಪರಿಣಾಮ ಬೀರಬೇಕಾದರೆ ನಾವು ನಿಜವಾಗಿ ಕಾಯಕಕ್ಕೆ ಮಹತ್ವ ಕೊಡಬೇಕಾಗುತ್ತದೆ. ಕುಳಿತು ಉಣ್ಣುವ ಸುಖದ ಕಲ್ಪನೆ ಬದಲಾಗಬೇಕಾಗುತ್ತದೆ. ಹಣದಿಂದ ಹಣ-

ಮಾಡುವ ಅನುತ್ಪಾದಕ ದಂಥೆ ನಿಲ್ಲಬೇಕಾಗುತ್ತದೆ.

ಪ್ರಕೃತಿಯನ್ನು ಅರ್ಥಮಾಡುವ ಬಗೆ ಹೇಗೆ?

ಬತ್ತ, ರಾಗಿ, ಜೋಳ, ಉದ್ದು, ಸೂರ್ಯಕಾಂತಿ ಹೀಗೆ ಕಾಳುಗಳು ನಮಗೆ ಇಂದು ಆಹಾರ. ಇಲ್ಲಿರುವ ಭಾರೀ ಸಮಸ್ಯೆಗಳನ್ನು ಅರ್ಥಮಾಡಿ ಕಾಳು ಕಡ್ಡಿ ಚೆನ್ನಾಗಿ ಬೆಳೆಯಬೇಕಾದರೆ ಅಲ್ಲಿ ಮರಗಿಡ ಇರಬಾರದು. ಕಾಳುಕಡ್ಡಿ ನಮಗೆ ಮುಖ್ಯವಾದಾಗ ಮರಗಿಡಗಳನ್ನು ಮೂರುಕಾಸಿಗೆ ಮಾರುವ ಪ್ರವೃತ್ತಿಗೆ ಇಳಿಯುತ್ತೇವೆ. (ಒಂದು ಮರದ ವ್ಯಾವಹಾರಿಕ ಬೆಲೆ ಒಂದು ಸಾವಿರವಿದ್ದರೆ ಪ್ರಕೃತಿಯ ಬೆಲೆ ಒಂದು ಲಕ್ಷ). ಧಾನ್ಯಗಳು ಹೆಚ್ಚಾಗಿ ಬೆಳೆಯಬೇಕಾದರೆ ಅದಕ್ಕೆ ನೀರು ಗೊಬ್ಬರ ಬೇಕು. ನೀರಿಗಾಗಿ ಬಾವಿ, ಬೋರು, ಅಣೆಕಟ್ಟು ಇತ್ಯಾದಿಬೇಕು. ಮೊದಲೇ ಮರಗಳಿಲ್ಲದ ಭೂಮಿಯಿಂದ ನೀರು ತೆಗೆಯುತ್ತಾ ಬಂದಂತೆ ಅಂತರ್ಜಲ ಮಟ್ಟ ಕ್ಷೀಣಿಸುತ್ತಾ ಹೋಗುತ್ತದೆ. ಅಣೆಕಟ್ಟೆನಿಂದಾಗಿ ಕಾಡು ಮತ್ತೆ ಮತ್ತೆ ನಾಶವಾಗುತ್ತದೆ. ಸಮುದ್ರ ಜೀವಿಗಳ ಮೇಲೂ ಸಸ್ಯಗಳ ಮೇಲೂ ಅಣೆಕಟ್ಟು ಕೆಟ್ಟ ಪರಿಣಾಮ ಬೀರಿದೆ. ಮರಗಳಿಲ್ಲದ ಜಮೀನಿನಲ್ಲಿ ಬೆಳೆಯುವ ಜೋಳಕ್ಕೆ, ಬತ್ತಕ್ಕೆ ಸಾವಯುವ ಗೊಬ್ಬರ ಕೊರತೆಯಾಗುತ್ತ ದನಕರುಗಳಿಗಾಗಿ ಕಾಡು ನಾಶ ತೀವ್ರಗೊಳ್ಳುತ್ತದೆ. ರಾಸಾಯನಿಕ ಗೊಬ್ಬರ ಅರ್ಥಟಸುತ್ತದೆ. ಹೀಗೆ ಋಣಾತ್ಮಕವಾಗಿ ನಡೆಯುತ್ತಾ ಬಂದ ಕೃಷಿ ಪರಂಪರೆ ಇಂದು ಸಂಕ್ರಮಣ ಸ್ಥಿತಿಗೆ ಬಂದಿದೆ.

ಇಷ್ಟೆಲ್ಲಾ ಮಾಡಿ ನಾನು ಒಂದು ಎಕ್ರೆಯಲ್ಲಿ ಬೆಳೆಯುತ್ತಿರುವ ಕಾಳು ಎಷ್ಟು? ನಾಲ್ಕು ಕ್ವಿಂಟಾಲ್‌ನಿಂದ ಹದಿನೈದು ಕ್ವಿಂಟಾಲ್‌ವರೆಗೆ. ಹಸಿರು ಹುಲ್ಲು ಎಷ್ಟು? ನಾಲ್ಕು ಅಡಿ ಎತ್ತರದಷ್ಟು. ಬಹುಶಃ ನಲ್ವತ್ತು ಕ್ವಿಂಟಾಲ್ ಇರಬಹುದು ಆದರೆ ಅದೇ ಒಂದೆಕ್ರೆಯಲ್ಲಿ ಮರ ಬೆಳೆಸಿ—ಅದು ಮಾವಿರಬಹುದು. ಹಲಸಿರಬಹುದು, ನೇರಳೆ, ಪೇರಳೆಗಳಿರಬಹುದು. ಬೇವು ಹೊಂಗೆಗಳಿರಬಹುದು—ಮಾವಿನ ಮರ ಒಂದೆಕ್ರೆಯಲ್ಲಿ ಕೊಡುವ ಫಸಲು ಎಷ್ಟು ಗೊತ್ತೇ? ಮೂವತ್ತರಿಂದ ನಲ್ವತ್ತು ಟನ್ನುಗಳು. ಹತ್ತು ಕ್ವಿಂಟಾಲ್ ಧಾನ್ಯ ಬರುವಲ್ಲಿ ನಲ್ವತ್ತು ಟನ್ನು ಮಾವು. ಭೂಮಿಯ ಉತ್ಪಾದಕತೆಯ ಸಾಮರ್ಥ್ಯವನ್ನು ನೀವು ಊಹಿಸಿ. ಈ ಮರಗಳು ಆಕಾಶದಲ್ಲಿ ಆವರಿಸುವ ಎತ್ತರ ಎಷ್ಟು? ನಲ್ವತ್ತು ಅಡಿಗಳು! ಉತ್ಪಾದಿಸುವ ಸಾವಯುವ ವಸ್ತು ಎಷ್ಟು? ನಾಲ್ಕುನೂರು ಟನ್ನುಗಳನ್ನು ಮಿಕ್ಕಿ!

ಧಾನ್ಯ ಬೆಳೆಯಬೇಕಾದರೆ, ನೀರು, ಗೊಬ್ಬರ ಬೇರೆ ಕಡೆಯಿಂದ ತರಬೇಕು. ಅದೇ ಮಾವು ಬೆಳೆದಾಗ ಇದ್ಯಾವುದೂ ಬೇಡ. ಎಂಥ ಒಣಭೂಮಿಯಲ್ಲೂ ಮಾವು, ನೇರಳೆಗಳು ಬೆಳೆಯಬಲ್ಲುವು, ಮಾತ್ರವಲ್ಲ ಒಣಭೂಮಿಯನ್ನು ಹಸುರುಗೊಳಿಸಬಲ್ಲುವು. ಹಸನುಗೊಳಿಸಬಲ್ಲುವು ಭೂಮಿಯ ಅಂತರ್ಜಲ ಮಟ್ಟವನ್ನು ಹೆಚ್ಚಿಸಬಲ್ಲುವು. ಅಷ್ಟೇ ಏಕೆ? ಒಂದೆಕ್ರೆ ಜಾಗದಲ್ಲಿ ಬೆಳೆವ ಮರಗಳು ಹತ್ತೆಕ್ರೆ ಜೋಳ ಬೆಳೆಯಲು ಬೇಕಾಗುವಷ್ಟು ಸಾವಯುವ ಗೊಬ್ಬರವನ್ನು ಸೃಷ್ಟಿಸಬಲ್ಲುವು.

ನಾವು ನಾಶದ ಚಕ್ರದ ಬೆನ್ನು ಹತ್ತಿದ್ದೇವೆ. ವಿವೇಕದಿಂದ ವಿಚಾರದಿಂದ ಪ್ರಕೃತಿಯಲ್ಲಿ ನಮ್ಮ ಪಾತ್ರವೇನೆಂಬುದನ್ನು ಅರ್ಥವಿಸಿ ಕೊಂಡು ಸೃಷ್ಟಿಯ ಚಕ್ರಕ್ಕೆ ಮುಖ ಮಾಡಬೇಕಾಗಿದೆ.

ಹತ್ತೆಕ್ರೆ ಜಮೀನುಳ್ಳವನು ಒಂದೆಕ್ರೆ ಯಲ್ಲಿ ವಿವಿಧ ಮರಗಳ ಬೆಳೆಸುವುದರಿಂದ ಬಹಳಷ್ಟು ಸಮಸ್ಯೆಗಳು ಕರಗುತ್ತಾ ಬರುತ್ತವೆ. ಅಥವಾ ಇರುವ ಭೂಭಾಗದಲ್ಲಿ ಹತ್ತನೇ ಒಂದು ಜಾಗದಲ್ಲಿ ಬೆಳೆಯಾಳುವ ಮರ ಬೆಳೆ ಇವು ನಮ್ಮ ಬಾಳುವೆಗೂ ಪ್ರಕೃತಿಯ ಬಾಳುವೆಗೂ ಆಧಾರವಾಗು ವವು.

ನಾವು ಬತ್ತ, ಜೋಳ, ಉದ್ದುಗಳನ್ನೇ ತಿನ್ನಬೇಕೆಂದು ಪ್ರಕೃತಿ ಹೇಳಲಿಲ್ಲ. ಮಾವಿನ ಹಣ್ಣು, ನೇರಳೆಹಣ್ಣು, ಹಲಸಿನಹಣ್ಣು ಬೇಡವೆಂದು ನಮ್ಮ ಬಾಯಿಯೂ ಹೇಳುವು ದಿಲ್ಲ. ಆದರೆ ಪ್ರಕೃತಿ ಹೇಳಿದ್ದನ್ನು, ದೇಹ ಹೇಳಿದ್ದನ್ನು ನಮ್ಮ ಅವಿವೇಕ ಹೇಳುತ್ತಿದೆ. ಜೋಳದ ರೈತ ಪೇಟೆಯ ತಳ್ಳುಗಾಡಿಯಿಂದ ನೇರಳೆ ಹಣ್ಣು ಕೊಂಡು ತಿನ್ನುವ ಸ್ಥಿತಿ ಇದೆ.

ಅಲ್ಲಲ್ಲಿ ನಮ್ಮ ಆಹಾರಕ್ಕಾಗುವ ಮರ ಬೆಳೆಸಿದಾಗ ಹೊಸ ಸೃಷ್ಟಿ ಕ್ರಿಯೆ ಮೈದಳೆ ಯುತ್ತದೆ. ಹಲವು ಕಳೆಗಳು ಬರುತ್ತವೆ. ಕಳೆಗಳಲ್ಲಿ ನಮ್ಮ ಆಹಾರಕ್ಕಾಗುವ ಹಲವು ಸೊಪ್ಪುಗಳೂ ಇರುತ್ತವೆ. ಗಡ್ಡೆಗಳು ಬೆಳೆಯುತ್ತವೆ. ಕೋಸು, ಕ್ಯಾರೆಟ್‌ಗಳು ಮಾತ್ರ ಆಹಾರ ಅಲ್ಲ. ಹಲವು ಹರಿವೆ ಸೊಪ್ಪು, ಬಸಳೆ ಸೊಪ್ಪು, ಹೊನ್ನಗಣೆ ಸೊಪ್ಪು, ಕೀರೆಸೊಪ್ಪು, ಗೋಣಿ, ತೊಂಡೆ ಸೊಪ್ಪು, ಅಣ್ಣೆಸೊಪ್ಪು, ತಿಮರೆಸೊಪ್ಪು, ಸುವರ್ಣಗೆಡ್ಡೆ, ಮುಂಡಿ ಅರಸಿನ, ಶುಂಠಿ ಅರರೂಟು, ಗೆಣಸುಗಳು ತನ್ನಷ್ಟಕ್ಕೆ ಬೆಳೆಯುತ್ತವೆ. ಅಥವಾ ಬಹಳ ಕಡಿಮೆ ಶ್ರಮದಿಂದ ಬರುತ್ತವೆ. ಇಂಥವುಗಳಲ್ಲಿ ಆಹಾರವನ್ನು ಕಾಣುವ, ಆಹಾರವಾ ಬಳಸುವ ಪ್ರವೃತ್ತಿ, ಮನೋವೃತ್ತಿ ಬರಬೇಕಾಗುವುದು.

ಪ್ರಪಾತದೆಡೆಗೆ ಸಾಗುವ ಚಕ್ರದ ಹಿಂದ ನಾವಿರಬೇಕೇ?

ನಮ್ಮ ಮುಖವನ್ನು ಸೃಷ್ಟಿಯ ಚಕ್ರ ಕಡೆಗೆ ತಿರುಗಿಸಿದಾಗ ಸುಂದರ ವಾತಾವರ ಮತ್ತೆ ಮತ್ತೆ ಮೂಡುತ್ತಾ ಬರುತ್ತದೆ ನಾವು ನೆಟ್ಟ ಮರಗಳಿಗೆ ಒಂದಷ್ಟು ಬಳ ಗಳನ್ನು ಬಿಡಬಹುದು. ಅದು ಸೀಮೆ ಬದ ಇರಬಹುದು, ಫ್ಯಾಷನ್ ಹಣ್ಣು ಇರಬಹುದು, ಮಲ್ಲಿಗೆ ಹೂವು ಆಗಬಹುದು

ನಾವು ಸಸಾರ ಜನಕದ ಪೂರೈಕೆಗಾ ಧಾನ್ಯಗಳು ಬೇಕು ಎಂದು ಅಪೇಕ್ಷಿಸುತ್ತೇವೆ ಸ್ವಲ್ಪ ಯೋಚನೆ ಮಾಡಿದರೆ, ಸಣ್ಣ ಉದ್ಯಮ ಪ್ರಾರಂಭಿಸಿದರೆ, ಎತ್ತೆತ್ತಲೊ ಬಿಸಾಡುವ ಮಾವಿನ ಹಣ್ಣಿನ ಓಟೆ ಯೊಳಗಿಂದ ಸಾಕಷ್ಟು ಸಾರ ಸಂಗ್ರಹಿ ಬಹುದು.

ಯಾವುದೇ ಕಷ್ಟ, ಕೆಲಸವಿಲ್ಲದೆ ಹಲಸಿ ಬೀಜ ಉಪಯೋಗಿಸಬಹುದು. ಉಪ್ಪು ನೀರಿನಲ್ಲಿ ಬೇಯಿಸಿ ಒಣಗಿಸಿದ ಹಲಸಿ ಬೀಜ—ಹೆಸರು ಕಾಂತಾಣಿ—ವರ್ಷಗಳ ಕಾ ಕಾಪಿಡಲು ಬರುತ್ತದೆ. ಕೊಳೆತು ನಾರುವ ಚ್ಯುಯಿಂಗ್‌ಗಮ್ ಸ್ಥಾನದಲ್ಲಿ ಪ್ರೋಟೀನ್ ಮಾತ್ರೆಗಳಾದ ಹಲಸಿನ ಬೀಜಗಳನ್ನು ಜಗಿಯಬಹುದು.

ಇಂದು ಮರದ ಬೆಲೆಯಾದರೂ ಎಷ್ಟು?

ಅದು ಉತ್ಪಾದಿಸುವ ಆಮ್ಲಜನಕ, ಭೂಮಿಗೆ ಇಂಗಿಸುವ ನೀರಿನ ಲೆಕ್ಕಾಚಾರ ಬಿಟ್ಟುಬಿಡಿ. ವ್ಯವಹಾರಿಕವಾಗಿ ಸ್ವೀಕರಿಸಿದರೂ ಘನ ಅಡಿಗೆ ರೂಪಾಯಿ ಒಂದು ಸಾವಿರಕ್ಕೂ ಮಿಕ್ಕು. ಕಾಲಕಸವಾಗಬಹುದಾಗಿದ್ದ ಮರ ಇಷ್ಟೊಂದು ದುಬಾರಿಯಾಗಬೇಕೆ? ನಮಗೆ ಮನೆ ಬೇಕು. ಆದರೆ ಮನೆಗೆ ಬೇಕಾದ ಮರ ಬೇಡವಿರುವುದು, ಬದಲಿಯಾಗಿ ಕಬ್ಬಿಣವನ್ನು ಆಶ್ರಯಿಸುವ ಸ್ಥಿತಿ ಬಂದಿರುವುದು ನಂದುತ್ತಿರುವ ದೀಪದ ಕೊನೆಯ ವರ್ಚಸ್ಸು.

ಸ್ಥಳೀಯ ಸಾವಯವ ಸಮೃದ್ಧ ಸ್ಥಿತಿಯಲ್ಲಿ ನಮ್ಮ ಜೋಳದ ಉತ್ಪತ್ತಿ ಅಥವಾ ಕಡಲೆಯ ಉತ್ಪತ್ತಿ. ಏನೂ ಕಡಿಮೆಯಾಗುವುದಿಲ್ಲ ನಮಗೆ ಬೇಕಾಗುವ ದನಗಳನ್ನು ಸಾಕುವ ಸಾಮರ್ಥ್ಯ, ಎರೆಗೊಬ್ಬರ ನೀಡುವ ಸಾಮರ್ಥ್ಯ ಸ್ವಾಭಾವಿಕವಾಗಿ ನಮಗೆ ಬರುತ್ತದೆ. ಆಗ ಕೆಡುಕನ್ನುಂಟುಮಾಡುವ ಒಳ್ಳೆಯದನ್ನು ಮಾಡಲಾರದ ರಾಸಾಯನಿಕಗಳಿಲ್ಲದೆ ಪೌಷ್ಟಿಕವಾದ ಧಾನ್ಯಗಳನ್ನು ಕಡಿಮೆ ಖರ್ಚಿನಲ್ಲಿ, ಮರಗಳನ್ನು ಬೆಳೆದು ಉಳಿದ ಜಾಗದಲ್ಲಿ ಮೊದಲಿನಷ್ಟೇ ಉತ್ಪಾದಿಸುವ ಸಾಮರ್ಥ್ಯ ನಮ್ಮ ಭೂಮಿಗೆ ಬರುತ್ತದೆ. ನಮ್ಮದು ಒಣಭೂಮಿ ಎಂಬ ಅಪಖ್ಯಾತಿಯನ್ನು ಕಳಕೊಳ್ಳುತ್ತದೆ.

ಸ್ವಲ್ಪ ಯೋಚನೆ ಮಾಡಿ, ಕಬ್ಬಿನ ಗದ್ದೆಗಳು ಮೇ ತಿಂಗಳಲ್ಲಿ ಹೂಳೆತು ಡಿಸೆಂಬರಿನಲ್ಲಿ ಸಾಯುತ್ತವೆ ಯಾಕೆ? ಪ್ರಕೃತಿಯ ಸ್ವಾರಸ್ಯ ಸತ್ತಿಲ್ಲದೆ. ಚಕ್ರೀಯ ಪ್ರಕೃತಿಯಲ್ಲಿ ಮಳೆ ಬೀಳುವಾಗಲೇ ಬೆಳೆದು ಬಲಿತು ನಮಗೆಲ್ಲ ಆಹಾರವಾಗುವುದೇ ಅವುಗಳ ಉದ್ದೇಶ. ಇಂಥಾ ವನಸುಮಗಳನ್ನು ಗುರುತಿಸುವ ವೈಜ್ಞಾನಿಕ ಮನೋಧರ್ಮ ಬಾರದೆ ನಾವು ಒಣಭೂಮಿಯಲ್ಲಿ ಇಂದಿನ ತಾಂತ್ರಿಕ ವಿಧಾನಗಳಿಂದ ಕೃಷಿ ಮುಂದುವರಿಸುವುದು ದುರ್ಲಭ.

ಬೇಲಿಯ ಮಹತ್ವ ನಿಮಗೆ ಗೊತ್ತೆ?

ಎಲ್ಲಾ ಜಮೀನುಗಳಿಗೂ ಬೇಲಿ ಬಹಳ ಮುಖ್ಯ. ನಮಗೆ ಕಳ್ಳಕಾಕರ ಭಯ ಇಲ್ಲದಿರಬಹುದು. ಆದರೂ ನಮಗೆ ಬೇಲಿ ಮುಖ್ಯ. ಬೇಲಿ ಎಂದೊಡನೆ ಕಲ್ಲು ಕಂಬ, ಮುಳ್ಳು ತಂತಿಗಳೇ ನಮ್ಮ ಕಲ್ಪನೆಯಾಗಬೇಕಾಗಿಲ್ಲ. ನಮ್ಮೂರಿನ ಬಂಜ ಜಾಗದಲ್ಲಿ ಬೆಳೆಯಬಲ್ಲ ಮುಳ್ಳು, ಕಳ್ಳಿಗಳಿಂದಲೇ ಬೇಲಿ ಮಾಡೋಣ. ಇವುಗಳನ್ನು ವರ್ಷಕ್ಕೆ ಎರಡು ಮೂರು ಬಾರಿ ಕತ್ತರಿಸುವುದರಿಂದಲೇ ಬೇಕಾದ ಸಾವಯವ ಗೊಬ್ಬರ, ಎರೆಗೊಬ್ಬರ ತಯಾರಿಸಬಹುದು. ಬೇಲಿ ಹಕ್ಕಿಗಳಿಗೆ, ಚಿಟ್ಟೆಗಳಿಗೆ, ಜೇಡಗಳಿಗೆ ನೆಲೆಯಾಗುವುದು. ನಮ್ಮ ಪ್ರಯತ್ನವಿಲ್ಲದೇ ನಮ್ಮ ಬೇಲಿಯಲ್ಲೂ, ಜಮೀನಿನಲ್ಲೂ ಬೀಜ ಪ್ರಸಾರವಾಗುವ ವೈವಿಧ್ಯಮಯ ಗಿಡಗಳಿಂದ ನಮ್ಮ ಭೂಮಿಗೆ ವೈವಿಧ್ಯಮಯ ಸಾರ ಸಮೀಕರಣಗೊಳ್ಳುವುದು. ಬೇಲಿಯ ಕೆಳಗೆ ನಮಗರಿವಿಲ್ಲದೇ ಸೃಷ್ಟಿಯಾಗುವ ಮೇಲ್ಮಣ್ಣು ಶಾಶ್ವತವಾಗುವುದು.

ಸ್ವಲ್ಪ ಮುಂದುವರಿದು ದಾಸವಾಳ, ಆಡುಸೋಗೆ, ವಿಷಮರಾ ಮೊದಲಾದ ಸೊಪ್ಪುಗಳಿಂದ ಬೇಲಿಯ ಮೌಲ್ಯವರ್ಧನೆ ಮಾಡಬಹುದು. ದಾಸವಾಳ! ಜಮೀನಿಗೆ

ಗೊಬ್ಬರವಾದೀತು. ದನಗಳಿಗೆ ಮೇವಾದೀತು ನಮಗೆ ಆಹಾರವೂ ಆದೀತು. ಹೂವಿನಿಂದ ತಂಬುಳಿ, ಎಲೆಯಿಂದ ದೋಸೆ ಇಡ್ಲಿ (ಉದ್ದು ಬೇಡ) ಸ್ನಾನಕ್ಕೆ ಉತ್ತಮ ಶಾಂಪೂ. ಆರೋಗ್ಯವರ್ಧಕ ತಂತ್ರವಿದ್ಯೆ ಆಡುಸೋಗೆ, ವಿಷಪರಾಜಿಗಳು ನಮಗೂ ಭೂಮಿಗೂ ಔಷಧಿಯಾದೀತು. ಸೀಗೆಹಾರೆ, ಕರಂಡೆ ಹಾರೆ. ಇವು ಮುಳ್ಳುಗಿಡ. ಸೀಗೆ ಸ್ನಾನಕ್ಕೆ, ಕರಂಡೆ ಉಪ್ಪಿನಕಾಯಿಗೆ ಮೂಲೆಯಲ್ಲೊಂದು ಬಿದಿರು ನೆಡಿ. ಹಲವು ಕೆಲಸಗಳಿಗೆ ಪ್ರಯೋಜನವಾಗುವುದು.

ಪ್ರಕೃತಿ ಪೂರ್ಣ, ಪರಿಪೂರ್ಣ

ಮಾವು! ಭಾರಿಯಾದ ಮರ. ಆದರೆ ಅದು ಬಿಡುವ ಹಣ್ಣು ಸಣ್ಣ. ಅರಳಿ! ಮಾವಿಗಿಂತಲೂ ಭಾರಿಯಾದ ಮರ. ಅದರ ಹಣ್ಣು? ಕಣ್ಣಿಗೆ ಕಾಣದಷ್ಟು ಸಣ್ಣ.

ಈಗ ದೃಷ್ಟಿ ಬದಲಿಸಿ ಕುಂಬಳಬಳ್ಳಿಯನ್ನೊಮ್ಮೆ ನೋಡಿ! ಎಷ್ಟೊಂದು ದುರ್ಬಲ! ಆದರೆ ಅದು ಬಿಡುವ ಕಾಯಿ? ನಲ್ವತ್ತು ಕಿಲೋಗ್ರಾಮ್ ತನಕ. ಇನ್ನೂರೈವತ್ತು ಗ್ರಾಮ್ ತೂಕದ ಮಾವಿನ ಕಾಯಿಗೆ ಅಷ್ಟೊಂದು ದೊಡ್ಡ ಮರವಿರುವಾಗ ನಲ್ವತ್ತು ಕಿಲೋಗ್ರಾಮ್ ತೂಗುವ ಕುಂಬಳಕ್ಕೆ ಇಷ್ಟೊಂದು ಸಣ್ಣ ಬಳ್ಳಿಯೇ? ಪ್ರಕೃತಿಯನ್ನು ತಿದ್ದುವ ಅವಿವೇಕ ನಮ್ಮ ಇಂದಿನ ಕೃಷಿ ಪದ್ಧತಿಯಲ್ಲಿ ಹೆಜ್ಜೆ ಹೆಜ್ಜೆಗಳಲ್ಲಿ ಸುರಿಯುತ್ತಿದೆ. ಸಂಕೀರ್ಣ ಪ್ರಕೃತಿಯ ಆದರೆ ಪರಿಪೂರ್ಣ ಪ್ರಕೃತಿಯ ಒಳಹೊಕ್ಕು ನಾವು ಒಳನೋಟ ಪಡೆಯುವವರೆಗೆ ಒಣಭೂಮಿಯನ್ನು ಅಭಿವೃದ್ಧಿ ಪಡಿಸುವ ಪ್ರಯತ್ನ ಕುಂಬಳ ಬಳ್ಳಿಯನ್ನು ಬಲಗೊಳಿಸುವ ಹುಂಬ ಪ್ರಯತ್ನವಷ್ಟೇ ಆದೀತು.



ಒಬ್ಬ ವ್ಯಕ್ತಿಯ ಸಾರ್ಥಕ ಜೀವನವನ್ನು ಅವನು ಮಾಡಿದ ಕೆಲಸದಿಂದ ನಿರ್ಧರಿಸಬೇಕೇ ಹೊರತು ಅವನ ವಯಸ್ಸಿನಿಂದಲ್ಲ.

—ಶೆಡರಿನ್

ಕಡು ಬಿಸಿಲು ತರುವ ತೊಂದರೆ

ಜಿ. ಕುಮಾರಪ್ಪ
ಸಹಾಯಕ ಮಾಹಿತಿ ಅಧಿಕಾರಿ
ಕನ್ನಡ ವಿಭಾಗ, ರಾಷ್ಟ್ರೀಯ ಗ್ರಂಥಾಲಯ
ಕಲ್ಕತ್ತಾ–೭೦೦ ೦೨೭

ಕಳೆದ ವರ್ಷದ ಮೇ ತಿಂಗಳಿನಲ್ಲಿ ನಾಗಪುರದ ಕಿರಣ್ ನಗರ್‌ಕರ್ (ಆಕೆಯ ನಿಜವಾದ ಹೆಸರನ್ನು ಬದಲಾಯಿಸಲಾಗಿದೆ) ತನ್ನ ಶಾಪಿಂಗ್ ಮುಗಿಸಿಕೊಂಡು ಮನೆಗೆ ಬಂದಾಗ ಸಂಪೂರ್ಣವಾಗಿ ದಣಿದಿದ್ದಳು. ಮೇ ತಿಂಗಳ ಮಧ್ಯಾಹ್ನದ ಉರಿಬಿಸಿಲಲ್ಲಿ ಆಕೆ ಶಾಪಿಂಗ್‌ಮಾಡಿ ಸಂಜೆ ಮನೆಗೆ ಮರಳಿದ್ದಳು. ಆಕೆಯ ಕಣ್ಣಿನ ಸುತ್ತ ಕಪ್ಪನೆಯ ಕಲೆ ಮೂಡಿದ್ದಿತು. ಆಕೆಯ ಚರ್ಮ ಶುಷ್ಕವಾಗಿದ್ದು, ಬೆಚ್ಚಗಿತ್ತು. ನಿಧಾನವಾಗಿ ಆಕೆಯ ಮೈ ಬಿಸಿಯಾಗಲಾರಂಬಿಸಿತು. ಮೈ ಬಿಸಿಯಿದ್ದರೂ ಆಕೆ ನಡುಗುತ್ತಿದ್ದಳು. ತಾಪದಿಂದ ಬಡಬಡಿಸುತ್ತಿದ್ದ ಆಕೆಯ ಮಾತುಗಳು ಅರ್ಥವಾಗುತ್ತಿರಲಿಲ್ಲ. ಮನೆಯವರು ಕೂಡಲೇ ಇಪ್ಪತ್ತುವರ್ಷದ ಕಿರಣಳನ್ನು ಆಸ್ಪತ್ರೆಗೆ ಕೊಂಡೊಯ್ದರು.

ಆಕೆಯನ್ನು ಪರೀಕ್ಷಿಸಿದ ವೈದ್ಯರು ಆಕೆ ಅರೆಪ್ರಜ್ಞಾವಸ್ಥೆಯಲ್ಲಿ ಮೈಶಾಖ ೧೦೭ ಡಿಗ್ರಿ ಫ್ಯಾರನ್‌ಹೀಟ್ ಇರುವುದನ್ನು ಗಮನಿಸಿದರು. ಆಕೆಯ ನಾಡಿ ಬಡಿತ ಕ್ಷೀಣಿಸುತ್ತಿತ್ತು. ಕಿರಣ್‌ಳಿಗೆ ತುರ್ತು ಚಿಕಿತ್ಸೆಯ ಅಗತ್ಯವಿತ್ತು.

ಆಕೆಯನ್ನು ಕೂಡಲೇ ಸ್ಪೆಷಲ್‌ವಾರ್ಡಿಗೆ ಸೇರಿಸಲಾಯಿತು. ಸ್ಪಂಜಿನಿಂದ ಉಗುರು ಬೆಚ್ಚನೆಯ ನೀರನ್ನು ಮೈಗೆ ಸವರಿ ಗಾಳಿ ಬೀಸಲಾಯಿತು. ನಂತರ ಮೈಮೇಲೆ ಮಂಜು ಇರಿಸಿ, ನೇರವಾಗಿ ರಕ್ತಕ್ಕೆ ಗ್ಲುಕೋಸ್ ನೀಡಲಾಯಿತು.

ಎಲ್ಲ ವಯಸ್ಸಿನ ಜನರೂ ಅನುಭವಿಸಬಹುದಾದ, ಕೆಲವೊಮ್ಮೆ ಗುರುತಿಸಲು ಅಸಾಧ್ಯವಾದ, ಆದರೆ, ಗಂಭೀರವಾದ ಬಿಸಿಲ ಝಳದ ಹೊಡೆತಕ್ಕೆ ಕಿರಣ್ ಸಿಲುಕಿದ್ದಳು. ನಮ್ಮಲ್ಲಿ ಬಹಳಷ್ಟು ಜನರು ದೇಹ ಶುಷ್ಕಗೊಳ್ಳುವಿಕೆಯನ್ನು, ಕಡಿಮೆ ಪ್ರಮಾಣದಲ್ಲಿಯಾದರೂ, ಅನುಭವಿಸಿರುತ್ತೇವೆ. ತಲೆನೋವು, ಒಣಗಿದಬಾಯಿ, ತಲೆಸುತ್ತುವಿಕೆ, ಆಯಾಸ, ನೋವು—ಇವು ದೇಹ ಶುಷ್ಕಗೊಳ್ಳುತ್ತಿರುವಿಕೆಯ ಪ್ರಥಮ ಲಕ್ಷಣಗಳು. ನಾವು ದ್ರವ ಆಹಾರ ತೆಗೆದುಕೊಳ್ಳುವ ಮೂಲಕವೂ, ವಿಶ್ರಾಂತಿ ತೆಗೆದುಕೊಳ್ಳುವ ಮೂಲಕವೂ ಚಿಕಿತ್ಸೆ ಮಾಡಿಕೊಳ್ಳುತ್ತೇವೆ. ಇದು ಪರಿಣಾಮಕಾರಿಯೂ ಹೌದು. ಆದರೆ, ಬಿಸಿಲ ಝಳದ ಹೊಡೆತ ಹೆಚ್ಚಾದಲ್ಲಿ ಅಪಾಯಕಾರಿ.

೧೯೯೮ರ ಮೇ ತಿಂಗಳ ರೀಡರ್ಸ್ ಡೈಜೆಸ್ಟ್ ಪತ್ರಿಕೆಯಲ್ಲಿನ ಕೊಮಿಬಿನೊಯ್ ಅವರ ಲೇಖನದ ಅನುವಾದ.

ಕಾರಣ

ಆರೋಗ್ಯವಂತರಲ್ಲಿಯೂ ಸಹ ಇದು ಹೇಗೆ ಉಂಟಾಗುತ್ತದೆ? ಯಾವುದೇ ಕಾರಣ ದಿಂದ ದೇಹದಲ್ಲಿ ನೀರಿನ ಅಂಶ ಕಡಿಮೆ ಯಾಗುವುದರಿಂದ ದೇಹದಲ್ಲಿ ಶುಷ್ಕತೆ ಉಂಟಾಗುತ್ತದೆ. ಈ ಕಾರಣಗಳಲ್ಲಿ ಮುಖ್ಯ ವಾದವುಗಳು: ಬಿಸಿಲು, ವ್ಯಾಯಾಮ, ಬಿಸಿಯಾದ ಪ್ರದೇಶಗಳಲ್ಲಿ ಕೆಲಸಮಾಡು ವುದು, ಆದ್ರ್ರ ವಾತಾವರಣದಲ್ಲಿ ಬಹಳ ಕಾಲ ಇರುವುದು, ಜ್ವರ, ಬೇದಿ ಅಥವಾ ವಾಂತಿ. ಈ ಸಂದರ್ಭಗಳಲ್ಲೆಲ್ಲ ದೇಹವು ರಕ್ತಕ್ಕಾಗಿ ಕೋಶಗಳಿಂದ ನೀರಿನ ಅಂಶ ವನ್ನು ತೆಗೆದುಕೊಳ್ಳುತ್ತದೆ. ಕೋಶಗಳಲ್ಲಿನ ನೀರಿನ ಅಂಶ ಕಡಿಮೆಯಾದಂತೆ ಈ ಪ್ರಯತ್ನವೂ ಸಫಲವಾಗದೆ ದೇಹದಲ್ಲಿ ರಕ್ತ ಕಡಿಮೆಯಾಗಲಾರಂಬಿಸುತ್ತದೆ. ಕಡಿಮೆ ರಕ್ತ ಚಲನೆಯಾದಾಗ ರಕ್ತದ ಒತ್ತಡ ಕಡಿಮೆಯಾಗುತ್ತದೆ. ಜೊತೆಯಲ್ಲಿಯೇ ಆಯಾಸ, ತಲೆ ಸುತ್ತುವಿಕೆ ಮತ್ತು ತಲೆ ನೋವುಗಳು ಕಾಣಿಸಿಕೊಳ್ಳುತ್ತವೆ.

ಈ ಹಂತದಲ್ಲಿ ವಿಶ್ರಾಂತಿ ಮತ್ತು ದ್ರವ ಆಹಾರದಿಂದ ದೇಹಕ್ಕೆ ಚಿಕಿತ್ಸೆ ನೀಡ ಬಹುದು. ದೇಹದ ಶುಷ್ಕತೆ ಇದಕ್ಕಿಂತಲೂ ಹೆಚ್ಚಾದಲ್ಲಿ ಹೊಟ್ಟೆ ತೊಳಸಿದಂತಾಗು ವುದು, ನರಗಳ ಸೆಡೆತ ಮತ್ತು ಮೂರ್ಛೆ ಉಂಟಾಗಬಹುದು. ದೇಹದ ಉಷ್ಣಾಂಶ ಸಾಮಾನ್ಯವಾಗಿದ್ದರೂ ಸಹ ರಕ್ತದ ಒತ್ತಡ ಕಡಿಮೆಯಾಗಬಹುದು.

ಬಾಯಾರಿಕೆಯುಷ್ಟೇ ಸಾಲದು

ಬಾಯಾರಿಕೆ ದೇಹದ ಅವಶ್ಯಕತೆಗಳನ್ನು ಸರಿಯಾಗಿ ಸೂಚಿಸಲಾರದು. "ತಮಗೆ ಸಾಕೆನ್ನುವಷ್ಟು ನೀರು ಕುಡಿದರೂ ಸಹ ನಮ್ಮ ದೇಹಕ್ಕೆ ಇನ್ನಷ್ಟು ನೀರು ಬೇಕಾಗಿರ ಬಹುದು" ಎನ್ನುತ್ತಾರೆ ಡಾ|| ಕಿಂಜಲ್ ಸೂರತ್‌ವಾಲ. ಸಾಮಾನ್ಯ ಪರಿಸ್ಥಿತಿಗಳಲ್ಲಿ ನಮಗೆ ಬಾಯಾರಿಕೆ ಎನ್ನಿಸಿದಾಗ, ನಾವು ಈಗಾಗಲೇ ನಮ್ಮ ತೂಕದಲ್ಲಿ ಶೇ|| ೧ರಷ್ಟು ತೂಕದ ನೀರನ್ನು ಕಳೆದುಕೊಂಡಿದ್ದೇವೆ ಎಂದರ್ಥ.

ದೇಹಕ್ಕೆ ಬೇಕಾಗುವ ನೀರಿನ ಅವಶ್ಯಕತೆ ನಮ್ಮಲ್ಲಿ ಬಹಳಷ್ಟು ಜನರಿಗೆ ತಿಳಿಯದು. ಕಿರಣಳೂ ಸಹ ಅಷ್ಟೇ. ಆಕೆ ಶಾಪಿಂಗ್‌ಗೆ ಹೋಗುವಾಗ ಕೇವಲ ಒಂದು ಗ್ಲಾಸ್ ಜ್ಯೂಸ್ ಕುಡಿದಿದ್ದಳು. ಮೂರು ಗಂಟೆಗಳ ಶಾಪಿಂಗ್ ನಂತರ ಆಕೆಗೆ ತಲೆ ಸುತ್ತಲಾರಂ- ಬಿಸಿ, ಬಾಯಾರಿಕೆ ಅನ್ನಿಸಿದಾಗ ಹತ್ತಿರದ ರೆಸ್ಟೊರೆಂಟ್‌ನಲ್ಲಿ ಎರಡು ಗ್ಲಾಸ್ ನೀರು ಕುಡಿದು ಮತ್ತೆ ಶಾಪಿಂಗ್ ಮಾಡಲಾರಂಭಿಸಿ ದ್ದಳು. ಆಕೆ ಮತ್ತೆ ಮನೆಗೆ ಹಿಂತಿರುಗಿದಾಗ, ಆಕೆ ಹೊರಗೆ ಒಟ್ಟು ಆರು ಗಂಟೆ ಸಮಯ ಕಳೆದಿದ್ದಳು.

ನೀರೆಷ್ಟು ಬೇಕು?

ಕಿರಣಳ ಎತ್ತರ (ನಾಲ್ಕು ಅಡಿ ಎಂಟು ಇಂಚು) ಮತ್ತು ತೂಕದ (೪೬ ಕೆ.ಜಿ.) ವ್ಯಕ್ತಿಗೆ ಪ್ರತಿದಿನ ಎರಡೂವರೆ ಲೀಟರು ಗಳಷ್ಟು ದ್ರವ ಪದಾರ್ಥ ಬೇಕು. ಇದು ಆಹಾರದ ರೂಪದಲ್ಲಿರಬಹುದು ಅಥವಾ ನೀರೂ ಆಗಬಹುದು. ಬಿಸಿಲ ದಿನಗಳಲ್ಲಿ ಹೆಚ್ಚು ಕೆಲಸ ಅಥವಾ ವ್ಯಾಯಾಮ ಮಾಡಿ ದಾಗ ಇನ್ನೂ ಹೆಚ್ಚಿನ ನೀರು ಬೇಕಾಗ ಬಹುದು.

ಬಿಸಿಲ ಝಳದಿಂದಾಗಿ ದೇಹದಲ್ಲಿ ಶುಷ್ಕತೆ ಉಂಟಾಗುವುದಷ್ಟೇ ಅಲ್ಲ, ದೇಹವು ತನ್ನಲ್ಲಿನ ಸೋಡಿಯಂ, ಕ್ಲೋರೈಡ್ ಮತ್ತು ಪೊಟಾಷಿಯಂಗಳನ್ನೂ ಸಹ ಕಳೆದು ಕೊಳ್ಳಬಹುದು. ಇವು ದೇಹದ ಕೋಶಗಳು ನರಗಳು ಸರಿಯಾಗಿ ಕಾರ್ಯ ನಿರ್ವಹಿಸಲು ಅವಶ್ಯಕ. ಬಹಳ ಕಾಲದವರೆಗೆ ಬಿಸಿಲಲ್ಲಿ ಇರುವುದರಿಂದ ಬಿಸಿಲ ಝಳದ ಹೊಡೆತ ತೀವ್ರವಾಗುವುದು. ಆಗ ದೇಹದ ಉಷ್ಣತೆ ೧೦೫ ಡಿಗ್ರಿ ಫ್ಯಾರನ್ ಹೀಟ್‌ಗಿಂತಲೂ ಹೆಚ್ಚಾಗಬಹುದು. ನಾಡಿ ಬಡಿತ ಕ್ಷೀಣ ಆದರೆ ತೀವ್ರವಾಗಿರಬಹುದು. ಚರ್ಮ ಒಣಗಿ ಬಿಸಿಯಾಗಿರುತ್ತದೆ. ದೃಷ್ಟಿ ಶಕ್ತಿ ಕಡಿಮೆ ಯಾಗಬಹುದು. ಶ್ರವಣ ಶಕ್ತಿಯೂ ಸಹ ಕ್ಷೀಣಿಸಬಹುದು. ರೋಗಿಗೆ ತಣ್ಣನೆಯ ಬಟ್ಟೆಯಲ್ಲಿ ಸುತ್ತುವ ಮೂಲಕ ಅಥವಾ ಮಂಜಿನ ಸ್ನಾನ ಮಾಡಿಸುವ ಮೂಲಕ ದೇಹದ ಆಂತರಿಕ ಉಷ್ಣಾಂಶವನ್ನು ಕಡಿಮೆ ಗೊಳಿಸದಿದ್ದಲ್ಲಿ ರೋಗಿ ಕೋಮಾ ಸ್ಥಿತಿ ಯನ್ನು ತಲುಪಬಹುದು. ಇದು ಸಾವಿನಲ್ಲಿ ಕೊನೆಗೊಳ್ಳಬಹುದು.

ಮಕ್ಕಳ ವಿಚಾರದಲ್ಲಿ ಈ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಾಗುತ್ತದೆ. ಏಕೆಂದರೆ ಮಕ್ಕಳಲ್ಲಿ ವಯಸ್ಕರಿಗಿಂತಲೂ ಕಡಿಮೆ ಬೆವರು ಗ್ರಂಥಿಗಳು ಇರುತ್ತವೆ. ಉಷ್ಣಾಂಶ ವನ್ನು ನಿಯಂತ್ರಿಸುವ ವ್ಯವಸ್ಥೆಯು ಅವರ ದೇಹದಲ್ಲಿ ಸಂಪೂರ್ಣವಾಗಿ ಬೆಳೆದಿರುವುದಿಲ್ಲ. ಇದರಿಂದ ಅವರ ದೇಹದ ಉಷ್ಣಾಂಶ ಒಮ್ಮೆಗೇ ಏರಬಹುದು ಇಲ್ಲವೇ ಇಳಿಯ ಬಹುದು.

೫೫ ವರ್ಷಗಳಿಗಿಂತ ಹೆಚ್ಚು ವಯಸ್ಸಾದ ವರೂ ಸಹ ಹೆಚ್ಚು ನೀರು ಕುಡಿಯಬೇಕು. ಏಕೆಂದರೆ ಅವರಲ್ಲೂ ಬಾಯಾರಿಕೆಯನ್ನು ನಿಯಂತ್ರಿಸುವ ವ್ಯವಸ್ಥೆ ದೇಹದಲ್ಲಿ ಸರಿ ಯಾಗಿ ಕೆಲಸ ಮಾಡಲಾರದು.

ಪರಿಹಾರ

ಹಾಗಾದರೆ ನಮ್ಮ ದೇಹ ಶುಷ್ಕಗೊಳ್ಳ ದಂತೆ ಮಾಡುವುದು ಹೇಗೆ? ದಿನಕ್ಕೆ ಎಂಟ ರಿಂದ ಹತ್ತು ಗ್ಲಾಸ್ ನೀರು ಅಥವಾ ಇತರ ದ್ರವ ಪದಾರ್ಥಗಳನ್ನು ಸೇವಿಸುವುದು. ಕಾಫಿ, ಟೀ, ಮದ್ಯ, ಕೆಫೈನ್ ಇರುವ ತಂಪು ಪಾನಿಯಗಳನ್ನು ಸೇವಿಸದೆ ಇರು ವುದು. ಏಕೆಂದರೆ ಇವು ದೇಹದಲ್ಲಿನ ನೀರಿನ ಅಂಶವನ್ನು ಕಡಿಮೆ ಮಾಡುತ್ತವೆ.

ಹೆಚ್ಚಿನ ಉಪ್ಪನ್ನು ಸೇವಿಸುವುದರಿಂದ ದೇಹ ಶುಷ್ಕಗೊಳ್ಳುವುದನ್ನು ಕಡಿಮೆ ಮಾಡಬಹುದು ಎನ್ನುವ ತಪ್ಪು ನಂಬಿಕೆ ಭಾರತೀಯರಲ್ಲಿದೆ.

ಬಿಸಿಲಿನಲ್ಲಿ ಬಹಳ ಕಾಲ ಇರಬೇಕಾ ದಾಗ, ಒತ್ತಡದ ಕೆಲಸಗಳನ್ನು ಮಾಡ ಬೇಕಾದಾಗ, ವ್ಯಾಯಾಮ ಮಾಡಬೇಕಾದ ಸಂದರ್ಭಗಳಲ್ಲಿ ಮೊದಲೇ ಸಾಕಷ್ಟು ದ್ರವ ಪದಾರ್ಥಗಳನ್ನು ಸೇವಿಸುವುದು ಒಳ್ಳೆ ಯದು; ಕಡಿಮೆ ಕೊಬ್ಬಿನ ಅಂಶ ಇರುವ ಆಹಾರ ಪದಾರ್ಥಗಳನ್ನೂ ಅಕ್ಕಿ, ಗೋಧಿ, ಬೀನ್ಸ್‌ಗಳನ್ನು ಹೆಚ್ಚು ಸೇವಿಸಬೇಕು. "ಕಡಿಮೆ ನೀರು ಕುಡಿಯುವುದರಿಂದ ಆಟ ಗಾರರು ಹೆಚ್ಚು ಗಡುಸಾಗುತ್ತಾರೆ ಎನ್ನುವ ನಂಬಿಕೆ ತಪ್ಪು" ಎನ್ನುತ್ತಾರೆ ಡಾ॥ ಸೂರತ್ ವಾಲಾ. ಆಟದಲ್ಲಿ ಕಳೆದುಕೊಳ್ಳುವ ಶಕ್ತಿ ಯನ್ನು ಮರಳಿ ಪಡೆಯಲು ಸಿಹಿಹಾಕಿರದ ತಾಜಾ ಹಣ್ಣಿನ ರಸ ಕುಡಿಯುವುದು

ಒಳ್ಳೆಯದು. ಇದೆಲ್ಲದಕ್ಕಿಂತಲೂ ಸರಳ ಉಪಾಯ—ಸಾಕಷ್ಟು ತಣ್ಣನೆಯ ನೀರನ್ನು ಕುಡಿಯುವುದು.

ಒಣ ಹವೆ ಇರುವ ಕ್ಷೇತ್ರಗಳ ಬಿಸಿಲ ರಭಸದ ಹೊಡೆತ ಹೆಚ್ಚು. ಇಂತಹ ಕ್ಷೇತ್ರಗಳಲ್ಲಿ ದೇಹದ ಬೆವರು ಬೇಗ ಆವಿಯಾಗುವುದಿಲ್ಲ. ಇದರಿಂದ ದೇಹ ಬೇಗ ತಂಪಾಗಲಾರದು. ಆದುದರಿಂದ ಬೇಸಿಗೆ ದಿನಗಳಲ್ಲಿ ಹಗುರವಾದ, ತೆಳ್ಳನೆಯ ಮತ್ತು ಸಡಿಲವಾದ ಹತ್ತಿ ಬಟ್ಟೆ ತೊಡುವುದು ಸೂಕ್ತ.

ನಿಮ್ಮ ದೇಹ ಶುಷ್ಕಗೊಂಡಿದೆಯೇ ಎಂದು ತಿಳಿಯಲು ಒಂದು ಸರಳ ಪರೀಕ್ಷೆ ಇದೆ. ನಿಮ್ಮ ಹಿಂಗೈಯ ಚರ್ಮವನ್ನು ಎರಡು ಬೆರಳುಗಳಲ್ಲಿ ಹಿಡಿದುಕೊಂಡು ಎಳೆದು, ಬಿಡಿ. ಚರ್ಮ ಕೂಡಲೇ ತನ್ನ ಮೊದಲಿನ ರೂಪಕ್ಕೆ ಬಂದಲ್ಲಿ ದೇಹ ಶುಷ್ಕಗೊಂಡಿಲ್ಲ ಎಂದೂ ಚರ್ಮ ಕೆಲವು ಕ್ಷಣಗಳವರೆಗೆ ಕೋನಸರೂಪದಲ್ಲಿ ನಿಂತಿದ್ದಲ್ಲಿ ಶುಷ್ಕಗೊಂಡಿದೆ ಎಂದೂ ಅರ್ಥ.

ಹರೆಯದಲ್ಲಿ ನಾವು ನಮ್ಮ ದೇಹದ ಬಗ್ಗೆ ಗಮನ ನೀಡುವುದಿಲ್ಲ. ಇಂದಿನ ಸ್ಪರ್ಧಾತ್ಮಕ ದಿನಗಳಲ್ಲಿ, ಒಬ್ಬರನ್ನೊಬ್ಬರು ಮೀರಿಸುವ ಛಲದಲ್ಲಿ ದೇಹದ ಬಗ್ಗೆ ಪರಿವೇ ಇಲ್ಲದೆ ದುಡಿಯುತ್ತೇವೆ. ಇಂತಹ ದುಡಿಮೆ ದೇಹವನ್ನು ಬಹಳ ಬೇಗ ಶುಷ್ಕಗೊಳಿಸುತ್ತದೆ. ಇದು ತೀರ ಅಪಾಯಕಾರಿಯೂ ಆಗಬಹುದು. ದೇಹಕ್ಕೆ ಮೂಲಭೂತವಾಗಿ ಬೇಕಾಗಿರುವುದು ವಿಶ್ರಾಂತಿ ಮತ್ತು ನೀರಿನ ಅಂಶ ಎನ್ನುವುದನ್ನು ಮರೆಯದಿರುವುದು ಲೇಸು.



ಮಾನವರು ದೇವರನ್ನು ಮರೆತು ಭೌತಿಕ ಸುಖದ ಬೆನ್ನು ಹತ್ತಿ ಹೋಗುವುದರಿಂದಲೇ ಅವನ ದೇಹಕ್ಕೆ ರೋಗ ರುಜಿನಗಳು ಅಂಟಿಕೊಳ್ಳುತ್ತವೆ.

—ಗುರುನಾನಕ್

ಚಿನ್ನದ ಹಬ್ಬದ ಸಡಗರದಲ್ಲಿ ಟ್ರಾನ್ಸಿಸ್ಟರ್

ಡಾ|| ಎ. ಪಿ. ರಾಧಾಕೃಷ್ಣ
ಸೇಂಟ್ ಫಿಲೋಮಿನ ಕಾಲೇಜ್
ದರ್ಬೆ, ಪುತ್ತೂರು (ದ. ಕ.)

ಟ್ರಾನ್ಸಿಸ್ಟರ್ ಯುಗ, ಟ್ರಾನ್ಸಿಸ್ಟರ್ ಕ್ರಾಂತಿ ಎಂದು ಸುಂತಾಗಿ ವರ್ತಮಾನಕಾಲವನ್ನು ವರ್ಣಿಸುವುದುಂಟು—ಗುಂಡಿ ಒತ್ತು, ಯಂತ್ರ ಚಾಲೂ ಮಾಡು ಎಂಬುದು ರೂಢಿಯ ಮಾತು. ವ್ಯಕ್ತಿಯ ಈ 'ಗುಂಡಿ ಒತ್ತು' ಆದೇಶವನ್ನು ಕ್ಷಿಪ್ರವಾಗಿ ಮತ್ತು ಸಮರ್ಥವಾಗಿ ನಿರ್ವಹಿಸುವ ಆ ಅಲ್ಲಾಉದ್ದೀನನ ವಿಚಿತ್ರ ದೀಪದಿಂದ ಚಿಮ್ಮುವ 'ರಾಕ್ಷಸ' ಯಾರು? ಆತನ ಶೋಧ ಹೇಗೆ ನಡೆಯಿತು? ಓದಿ ಈ ವಿಜ್ಞಾನ 'ಕಾದಂಬರಿ'ಯನ್ನು ವಿಶೇಷ ಏಕಾಗ್ರತೆ ಸಹಿತ.

ಐವತ್ತು ವರ್ಷಗಳ ಹಿಂದೆ. ೧೯೪೮, ಜುಲೈ ೧ ರಂದು ಅಮೆರಿಕದ ಪ್ರತಿಷ್ಠಿತ ಪತ್ರಿಕೆ 'ನ್ಯೂಯಾರ್ಕ್ ಟೈಮ್ಸ್' ಪ್ರಕಟಿಸಿದ ವರದಿ—

> 'ಬೆಲ್ ಸಂಶೋಧನಾಲಯದ ತಜ್ಞರು ಟ್ರಾನ್ಸಿಸ್ಟರ್ ಎಂಬ ಹೊಸದೊಂದು ಉಪಕರಣವನ್ನು ತೀರ ಇತ್ತೀಚೆಗೆ ಉಪಜ್ಞಿಸಿದ್ದಾರೆ. ರೇಡಿಯೊ, ಟಿ. ವಿ., ಟೆಲಿಫೋನ್‌ಗಳಲ್ಲಿ ಇಂದು ಬಳಕೆಯಲ್ಲಿರುವ ನಿರ್ವಾತ ನಳಿಗೆಗಳಾದ ಡಯೋಡ್, ಟ್ರಯೋಡುಗಳ ಸ್ಥಾನವನ್ನು ಭವಿಷ್ಯದಲ್ಲಿ ಟ್ರಾನ್ಸಿಸ್ಟರುಗಳು ಅಲಂಕರಿಸಲಿವೆ. ವಿದ್ಯುತ್ ಸಂಜ್ಞೆಗಳ ಸಂಗ್ರಾಹಕವಾಗಿ ಅಥವಾ ವರ್ಧಕವಾಗಿ ಟ್ರಾನ್ಸಿಸ್ಟರನ್ನು ಉಪಯೋಗಿಸುವ ಬಗ್ಗೆ ಬೆಲ್ ವಿಜ್ಞಾನಿಗಳು ಪ್ರಾತ್ಯಕ್ಷಿತೆ ನೀಡಿದರು. ಸ್ತಂಭಾಕೃತಿಯ ಈ ಉಪಕರಣದ ಗಾತ್ರ—ಚಿಕ್ಕ ಸಿಗರೇಟ್ ಪೆಟ್ಟಿಗೆಯಷ್ಟಿದೆ. ಆದರೆ ಇದಕ್ಕಿದೆ—ಎಣೆ ಇರದ ಸಾಮರ್ಥ್ಯ. ಇದರಲ್ಲಿ ನಿರ್ವಾತ ನಳಿಗೆ ಇಲ್ಲ, ಲೋಹದ ಪಟ್ಟಿಗಳಿಲ್ಲ, ಗಾಜಿನ ಕವಚವಿಲ್ಲ. ನಿರ್ವಾತ ನಳಿಗೆಗಳಂತೆ ಕಾವೇರುವ ತನಕ ಕಾಯಬೇಕಾಗಿಲ್ಲ. ಚಾಲೂ ಮಾಡಿದ ಆ ಕ್ಷಣದಲ್ಲಿ ಕಾರ್ಯಾರಂಭಿಸುತ್ತದೆ.'

ಟ್ರಾನ್ಸಿಸ್ಟರನ್ನು ಉಪಜ್ಞಿಸಿದವರು—ಅಮೆರಿಕದ ಬೆಲ್ ಸಂಶೋಧನಾಲಯದ ಭೌತ ವಿಜ್ಞಾನಿಗಳಾದ ಜಾನ್ ಬಾರ್ಡೀನ್ (೧೯೦೮–೧೯೯೧), ವಾಲ್ಟರ್ ಬ್ರೆಟ್ಟೆನ್ (೧೯೦೨–೧೯೮೭) ಮತ್ತು ವಿಲಿಯಮ್ ಶೋಕ್ಲಿ (೧೯೧೦–). ಘನವಸ್ತುಗಳ ಮೂಲಭೂತ ರಚನೆಯನ್ನು ಅರಿಯಲು

ನಡೆದ ಸಂಶೋಧನೆಗಳ ಫಲವಾಗಿ ಟ್ರಾನ್ಸಿಸ್ಟರ್ ಅವತರಿಸಿತು. ಈ ಶತಮಾನದ ಉತ್ತರಾರ್ಧ ದಶಕಗಳಲ್ಲಿ ಎಲೆಕ್ಟ್ರಾನಿಕ್ ಮತ್ತು ಕಂಪ್ಯೂಟರ್ ತಂತ್ರವಿದ್ಯೆಯ ಅಭೂತಪೂರ್ವ ಅಭಿವರ್ಧನೆಯಲ್ಲಿ ಟ್ರಾನ್ಸಿ-ಸ್ಟರ್ ಮುಖ್ಯ ಪಾತ್ರ ವಹಿಸಿದೆ.

ಎಡಿಸನ್ ಪರಿಣಾಮ

ಮೂರು ಅಥವಾ ನಾಲ್ಕು ದಶಕಗಳ ಹಿಂದೆ ಚಾಲ್ತಿಯಲ್ಲಿದ್ದ ರೇಡಿಯೋಗಳನ್ನು ಗಮನಿಸಿದ್ದೀರಾ? ಇಂದು ಕಿಸೆಯಲ್ಲಿ ಇರಿಸಿ ಕೊಳ್ಳಬಲ್ಲ ಕಿರುಗಾತ್ರದ ರೇಡಿಯೋಗಳು ಲಭ್ಯವಿದ್ದರೆ, ಅಂದಿನ ರೇಡಿಯೋಗಳದು ಅಗಾಧ ಗಾತ್ರ. ಅಂಥ ಒಂದು ರೇಡಿಯೋ ಒಳಗೆ ಹಲವಾರು ಗಾಜಿನ ಬರುಡೆಗಳು ಅಥವಾ ನಳಿಗೆಗಳು. ರೇಡಿಯೋ ಚಾಲೂ ಮಾಡಿದಾಗ ನಳಿಗೆಗಳಲ್ಲಿ ವಿದ್ಯುತ್ ಪ್ರವಹಿಸಿ ಬಿಸಿಯಾದಂತೆ ಸ್ವರ ಹೊರಡುತ್ತಿತ್ತು. ಈ ನಿರ್ವಾತ ನಳಿಗೆಗಳ ಸೃಷ್ಟಿಗೆ ಪ್ರೇರಣೆ ನೀಡಿದವನು— ಥಾಮಸ್ ಆಲ್ವ ಎಡಿಸನ್ (೧೮೪೭–೧೯೩೧).

ಅಮೆರಿಕದ ಮೆನ್ಲೊ ಪಾರ್ಕ್ ಎಂಬಲ್ಲಿ ಎಡಿಸನ್ನನ ಸಂಶೋಧನಾಲಯ; ಸತತ ಪ್ರಯೋಗ ಚಟುವಟಿಕೆಗಳ ತಾಣ. ೧೮೭೯, ಅಕ್ಟೋಬರ್ ೨೧ರ ಸಂಜೆ ಕತ್ತಲು ಮುಸುಕುತ್ತಿರುವಂತೆ ಮೆನ್ಲೊ ಪಾರ್ಕಿನಲ್ಲಿ ನೂರಾರು ವಿದ್ಯುತ್ ದೀಪಗಳು ಮಂದ ಪ್ರಕಾಶದಿಂದ ಬೆಳಗಲಾರಂಭಿಸಿ ಅಲ್ಲೊಂದು ಮಾಯಾಲೋಕ ಸೃಷ್ಟಿಯಾದಾಗ, ನೆರೆದ ಜನಸಂದೋಹಕ್ಕೆ ಬೆರಗು. 'ಮೆನ್ಲೊ ಪಾರ್ಕಿನ ಮಾಂತ್ರಿಕ'—ಎಡಿಸನ್ ಉಪಜ್ಞಿಸಿದ ವಿದ್ಯುತ್ ಬುರುಡೆ ಅಥವಾ ಬಲ್ಬ್‌ಗಳಲ್ಲಿ ಇಂದಿನ ಬಲ್ಬ್‌ಗಳಲ್ಲಿರುವಂತೆ ಟಂಗಸ್ಟನ್ ತಂತಿಯ ಸುರುಳಿ ಇರಲಿಲ್ಲ. ಆತ ಬಳಸಿದ್ದು ಸುಟ್ಟ ಹತ್ತಿಯ ಎಳೆಯನ್ನೇ ತಂತಿ ಸುರುಳಿಯಾಗಿ. ವಿದ್ಯುದ್ದೀಪವೇನೋ ಬೆಳಗಿತು. ಆದರೆ ಅಲ್ಲಿ ಹಲವು ಗಂಭೀರ ತೊಡಕುಗಳಿದ್ದುವು.

ವಿದ್ಯುದ್ದೀಪ ಬೆಳಗಲಾರಂಭಿಸಿದಂತೆ, ಅದರ ಹತ್ತಿ ಎಳೆಯಿಂದ ಎದ್ದ ಕರ್‍ರಗಿನ ಹೊಗೆ ದೀಪದ ಗಾಜಿನ ಬುರುಡೆಗಂಟಿಕೊಂಡು ಪ್ರಕಾಶ ಕುಂಠಿತವಾಗುತ್ತಿತ್ತು— ಆಯುಸ್ಸು ಕೂಡ. ಈ ಸಮಸ್ಯೆಯ ನಿವಾರಣೆಗಾಗಿ ಬುರುಡೆಯೊಳಗೆ ಲೋಹದ ಚಿಕ್ಕ ತಗಡನ್ನು ಜೋಡಿಸಿದ. ಕರ್‍ರಗಿನ ಹೊಗೆ ತಗಡಿಗೆ ಅಂಟಿಕೊಂಡು ಸಮಸ್ಯೆ ನಿವಾರಣೆಯಾದೀತೆಂದು ನಿರೀಕ್ಷೆಯಾಗಿತ್ತು. ಆದರೆ ಪ್ರಯತ್ನ ನಿರೀಕ್ಷಿತ ಪರಿಣಾಮ ಬೀರಲಿಲ್ಲ. ಎಡಿಸನ್ ಗಮನಿಸಿದ್ದು ಬೇರೆಯೇ ಪರಿಣಾಮವನ್ನು.

ಒಂದಲ್ಲ ಒಂದು ಪ್ರಯೋಗದಲ್ಲಿ ನಿರತನಾಗುತ್ತಿದ್ದುದು ಎಡಿಸನ್ನನ ಜಾಯಮಾನ. ವಿದ್ಯುತ್ ಬುರುಡೆಯೊಳಗಿನ ಲೋಹದ ತಗಡನ್ನು ಗ್ಯಾಲ್ವನೊ ಮಾಪಕಕ್ಕೂ (ವಿದ್ಯುತ್ತನ್ನು ಅಳೆಯುವ ಉಪಕರಣ), ಗ್ಯಾಲ್ವನೊ ಮಾಪಕವನ್ನು ವಿದ್ಯುತ್ಕೋಶದ (ಬ್ಯಾಟರಿ) ಧನಧ್ರುವಕ್ಕೂ ಜೋಡಿಸಿ ವಿದ್ಯುತ್ ಹಾಯಿಸಿದರೆ ಏನಾಗುತ್ತದೆನ್ನುವ ಬಗ್ಗೆ ಕುತೂಹಲದಿಂದ ಪ್ರಯೋಗ ಪ್ರಾರಂಭಿಸಿದ. ಬುರುಡೆಯೊಳಗಿನ ತಂತಿಯಲ್ಲಿ ವಿದ್ಯುತ್ ಪ್ರವಹಿಸಿ ಬಿಸಿಯಾದಂತೆ ಬೆಳಕು ಹೊಮ್ಮಿತು. ಇದರೊಂದಿಗೆ ಗ್ಯಾಲ್ವನೊ ಮಾಪಕದಲ್ಲಿ ಸೂಚಿ ಕೂಡ ಚಲಿಸಿತು! ಅಂದರೆ ತಂತಿ ಮತ್ತು ತಗಡಿನ ಮಧ್ಯೆ ಅಂತರವಿದ್ದರೂ, ಅಲ್ಲಿ

ವಿದ್ಯುತ್ ಪ್ರವಹಿಸುತ್ತಿತ್ತು. ಎಡಿಸನ್ ಈ ಪರಿಣಾಮವನ್ನು ಗಮನಿಸಿದ. ಆದರೆ ವಿವರಿಸುವ ಗೋಜಿಗೆ ಹೋಗಲಿಲ್ಲ. ಏಕೆಂದರೆ ಅರ್ಧದಲ್ಲೇ ಬಾಕಿಯಾಗಿ ಉಳಿದ ಇನ್ನೂ ಹಲವು ಪ್ರಯೋಗಗಳಿದ್ದಿರಬಹುದು. ಎಡಿಸನ್ನನಿಗೆ ಪ್ರಯೋಗ ಫಲಿತಾಂಶಗಳು ಮುಖ್ಯವಾಗಿತ್ತೇ ಹೊರತು, ಅವುಗಳ ಕಾರ್ಯ–ಕಾರಣ ಸಂಬಂಧವಲ್ಲ.

೧೮೯೭ರಲ್ಲಿ ಬ್ರಿಟಿಷ್ ಭೌತ ವಿಜ್ಞಾನಿ ಜೆ. ಜೆ. ಥಾಮ್ಸನ್ (೧೮೫೬–೧೯೪೦) ಋಣ ವಿದ್ಯುದಾವೇಶವಿರುವ ಎಲೆಕ್ಟ್ರಾನುಗಳೆಂಬ ಕಣಗಳನ್ನು ಆವಿಷ್ಕರಿಸಿದಾಗ, ವಿದ್ಯುತ್ ಅಂದರೆ ಎಲೆಕ್ಟ್ರಾನುಗಳ ಅನುಸ್ಯೂತ ಪ್ರವಾಹವೆಂದು ಸ್ಪಷ್ಟವಾಯಿತು. ಇದೇ ಅವಧಿಯಲ್ಲಿ ಇನ್ನೊಬ್ಬ ಬ್ರಿಟಿಷ್ ಭೌತ ವಿಜ್ಞಾನಿ ವಿಲಿಯಮ್ ರಿಚರ್ಡ್ಸನ್ (೧೮೭೯–೧೯೫೯), ಆ ವೇಳೆಗೆ ಮರೆತು ಹೋಗಿದ್ದ 'ಎಡಿಸನ್ ಪರಿಣಾಮ'ದ ಬಗ್ಗೆ ಆಸಕ್ತಿ ತಳೆದು ಅಧ್ಯಯನಿಸಿದರು ಮತ್ತು ಆ ಪರಿಣಾಮಕ್ಕೆ ಸ್ಪಷ್ಟ ವೈಜ್ಞಾನಿಕ ವಿವರಣೆ ನೀಡಿದರು. ವಿದ್ಯುದ್ದೀಪದಲ್ಲಿ ತಂತಿ ಬಿಸಿಯಾದಂತೆ ಅದರಿಂದ ಎಲೆಕ್ಟ್ರಾನುಗಳು ಉತ್ಸರ್ಜನೆಗೊಂಡು, ಅವು ವಿದ್ಯುತ್ಕೋಶದ ಧನ ಧ್ರುವಕ್ಕೆ ಜೋಡಿಸಿದ ಲೋಹದ ತಟ್ಟೆಯ ಕಡೆಗೆ ಪ್ರವಹಿಸಿ ಉಂಟಾಗುವ ವಿದ್ಯುತ್ಪ್ರವಾಹದಿಂದ ಗ್ಯಾಲ್ವನೊ ಮೀಟರಿನಲ್ಲಿ ಸೀವನಿ ಚಲಿಸುತ್ತವೆಂದು ರಿಚರ್ಡ್ಸನ್ ವಿವರಿಸಿದರು. ಆದರೆ ಇದಕ್ಕಿಂತಲೂ ಮುಖ್ಯವಾಗಿ ಲೋಹಗಳನ್ನು ಬಿಸಿ ಮಾಡಿದಾಗ ಅವುಗಳಿಂದ ಎಲೆಕ್ಟ್ರಾನುಗಳು ಯಾತಕ್ಕೆ ಮತ್ತು ಹೇಗೆ ಉತ್ಸರ್ಜನೆಗೊಳ್ಳುತ್ತವೆಂಬ ಪ್ರಶ್ನೆಗಳಿಗೆ ಸೈದ್ಧಾಂತಿಕ ವಿವರಣೆಯನ್ನು ಅವರು ನೀಡಿದರು. ಈ ಸಂಶೋಧನೆಗಾಗಿ ರಿಚರ್ಡ್ಸನ್ ೧೯೨೮ರಲ್ಲಿ ನೊಬೆಲ್ ಪ್ರಶಸ್ತಿಯನ್ನು ಪಡೆದರು. ನಿರ್ವಾತ ವಿದ್ಯುತ್ ನಳಿಗೆಗಳ ನಿರ್ಮಾಣ ಮತ್ತು ಅದನ್ನನುಸರಿಸಿ ಭೌತ ವಿಜ್ಞಾನದಲ್ಲಿ ಎಲೆಕ್ಟ್ರಾನಿಕ್ಸ್ ಎಂಬ ನೂತನ ಶಾಖೆಯ ಉಗಮದಲ್ಲಿ ರಿಚರ್ಡ್ಸನ್ ಸಿದ್ಧಾಂತದ ಭೂಮಿಕೆ ಮಹತ್ವದ್ದು.

ಬ್ರಿಟಿಷ್ ಎಲೆಕ್ಟ್ರಿಕಲ್ ಎಂಜನೀಯರ್ ಜಾನ್ ಆ್ಯಂಬ್ರೋಸ್ ಫ್ಲೆಮಿಂಗ್ (೧೮೪೯-೧೯೪೫) ಎರಡು ವಿದ್ಯುತ್ ಧ್ರುವಗಳುಳ್ಳ ನಿರ್ವಾತ ನಳಿಗೆಯನ್ನು ನಿರ್ಮಿಸಿದರು (೧೯೦೪). ಇದರಲ್ಲಿ ಟಂಗಸ್ಟನ್ ಲೋಹದ ತಂತಿ ಋಣ ಧ್ರುವವಾಗಿಯೂ (ಕ್ಯಾಥೋಡ್), ಬೇರೊಂದು ಲೋಹದ ತಟ್ಟೆ ಧನ ಧ್ರುವವಾಗಿಯೂ (ಆ್ಯನೋಡ್) ಕಾರ್ಯ ನಿರ್ವಹಿಸುತ್ತಿದ್ದುವು. ನಳಿಗೆಯಲ್ಲಿ ಎರಡು ವಿದ್ಯುತ್ ಧ್ರುವಗಳಿದ್ದುದರಿಂದ ಅದಕ್ಕೆ 'ಡಯೋಡ್' ಎಂಬ ಹೆಸರು ಬಂತು. ಇದರ ಇನ್ನಷ್ಟು ಪರಿಷ್ಕೃತ ರೂಪವಾಗಿ ಮೂರು ವಿದ್ಯುತ್ ಧ್ರುವಗಳುಳ್ಳ 'ಟ್ರಯೋಡ್' ಎಂಬ ನಿರ್ವಾತ ನಳಿಗೆಯನ್ನು ಅಮೆರಿಕದ ಲೀ. ಡೆ. ಫೊರೆಸ್ಟ್ (೧೮೭೩–೧೯೬೧) ೧೯೦೬ರಲ್ಲಿ ಉಪಜ್ಞಿಸಿದರು. ಈ ಎರಡು ಉಪಕರಣಗಳನ್ನು ಬಳಸಿಕೊಂಡು ರೇಡಿಯೊ, ಟಿವಿ, ಗ್ರಾಮೊಫೋನ್ ಮೊದಲಾದ ಉಪಕರಣಗಳು, ಟೆಲಿಫೋನ್ ಮತ್ತು ಟೆಲಿಗ್ರಾಫ್ ವ್ಯವಸ್ಥೆಗಳು ಚಾಲ್ತಿಗೆ ಬಂದುವು.

ಗಾಜಿನ ನಳಿಗೆಗಳಾದ ಡಯೋಡ್, ಟ್ರಿಯೋಡುಗಳ ಗಾತ್ರ ಅಂದಿನ ತಂತ್ರ-ವಿದ್ಯೆಯ ಬಲು ದೊಡ್ಡ ಸಮಸ್ಯೆಯಾಗಿತ್ತು ವಿದ್ಯುನ್ಮಂಡಲ ಸಂಕೀರ್ಣವಾದಂತೆ ಅಧಿಕ

ಸಂಖ್ಯೆಯಲ್ಲಿ ನಿರ್ವಾತ ನಳಿಗೆಗಳ ಬಳಕೆ ಕೂಡ ಅನಿವಾರ್ಯ. ಪರಿಣಾಮವಾಗಿ ಉಪಕರಣದ ಗಾತ್ರ ಕೂಡ ಹೆಚ್ಚುತ್ತಿತ್ತು. ನಳಿಗೆಗಳು ತುಸು ಕಾವೇರಿದ ನಂತರವಷ್ಟೇ ಕಾರ್ಯಕ್ಕೆ ತೊಡಗುತ್ತಿದ್ದುದು ಇನ್ನೊಂದು ಮುಖ್ಯ ಮಿತಿಯಾಗಿತ್ತು. ಇದರೊಂದಿಗೆ, ಉಪಯೋಗದ ಅವಧಿ ಹೆಚ್ಚಿದಂತೆ ನಳಿಗೆಗಳ ಉಷ್ಣತೆ ಕೂಡ ಏರುತ್ತಿತ್ತು. ಈ ಎಲ್ಲ ಸಮಸ್ಯೆಗಳ ನಿವಾರಣೆಗೆ ಭೌತ ವಿಜ್ಞಾನಿಗಳು ಗಮನ ಹರಿಸಿದ್ದು—ಅರೆವಾಹಕವಾದ ಘನ ವಸ್ತುಗಳತ್ತ.

ಅರೆವಾಹಕಗಳು

ವಸ್ತುಗಳಲ್ಲಿ ವಿದ್ಯುತ್ತು ಪ್ರವಹಿಸುವಾಗ—ಅಂದರೆ ಎಲೆಕ್ಟ್ರಾನುಗಳು ಚಲಿಸುವಾಗ—ವಸ್ತುವಿನ ಅಣು, ಪರಮಾಣುಗಳಿಂದ ಪ್ರತಿರೋಧ ವ್ಯಕ್ತವಾಗುತ್ತದೆ. ಕೆಲವು ವಸ್ತುವಾಗುತ್ತದೆ. ಕೆಲವು ವಸ್ತುಗಳಲ್ಲಿ ಗರಿಷ್ಠ ಪ್ರತಿರೋಧ; ಇನ್ನು ಕೆಲವು ವಸ್ತುಗಳಲ್ಲಿ ಕನಿಷ್ಠ. ಈ ವಿದ್ಯುತ್ ಪ್ರತಿರೋಧವನ್ನು ಅನುಸರಿಸಿ ವಸ್ತುಗಳನ್ನು ಮೂರು ವರ್ಗಗಳಾಗಿ ವರ್ಗೀಕರಿಸಬಹುದು.

ಗರಿಷ್ಠ ಪ್ರತಿರೋಧ ಒಡ್ಡುವ ಅವಾಹಕಗಳು (ಗಾಜು, ರಬ್ಬರ್, ಪ್ಲಾಸ್ಟಿಕ್, ಪಿಂಗಾಣಿ ಇತ್ಯಾದಿ), ಕನಿಷ್ಠ ಪ್ರತಿರೋಧ ತೋರುವ ವಾಹಕಗಳು (ತಾಮ್ರ, ಕಬ್ಬಿಣ, ಅಲ್ಯೂಮಿನಿಯಮ್, ಪ್ಲಾಟಿನಮ್, ಟಂಗ್‌ಸ್ಟನ್ ಮೊದಲಾದ ಲೋಹಗಳು), ಅತ್ತ ವಾಹಕವೂ ಆಗದೆ, ಇತ್ತ ಅವಾಹಕವೂ ಅಲ್ಲದ ಅರೆವಾಹಕಗಳು (ಜರ್ಮೇನಿಯಮ್, ಸಿಲಿಕಾನ್, ಸಿಲೇನಿಯಮ್, ಕ್ಯಾಡ್ಮಿಯಮ್ ಸಲ್ಫೈಡ್, ಗ್ಯಾಲಿಯಮ್ ಆರ್ಸೆನೈಡ್, ಇತ್ಯಾದಿ). ಲೋಹಗಳಲ್ಲಿ ಉಷ್ಣತೆ ಹೆಚ್ಚಿದಂತೆ ವಿದ್ಯುತ್ ಪ್ರತಿರೋಧ ಹೆಚ್ಚುತ್ತದೆ. ಆದರೆ ಅರೆವಾಹಕಗಳು ಇದಕ್ಕೆ ವ್ಯತಿರಿಕ್ತ. ಇವುಗಳಲ್ಲಿ ಉಷ್ಣತೆ ಹೆಚ್ಚಿದಂತೆ ಪ್ರತಿರೋಧ ಕಡಿಮೆಯಾಗುತ್ತದೆ. ಅಂದರೆ ಕಡಿಮೆ ಉಷ್ಣತೆಯಲ್ಲಿ ಅರೆವಾಹಕಗಳಾಗಿರುವ ಇವು (ಅತ್ಯಂತ ನಿಮ್ನೋಷ್ಣತೆಯಾದ —೨೭೩ ಡಿಗ್ರಿ ಸೆಲ್ಸಿಯಸ್ ಅಥವಾ ಶೂನ್ಯ ಡಿಗ್ರಿ ಕೆಲ್ವಿನ್‌ನಲ್ಲಿ ಇವು ಕೂಡ ಪರಿಪೂರ್ಣ ಅವಾಹಕಗಳ್) ಉಷ್ಣತೆ ಹೆಚ್ಚಿದಂತೆ ವಾಹಕಗಳಾಗುತ್ತವೆ.

ಈ ಶತಮಾನದ ಮೂವತ್ತರ ದಶಕದಲ್ಲಿ ಸಿಲಿಕಾನ್, ಜರ್ಮೇನಿಯಮ್ ಮೊದಲಾದ ಅರೆವಾಹಕಗಳಲ್ಲಿ ವಿದ್ಯುದ್ವಾಹಕತ್ವವನ್ನು ಹೆಚ್ಚಿಸುವ ಬಗ್ಗೆ ಸಂಶೋಧನೆಗಳು ಬಿರುಸಿನಿಂದ ಸಾಗಿದುವು. ಇಂಥ ಸಂಶೋಧನೆಗಳಲ್ಲಿ ಬೆಲ್ ಸಂಶೋಧನಾಲಯ ಮುಂಚೂಣಿಯಲ್ಲಿತ್ತು. ಅರೆವಾಹಕಗಳಿಗೆ ಅತ್ಯಂತ ಅಲ್ಪ ಪ್ರಮಾಣದಲ್ಲಿ ಕೆಲವು ರಾಸಾಯನಿಕಗಳನ್ನು ಸೇರಿಸಿದಾಗ ಅವುಗಳಲ್ಲಿ ವಿದ್ಯುದ್ವಾಹಕತ್ವ ಹಲವು ಪಟ್ಟು ಹೆಚ್ಚುತ್ತದೆಂದು ಸಂಶೋಧನೆಗಳು ಸೂಚಿಸಿದುವು. ವಾಸ್ತವವಾಗಿ ಇದೊಂದು ಕಲಬೆರಕೆ ತಂತ್ರ. ಸಾಮಾನ್ಯವಾಗಿ ಕಲಬೆರಕೆಯಿಂದ ವಸ್ತುವಿನ ಗುಣಮಟ್ಟ ನಿಕೃಷ್ಟವಾದರೆ, ಇಲ್ಲಿ ಮಾತ್ರ—ವಿದ್ಯುದ್ವಾಹಕತ್ವಕ್ಕೆ ಸಂಬಂಧಿಸಿದಂತೆ—ಉತ್ಕೃಷ್ಟವಾಗುತ್ತದೆ!

ಪರಿಶುದ್ಧವಾದ ಸಿಲಿಕಾನ್ (ಅಥವಾ ಜರ್ಮೇನಿಯಮ್) ಹರಳಿಗೆ— ಅದರ ಉಗಮದ ಹಂತದಲ್ಲಿಯೇ—ಅತ್ಯಲ್ಪ ಪ್ರಮಾಣದಲ್ಲಿ ಫಾಸ್ಫರಸ್, ಬಿಸ್ಮತ್ ಅಥವಾ ಆರ್ಸೆನಿಕ್ ರಾಸಾಯನಿಕವನ್ನು ಸೇರಿಸಿ

ದಾಗ ಸಿಲಿಕಾನಿನ ವಿದ್ಯುದ್ವಾಹಕತ್ವ ಗಣನೀಯವಾಗಿ ಹೆಚ್ಚುತ್ತದೆ. ಇದಕ್ಕೆ ರಾಸಾಯನಿಕದ ಸೇರ್ಪಡೆಯಿಂದ ಸಿಲಿಕಾನ್ ಹರಳಿನಲ್ಲಿ ಬದಲಾವಣೆಯಾಗಿ ಸ್ವತಂತ್ರ ಎಲೆಕ್ಟ್ರಾನುಗಳ ಸಂಖ್ಯೆ ವೃದ್ಧಿಸುವುದೇ ಕಾರಣ. ಈ ಅಪರಿಶುದ್ಧ ಅರೆವಾಹಕದಲ್ಲಿ ಅಧಿಕ ಸಂಖ್ಯೆಯಲ್ಲಿ ಸ್ವತಂತ್ರ ಎಲೆಕ್ಟ್ರಾನುಗಳಿರುವುದರಿಂದ ಅರೆವಾಹಕ ಋಣಾವಿಷ್ಟ. ಎಂದೇ ಇದಕ್ಕೆ n—ಬಗೆಯ ಅರೆವಾಹಕ ಎಂದು ಹೆಸರು. ಇದರ ಬದಲಿಗೆ, ಸಿಲಿಕಾನ್ ಹರಳಿಗೆ ಅತ್ಯಲ್ಪ ಪ್ರಮಾಣದಲ್ಲಿ ಬೋರಾನ್ ಅಥವಾ ಅಲ್ಯೂಮಿನಿಯಮ್ ರಾಸಾಯನಿಕವನ್ನು ಸೇರಿಸಿದಾಗ ಧನಾವಿಷ್ಟ ಅರೆವಾಹಕ ಲಭ್ಯವಾಗುತ್ತದೆ. ವೈಜ್ಞಾನಿಕ ಪರಿಭಾಷೆಯಲ್ಲಿ ಇದಕ್ಕೆ p—ಬಗೆಯ ಅರೆವಾಹಕ ಎನ್ನುತ್ತಾರೆ.

ಸಿಲಿಕಾನ್ ಅಥವಾ ಜರ್ಮೇನಿಯಮ್ ಹರಳಿನ ತುಂಡನ್ನು ಸೃಷ್ಟಿಸುವ ಸಂದರ್ಭದಲ್ಲಿ, ಹರಳಿನ ಒಂದು ತುದಿಗೆ ಅಲ್ಯೂಮಿನಿಯಮ್ ಮತ್ತು ಇನ್ನೊಂದು ತುದಿಗೆ ಫಾಸ್ಫರಸ್ಸನ್ನು ಸೇರಿಸಿದಾಗ. p ಮತ್ತು n ಅರೆವಾಹಕಗಳ ಜೋಡಣೆ ಸೃಷ್ಟಿಯಾಗುತ್ತದೆ. ಇಂಥ pn ಅರೆವಾಹಕದಲ್ಲಿ ಒಂದು ತುದಿ ಧನ ವಿದ್ಯುತ್ ಧ್ರುವದಂತೆಯೂ, ಇನ್ನೊಂದು ತುದಿ ಋಣ ವಿದ್ಯುತ್ ಧ್ರುವದಂತೆಯೂ ವರ್ತಿಸುತ್ತವೆ. ವಾಸ್ತವವಾಗಿ ಇದೊಂದು ಅರೆವಾಹಕ ಡಯೋಡ್—ನಿರ್ವಾತ ಡಯೋಡಿಗೊಂದು ಬದಲೀ ಉಪಕರಣ.

ಪಿಯರ್ಸ್, ಅದೇ ಹೆಸರು!

ಅರೆವಾಹಕ ಡಯೋಡ್‌ಗಳನ್ನು ನಿರ್ಮಿಸಿದ ಬೆಲ್ ಸಂಶೋಧನಾಲಯದ ಭೌತವಿಜ್ಞಾನಿಗಳ ಮುಂದಿನ ಗುರಿ—ಮೂರು ವಿದ್ಯುತ್ ಧ್ರುವಗಳುಳ್ಳ ಉಪಕರಣದ ನಿರ್ಮಾಣ. ಈ ಪ್ರಯತ್ನದಲ್ಲಿ ಜಾನ್ ಬಾರ್ಡಿನ್, ವಾಲ್ಟರ್ ಬ್ರೆಟ್ಟಿನ್ ಮತ್ತು ವಿಲಿಯಮ್ ಶೋಕ್ಲಿ ಯಶಸ್ಸು ಸಾಧಿಸಿದರು (೧೯೪೭, ಡಿಸೆಂಬರ್ ೧೬). ಬಾರ್ಡಿನ್ ಮತ್ತು ಸಂಗಡಿಗರು ಉಪಜ್ಞಿಸಿದ ಉಪಕರಣದಲ್ಲಿ ಎರಡು n—ಅರೆವಾಹಕಗಳ ಮಧ್ಯೆ ಅತ್ಯಂತ ತೆಳ್ಳಗಿನ p—ಅರೆವಾಹಕವಿತ್ತು—ಬ್ರೆಡ್ ತುಂಡುಗಳೆರಡರ ನಡುವೆ ಬೆಣ್ಣೆಯ ಪದರವಿದ್ದಂತೆ. ಈ ನೂತನ ಉಪಕರಣವನ್ನು ಬಳಸಿಕೊಂಡು ನಿರ್ಮಿಸಿದ ರೇಡಿಯೊ ಉತ್ಕೃಷ್ಟವಾಗಿ ಕಾರ್ಯ ನಿರ್ವಹಿಸುವ ಮೂಲಕ, ಸಂಪರ್ಕ ಮಾಧ್ಯಮದಲ್ಲಿ ಬರಲಿರುವ ಕ್ರಾಂತಿಯ ಮುನ್ಸೂಚನೆ ನೀಡಿತು.

ನಿರ್ವಾತ ಟ್ರಯೋಡಿಗೆ ಸಂವಾದಿಯಾದ ಹೊಸ ಉಪಕರಣವನ್ನೇನೊ ಸೃಷ್ಟಿಸಿದ್ದಾಯಿತು. ಆದರೆ ಇದಕ್ಕೆ ಹೆಸರೇನು? ನಾಮಕರಣವೇ ದೊಡ್ಡ ಸಮಸ್ಯೆಯಾಯಿತು. ಥೈರಿಸ್ಟರ್, ವೇರಿಸ್ಟರ್.... ಹೀಗೆ ಹಲವು ಹೆಸರುಗಳು ಸೂಚಿಸಲ್ಪಟ್ಟರೂ, ಅನುಮೋದನೆ ಯಾವುದಕ್ಕೂ ಸಿಗಲಿಲ್ಲ. ಅದೊಂದು ದಿನ ಬ್ರೆಟ್ಟಿನ್ ಅವರ ಪ್ರಯೋಗ ಕೊಠಡಿಗೆ ಬೆಲ್ ಸಂಶೋಧನಾಲಯದಲ್ಲೇ ಎಲೆಕ್ಟ್ರಿಕಲ್ ಎಂಜನೀಯರ್ ಆಗಿದ್ದ ಜಾನ್ ಪಿಯರ್ಸ್ (೧೯೧೦–) ಬಂದಾಗ, ತಮ್ಮ ಹೊಸ ಉಪಕರಣಕ್ಕೆ ಹೆಸರಿಡಲು ಬ್ರೆಟ್ಟಿನ್ ವಿನಂತಿಸಿದರು. ಉಪಕರಣದ ಬಲು ಮುಖ್ಯ ಕಾರ್ಯವೆಂದರೆ ವಿದ್ಯುನ್ಮಂಡಲದಲ್ಲಿ ವಿದ್ಯುತ್ ಪ್ರತಿರೋಧವನ್ನು ಒಂದೆಡೆಯಿಂದ ಇನ್ನೊಂದೆಡೆಗೆ ವರ್ಗಾಯಿಸುವ ಮೂಲಕ ವಿದ್ಯುತ್ ಸಂಜ್ಞೆಯನ್ನು

ವರ್ಧಿಸುವುದು (ಟ್ರಾನ್ಸ್‌ಫರ್ ರೆಸಿಸ್ಟೆನ್ಸ್). ಪಿಯರ್ಸ್ ಈ ಬಗ್ಗೆ ಆಲೋಚಿಸುತ್ತ ಹೇಳ ತೊಡಗಿದರು. "ಟ್ರಾನ್ಸ್ ಕಂಡಕ್ಟೆನ್ಸ್.... ಟ್ರಾನ್ಸ್ ಕಂಡಕ್ಟರ್....ಟ್ರಾನ್ಸ್ ರೆಸಿಸ್ಟೆನ್ಸ್ ....ಟ್ರಾ ನ್ಸಿ ಸ್ಟ ರ್" ಯು ರೇ ಕಾ !! ಟ್ರಾನ್ಸಿಸ್ಟರ್ ಎಂಬ ಆ ಹೆಸರನ್ನು ಕೇಳಿ ದೊಡನೆ ಬ್ರೆಟೈನ್ ಅತ್ಯುತ್ಸಾಹದಿಂದ ಜಿಗಿ ದೆದ್ದು ಉದ್ಗರಿಸಿದರು "ಪಿಯರ್ಸ್, ಅದುವೇ ....ಅದುವೇ....ಅದರ ಹೆಸರು."

ಟ್ರಾನ್ಸಿಸ್ಟರಿನ ಉಪಜ್ಞೆಗಾಗಿ ಬಾರ್ಡೀನ್, ಬ್ರೆಟೈನ್ ಮತ್ತು ಶೊಕ್ಲಿ ೧೯೫೬ರಲ್ಲಿ ನೊಬೆಲ್ ಪ್ರಶಸ್ತಿ ಪಡೆದರು. ಬಾರ್ಡೀನ್ ಅದೆಂಥ ಉತ್ಕೃಷ್ಟ ಭೌತ ವಿಜ್ಞಾನಿಯಾಗಿದ್ದ ರೆಂದರೆ, ೧೯೭೨ರಲ್ಲಿ ಮತ್ತೊಮ್ಮೆ ಭೌತ ವಿಜ್ಞಾನದಲ್ಲಿ ನೊಬೆಲ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು ; ಒಂದೇ ವಿಭಾಗ ದಲ್ಲಿ ಎರಡು ಬಾರಿ ನೊಬೆಲ್ ಪ್ರಶಸ್ತಿ ಪಡೆದ ಪ್ರಪ್ರಥಮ ವಿಜ್ಞಾನಿಯಾಗಿ ದಾಖಲಾದರು. ಈ ಬಾರಿ ಅವರು ಅಮೆರಿಕದ ವಿಜ್ಞಾನಿ ಗಳಾದ ಲಿಯಾನ್ ಕೂಪರ್ (೧೯೩೦–) ಮತ್ತು ಶ್ರೀಫರ್(೧೯೩೧–)ಅವರೊಂದಿಗೆ ನೊ ಬೆ ಲ್ ಪ್ರ ಶ ಸ್ತಿ ಹಂಚಿಕೊಂಡರು— ಅತಿವಾಹಕತ್ವವನ್ನು ವಿವರಿಸುವ ತಮ್ಮ ಪ್ರಗಲ್ಭ ಸಿದ್ಧಾಂತಕ್ಕಾಗಿ. ಅತಿವಾಹಕತ್ವ ವೆಂದರೆ ಕೆಲವು ಲೋಹಗಳು ಒಂದು ನಿ ರ್ದಿ ಷ್ಟ ನಿಮ್ನೋಷ್ಣತೆಯಲ್ಲಿ ತಮ್ಮ ವಿದ್ಯುತ್ ಪ್ರತಿರೋಧವನ್ನು ಸಂಪೂರ್ಣ ವಾಗಿ ಕಳಕೊಂಡು, ಅತಿವಾಹಕತ್ವ ಗುಣ ವನ್ನು ಹೊಂದುವ ವಿದ್ಯಮಾನ. ೧೯೧೧ರಲ್ಲಿ ಡಚ್ ಭೌತ ವಿಜ್ಞಾನಿ ಕ್ಯಾಮರ್ಲಿಂಗ್ ಓನ್ನೆಸ್ (೧೮೫೩–೧೯೨೬) ಅವರಿಂದ ಆವಿಷ್ಕರಿಸಲ್ಪಟ್ಟ ಈ ವಿದ್ಯಮಾನಕ್ಕೆ ಸ್ಪಷ್ಟ ಸೈದ್ಧಾಂತಿಕ ವಿ ವ ರ ಣೆ ಲಭ್ಯವಾದದ್ದು ಬಾರ್ಡೀನ್ ಅವರಿಂದ.

ಟ್ರಾನ್ಸಿಸ್ಟರ್ ಉಪಜ್ಞೆಗೊಂಡು ಐವತ್ತು ವರ್ಷಗಳಷ್ಟೇ ಕಳೆದಿವೆ. ಆದರೆ ಈ ಕಿರು ಅವಧಿಯಲ್ಲಾದ ತಂತ್ರವಿದ್ಯೆಯ ಅಭಿವರ್ಧನೆ ಯಲ್ಲಿ ಟ್ರಾನ್ಸಿಸ್ಟರ್ ವಹಿಸಿರುವ ಪಾತ್ರ ಮಹತ್ತರವಾದದ್ದು. ದೈನಂದಿನ ಜೀವನದ ಅವಿಭಾಜ್ಯ ಅಂಗವೋ ಎನ್ನುವಂತೆ ಇಂದು ನಾವು ಬಳಸುತ್ತಿರುವ ಹತ್ತು ಹಲವು ಉಪಕರಣಗಳಲ್ಲಿ ಬಗೆ ಬಗೆಯ ಟ್ರಾನ್ಸಿಸ್ಟರು ಗಳಿವೆ. 'ವಿದ್ಯುಚ್ಛಕ್ತಿಯಲ್ಲಿ ಕನಿಷ್ಠ ವ್ಯಯ ಮತ್ತು ಕಾರ್ಯದಲ್ಲಿ ಗರಿಷ್ಠ ದಕ್ಷತೆ'— ಇದು ನಮ್ಮ ಇಂದಿನ ತಂತ್ರವಿದ್ಯೆಯ ಗುರಿ. ಇದಕ್ಕೆ ಟ್ರಾನ್ಸಿಸ್ಟರ್ ಒಂದು ಉದಾಹರಣೆ.

೧೯೪೮ರಲ್ಲಿ ಸಿಗರೇಟ್ ಪೆಟ್ಟಿಗೆಯಷ್ಟಿದ್ದ ಟ್ರಾನ್ಸಿಸ್ಟರಿನ ಗಾತ್ರ, ನಿರಂತರ ಸಂಶೋಧನೆ ಗಳ ಫಲವಾಗಿ ಕುಗ್ಗುತ್ತ ಬಂದಿದೆ. ೧೯೬೦ರ ಸುಮಾರಿಗೆ ವಿದ್ಯುನ್ಮಂಡಲದಲ್ಲಿ ಹಲವು ಟ್ರಾನ್ಸಿಸ್ಟರುಗಳನ್ನು ಉಪಯೋಗಿಸುವ ಬದ ಲಾಗಿ, ಒಂದೆರಡು ಸೆಂ.ಮೀ. ಉದ್ದಗಲದ ಸಿಲಿಕಾನ್ ತುಂಡಿನ ಮೇಲೆ ಇವೆಲ್ಲವನ್ನೂ ಕೊರೆದು ನಿರ್ಮಿಸುವ ನೂತನ ತಂತ್ರವಿದ್ಯೆ ಆಗಮಿಸಿತು. ಸಾವಿರಾರು ಟ್ರಾನ್ಸಿಸ್ಟರ್, ಡಯೋಡುಗಳನ್ನು ಹೊಂದಿರುವ ಈ ಚಿಕ್ಕ ಉಪಕರಣವೇ 'ಚಿಪ್' ಮತ್ತು ಚಿಪ್ ಗಳಲ್ಲಿರುವ ವಿದ್ಯುನ್ಮಂಡಲಕ್ಕೆ ಇಂಟಿಗ್ರೇ- ಟೆಡ್ ಸರ್ಕ್ಯೂಟ್ (ಸಮಾಕಲಿತ ಮಂಡಲ) ಎಂದು ಹೆಸರು.

ನಾವು ೨೧ನೇ ಶತಮಾನದ ಹೊಸ್ತಿಲಲ್ಲಿ ದ್ದೇವೆ. ಮುಂದಿನ ಶತಮಾನ ಪ್ರಾಯಶಃ ಕಂಪ್ಯೂಟರ್ ಅಥವಾ ಗಣಕ ಯಂತ್ರಗಳದು ೨೦ನೇ ಶತಮಾನದ ಪ್ರಾರಂಭದ ದಿನಗಳಲ್ಲಿ

ನಿರ್ವಾತ ನಳಿಗೆಗಳನ್ನು ಬಳಸಿಕೊಂಡು ಗಣಕಗಳನ್ನು ನಿರ್ಮಿಸಲಾಯಿತು. ಅಂದಿನ ನಿರ್ವಾತ ನಳಿಗೆಗಳದು ಹೇಗೋ—ಕಂಪ್ಯೂಟರ್‌ಗಳದೂ ಹಾಗೆಯೇ—ಭೂಮಗಾತ್ರವಾಗಿತ್ತು. ಇಂದು ಅವೆಲ್ಲವೂ ಪ್ರದರ್ಶನದ ವಸ್ತುಗಳಾಗಿವೆ. ಇಂದಿನ ಅತ್ಯಾಧುನಿಕ ಗಣಕಗಳದು ಕಿರುಗಾತ್ರ. ಕಿಸೆಯಲ್ಲಿ ಒಯ್ಯಬಲ್ಲಂಥವು ಕೂಡ ಬಂದಿವೆ. ಇವುಗಳ ಸಾಮರ್ಥ್ಯ, ಕಾರ್ಯವ್ಯಾಪ್ತಿ ನಮ್ಮಲ್ಲಿ ಬೆರಗು ಹುಟ್ಟಿಸುತ್ತವೆ.

ಗಣಕದ 'ಮೆದುಳಿಗೆ' ವೈಜ್ಞಾನಿಕ ಪರಿಭಾಷೆಯಲ್ಲಿ 'ಮೈಕ್ರೊ ಪ್ರೋಸೆಸರ್' (ಸೂಕ್ಷ್ಮ ಪ್ರಕ್ರಿಯಾಕಾರಿ) ಎಂದು ಹೆಸರು. ಇದರಲ್ಲಿರಬಹುದಾದ ಟ್ರಾನ್ಸಿಸ್ಟರುಗಳ ಸಂಖ್ಯೆ ಎಷ್ಟು ಗೊತ್ತೆ?—ಕೇವಲ ಕೆಲವು ಕೋಟಿಗಳು. ಇಂದು ಹೆಚ್ಚಿನ ಗಣಕಗಳಲ್ಲಿ ಇರುವ 'ಪೆಂಟಿಯಮ್' ಎಂಬ ಮೈಕ್ರೋಪ್ರೋಸೆಸರ್‌ನ ಎರಡು ಸೆಂ.ಮೀ. ಉದ್ದಗಲದಲ್ಲಿ ಹತ್ತು ಲಕ್ಷಕ್ಕೂ ಮಿಕ್ಕಿ ಟ್ರಾನ್ಸಿಸ್ಟರುಗಳಿವೆ.

ಟ್ರಾನ್ಸಿಸ್ಟರನ್ನು ಉಪಜ್ಞಿಸಿದ ದಿನಗಳಲ್ಲಿ ಬಾರ್ಡಿನ್ ಹೇಳುತ್ತಿದ್ದರಂತೆ "ಈ ಉಪಕರಣ ಜನಜೀವನದ ಅವಿಭಾಜ್ಯ ಅಂಗವಾಗುವ ದಿನಗಳು ದೂರವಿಲ್ಲ" ನಿಜ, ಇದಕ್ಕೆ ವರ್ತಮಾನದ ಜನಜೀವನಕ್ಕಿಂತ ಬೇರೆ ನಿದರ್ಶನ ಬೇಕಾಗದು.



ಲಾಭಕ್ಕಿಂತ ಕರ್ತವ್ಯ ಮುಖ್ಯ. ಜಯಕ್ಕಿಂತ ಸಾಧನೆ ಮುಖ್ಯ. ಫಲಕ್ಕಿಂತ ಪ್ರಯತ್ನ ಮುಖ್ಯ. ಮಾತಿಗಿಂತ ಕೃತಿ ಮುಖ್ಯ.

—ವೇದ

ಆಹಾ! ಆನೆ ಕ್ಯಾಂಪಿನ ಹುರುಳಿ ಕಾಳು....

ಬಿ. ಆರ್. ಜೋಯಪ್ಪ
ಶಿಕ್ಷಕ, ಮದೆಮಹೇಶ್ವರ ಪ್ರೌಢಶಾಲೆ
ಮದೆಗ್ರಾಮ ಮತ್ತು ಅಂಚೆ
ಮಡಿಕೇರಿ ತಾಲ್ಲೂಕು-೫೭೧ ೨೦೧

ಆನೆ ಕ್ಯಾಂಪಿನ ಹುರುಳಿ ಕಾಳಿನ ಮಜ, ಹುರುಳಿ ಸಾರಿನ ವಜನ್, ಕಾಡಗಲ ಪಸರಿಸಿದ್ದ ನಲ್ಮೆಯ ಬಿಸುಪು ಎಲ್ಲಿ ಹೋದುವು ಇಂದು? ನಡೆದಷ್ಟೂ ಮುಗಿಯುದು ಇಂದಿನ ಅವಿಶ್ವಾಸದ ಬೆಂಗಾಡು.

ಸುಮಾರು ಇಪ್ಪತ್ತು–ಇಪ್ಪತ್ತೈದು ವರ್ಷಗಳ ಹಿಂದಿನ ಮಾತು. ಕೊಡಗಿನ ತಿತಿಮತಿ ಸಮೀಪದ ಮಡೆನೂರು ಮತ್ತು ಈಚೂರು ಎಂಬಲ್ಲಿ ಆನೆ ಪಳಗಿಸುತ್ತಿದ್ದರು. ಆ ಸುತ್ತಲಿನ ನಿವಾಸಿಗಳು ಎಲ್ಲೆಂದರಲ್ಲಿ ದನ ಮೇಯಿಸಲು ಸಾಕಷ್ಟು ಸ್ಥಳಗಳಿದ್ದುವು. ಒಬ್ಬೊಬ್ಬರಲ್ಲಿ ಐವತ್ತೋ ನೂರೋ ರಾಸುಗಳು. ದನ ಸಾಕುವ ಉದ್ದೇಶ ಲೋಡುಗಟ್ಟಲೆ ಗೊಬ್ಬರ ಮಾರಲು. ಆಗ ಒಂದು ಲಾರಿ ಲೋಡಿನ ಬೆಲೆ ೧೦೦ ರೂಪಾಯಿ. ಹೆಚ್ಚೆಂದರೆ ೧೫೦ ರೂಪಾಯಿ! ಆದರೆ ಇಂದು? ಅಂಥದ್ದೇ ಗೊಬ್ಬರಕ್ಕೆ ನಾಲ್ಕು ಸಾವಿರ ರೂಪಾಯಿಗಳು! ಅದಿರಲಿ, ಅಂದು ದಿನಗಳೆದಂತೆ ಸರಕಾರ ಆ ಸುತ್ತೆಲ್ಲಾ ತೇಗದ ಸಸಿಗಳನ್ನು ನೆಡಲಾರಂಭಿಸಿದರು. ಯಾವಾಗ ತೇಗದ ತೋಪು ನಿರ್ಮಾಣವಾಗತೊಡಗಿತೋ ಹುಲ್ಲು ನಾಶವಾಯಿತು. ಅಷ್ಟೇ ಅಲ್ಲ ಆ ತೇಗದ ತೋಪಿನತ್ತ ದನಕರುಗಳು ಹೋಗುವಂತಿಲ್ಲ. ಸುಮಾರು ಏಳೆಂಟು ಕಿ.ಮೀ. ದೂರದ ಕಾಡಿನೆಡೆಗೆ ಮೇಯಲು ಅಟ್ಟಿಕೊಂಡು ಹೋಗಬೇಕಿತ್ತು. ಒಂದುವೇಳೆ ಹಾಗೆ ಮಾಡಿಲ್ಲವೆಂದರೆ ಅಕಸ್ಮಾತ್ ದನಗಳು ತೇಗದ ತೋಪಿನತ್ತ ನುಗ್ಗಿದರೆ ಗಾರ್ಡ್‌ಗಳು ದನಗಳನ್ನು "ಅರೆಸ್ಟ್" ಮಾಡಿಕೊಂಡು ದೊಡ್ಡಿಗೆ ಹಾಕಿಬಿಡುತ್ತಿದ್ದರು. ದಂಡ ಕಟ್ಟಿ ಬಿಡಿಸಿಕೊಳ್ಳಬೇಕಿತ್ತು. ದಂಡ ಕಟ್ಟಲ್ಲವೋ ಹರಾಜು ಹಾಕಲಾಗುತಿತ್ತು.

ನಮಗೂ ಹತ್ತಾರು ರಾಸುಗಳಿದ್ದುವು. ನಾವೂ ಉಳಿದವರ ಹಾಗೆ ಏಳೆಂಟು ಕಿ.ಮೀ. ದೂರ ದನ ಅಟ್ಟಕೊಂಡು ಹೋಗುತ್ತಿದ್ದೆವು. 'ಅಯ್ಯೋ ನಿಮಗೇನು ಬೇರೆ ಕೆಲಸ ಇರಲಿಲ್ಲವಾ' ಅಂತ ನೀವು ಕೇಳಬಹುದು. ಅಷ್ಟು ದೂರದ ನಡಿಗೆಯನ್ನು ನೀವು ಯೋಚಿಸಿದರೆ ನಿಮಗೂ ಆಯಾಸವಾಗಬಹುದು. ಇಲ್ಲ, ಖಂಡಿತ ಆಯಾಸವಾಗಲಿಕ್ಕಿಲ್ಲ. ಏಕೆಂದರೆ ಅಂಥಾ ಮಜಾ ಇರುತ್ತಿತ್ತು. ಆಗ....

ಅಂಥಾ ಮಜಾ ಎಂಥದ್ದು ಗೊತ್ತಾ?

ಆನೆ ಪಳಗಿಸುವ ಕೇಂದ್ರ ಇದ್ದುದು ಅಲ್ಲೇ. ನಮಗಂತೂ ಪುಕ್ಕಟೆ ಮನೋರಂಜನೆ ಬೇರೆ! ಕಾಡಿನ ಮನೋರಂಜನೆಗೆ ಕಾಸುಕೊಡಬೇಕಿಲ್ಲ ತಾನೆ? ದನಗಳನ್ನು ಅತ್ತ ಅಟ್ಟಿ ಇತ್ತ ಆನೆಗಳ ಹಿಂದೆ ಮುಂದೆ ತಿರುಗಾಡುತ್ತಿದ್ದೆವು. ಅದಾಗತಾನೆ ಸೆರೆ ಹಿಡಿದ ಕಾಡಾನೆಯ ಆರ್ಭಟ, ಅದರ

ಪರದಾಟ, ಅದನ್ನು ಹಿಡಿತಕ್ಕೆ ತರುವಲ್ಲಿಯ ಶ್ರಮ, ಅದರ ಗಾಯಕ್ಕೆ ಮದ್ದು ಹಾಕುವ ರೀತಿ, ಅದಕ್ಕೆ ಆಹಾರ ಕೊಡುವ ಕ್ರಮ.... ನಿಂತು ನೋಡಿದಷ್ಟು ನಮಗೆ ಆಯಾಸ ವೆಂಬುದಾಗಲಿ, ಹೊತ್ತು ಹೋಗುವುದರ ಚಿಂತೆಯಾಗಲೀ ಇರುತ್ತಿರಲಿಲ್ಲ.

ಆನೆಯ ಸ್ನಾನ ನೋಡುವುದೊಂದು ಚೆಂದ. ಬಂಧನದ ಆನೆಯನ್ನು ಸ್ನಾನಕ್ಕೆ ಅಟ್ಟಿಕೊಂಡು ಹೋಗುತ್ತಿದ್ದರು. ಆಚೆ-ಈಚೆ ಸಾಕಿದ ಆನೆಗಳು, ನಡುವೆ ಬಂಧನದ ಈ ಹೊಸಾ ಆನೆ. ಥೇಟ್ ದಿಬ್ಬಣದ ನಡಿಗೆ ! ಅಷ್ಟು ದೂರದ ಕೆರೆಯಲ್ಲಿ ಒಂದೆರಡು ಗಂಟೆ ಗಳ ಕಾಲ ಸ್ನಾನ. ಎಷ್ಟಿದ್ದರೂ ಗಜ ಸ್ನಾನ ವಲ್ಲವೆ? ನಮಗೆಲ್ಲಾ ಒಂದೆರಡು ಚೆಂಬು ನೀರು ಸಾಕಾದೀತು. ನಮ್ಮದು ಸ್ನಾನದ ಶಾಸ್ತ್ರವಷ್ಟೇ! ಹಣಕ್ಕೆ ಕೊಂಡ ನೀರಿನಲ್ಲಿ ಎಷ್ಟೊತ್ತು ಸ್ನಾನ ಮಾಡಬಹುದಲ್ಲವೆ? ಹಾಂ! ಆ ಆನೆಯ ಸ್ನಾನದ ಬಳಿಕ ಆ ದಿಬ್ಬಣ ಮತ್ತೆ ಮನೆಯತ್ತ ಹೊರಡುತ್ತದೆ. ಅನಂತರ ಬೆಲ್ಲ, ತೆಂಗಿನಕಾಯಿ, ರಾಗಿಮುದ್ದೆ, ಹುರುಳಿಕಾಳಿನ ಮೃಷ್ಟಾನ್ನ ಭೋಜನ! ಅದನ್ನು ನೋಡುತ್ತಿದ್ದಂತೆ ನಮ್ಮ ಬಾಯಲ್ಲೂ ನೀರೂರುತ್ತಿತ್ತು, ಹೊಟ್ಟೆ ತಾಳ ಹಾಕುತ್ತಿತ್ತು. "ಪಾಪ, ಈ ಮಕ್ಕಳಿಗೇನಾ ದರೂ ಕೊಡೋಣ" ಅಂತ ಆನೆ ಸಾಕಿಗರು ನಮ್ಮತ್ತ ಕರುಣೆ ತೋರಿ ಆನೆಗೆಂದು ಬೇಯಿ ಸುತ್ತಿದ್ದ ಹುರುಳಿಕಾಳನ್ನು ತಿನ್ನಲು ನಮಗೆ ಕೊಡುತ್ತಿದ್ದರು. ಆನೆಯ ಊಟ ನಮ್ಮ ಹೊಟ್ಟೆಗೂ ಬೀಳುತ್ತಿತ್ತು. ಇದುತಾನೆ ಮಜಾ!

ನಾನು, ನನ್ನ ಅಕ್ಕ ಅಥವಾ ನಾನು ಮತ್ತು ನನ್ನ ಅಪ್ಪ-ದನ ಅಟ್ಟಿಕೊಂಡು ಹೋಗಿ ಬರುವವರು. ನಿತ್ಯವೂ ಈ ಕೆಲಸ ಮಕ್ಕಳಾದ ನಮಗೆ ಸಿಗುತ್ತಿರಲಿಲ್ಲ. ಯಾಕೆಂದರೆ ಶಾಲಾದಿನಗಳಾಗಿದ್ದುವು. ಭಾನುವಾರ ಮತ್ತು ಇನ್ನಿತರ ರಜಾದಿನ ಗಳಲ್ಲಿ ಈ ಪುಕ್ಕಟೆ ಮನೋರಂಜನೆ. ಉಳಿದೆಲ್ಲಾ ದಿನಗಳು ಅಪ್ಪನದೇ ಕೆಲಸ-ಕಾಡಾನೆಗಳ ಗೂಡು-ಆ ನಾಡು!

ಹೀಗೆ ನಮಗೂ ಆ ಆನೆ ಕ್ಯಾಂಪಿನ ವರಿಗೂ ಪರಿಚಯ. ನಾವಂತೂ ಆನೆಗೆ ಕಾಳು ಬೇಯಿಸುವ ಸಮಯಕ್ಕೆ ಸರಿಯಾಗಿ ಹಾಜರಾಗಿಬಿಡುತ್ತಿದ್ದೆವು. ಆಗ ಅವರು "ದಿನವೂ ಬರುವಾಗ ಒಂದು ಚೆಂಬು ತನ್ನಿ" ಅಂತ ಹೇಳುತ್ತಿದ್ದರು. ಅರೆ! ಚೆಂಬು ಯಾಕೆ? ಅದೇ ಆ ಹುರುಳಿ ಬೇಯಿಸಿದ್ಧ ನೀರು ಉಂಟಲ್ಲ, ಆ ನೀರು ತುಂಬಿಸಿ ಕೊಳ್ಳಲಿಕ್ಕೆ. ಆಹಾ! ಆ ಹುರುಳಿ ನೀರನ್ನು ತಂದು ಒಂದಷ್ಟು ಹುಳಿ, ಉಪ್ಪು, ಖಾರ ಒಗ್ಗರಣೆ ಮಾಡಿದರೆ ಗಡದ್ದಾಗಿ ಒಂದು ಊಟ ಮಾಡಬಹುದು. ಸಾರಿಗೇನೂ ಇಲ್ಲದ ಆ ದಿನಗಳಲ್ಲಿ ನಾವು ಕೆಲವು ದಿನ ಆ ನೀರನ್ನು ತಂದು 'ರಸಂ' ಮಾಡಿ ಉಂಡ ದಿನಗಳು ನಮ್ಮ ನೆನಪಿನ ಬೀರುವಿನಲ್ಲಿ ಶಾಶ್ವತ ಸ್ಥಾನ ಪಡೆದಿವೆ. ಅನಕ್ಷರರಾದ ಆ ಆನೆ ಕ್ಯಾಂಪಿನವರು ಯಾರೊ? ನಾವು ಯಾರೋ? ಆದರೆ ಆ ಪ್ರೀತಿ, ಆ ವಿಶ್ವಾಸ, ಆ ಸಂಬಂಧ ಎಷ್ಟೊಂದು ಸುಂದರ! ಆದರೆ ಇಂದು ನಾಗರಿಕತೆಯ ಸೋಗಿನಲ್ಲಿ ಮನುಷ್ಯ ಮನುಷ್ಯನ ನಡುವಿನ ವಿಶ್ವಾಸ ದೂರವಾಗಿ ಪ್ರೀತಿಯೇ ಇಲ್ಲವಾಗುತ್ತಿದೆ. ಇಂದು ನಡೆದಷ್ಟು ಉಳಿಯುತ್ತದೆ ಅವಿಶ್ವಾಸದ ಮರುಭೂಮಿ!

ವ್ಯಾಲೆಂಟಿನಳ ದೀರ್ಘ ನಿದ್ದೆ

ಜಿ. ವೈದೇಹಿ
೩೫೮, ನವಿಲು ಮುಖ್ಯ ರಸ್ತೆ
ಕುವೆಂಪುನಗರ
ಮೈಸೂರು–೫೭೦ ೦೨೩

ಸಾವಿನೊಡನೆ ಹೋರಾಡಿ ಗೆದ್ದವರುಂಟೇ? ತಂದೆತಾಯಿಯರ ಒಲುಮೆಗೆ ಮೀರಿದ ರಕ್ಷೆಯುಂಟೇ? ವೈದ್ಯಕೀಯ, ಪ್ರೀತಿ, ಸಂಕಲ್ಪ ಎಲ್ಲ ಬೆಸುಗೆಗೊಂಡು ಈ ವೈದ್ಯಕೀಯ ಪವಾಡ ಸಾಧ್ಯವಾಯಿತು.

ಎಮಿಲಿಯ ಕ್ಯಾಸಿಲೊಳ ದುಃಸ್ವಪ್ನವು ಅವಳ ಎರಡು ವರ್ಷದ ಮಗಳು ವ್ಯಾಲೆಂಟಿನ ಆಡಿದ ಮಾತುಗಳಿಂದ ಸಾಕಾರವಾಯಿತು. "ಅಮ್ಮ ನನಗೆ ಪಾಯಸ ಬೇಡ" ವ್ಯಾಲೆಂಟಿನಳಿಗೆ ಒಂದು ದಿನವೂ ಅನಾರೋಗ್ಯವಿರಲಿಲ್ಲ. ಅವಳ ಒರಟಾದ ಕಪ್ಪು ಕೂದಲು, ಕಪ್ಪಾದ ಹೊಳೆಯುವ ಕಣ್ಣುಗಳು ಮತ್ತು ದೃಢಕಾಯ ಇವೆಲ್ಲವನ್ನೂ ನೇಪಲ್ ದೇಶದ ತನ್ನ ತಂದೆ ತಾಯಿಯರಿಂದ ಅನುವಂಶೀಯವಾಗಿ ಪಡೆದಿದ್ದಳು.

ವ್ಯಾಲೆಂಟಿನಳ ಅಕ್ಕ ಬೆನೆಡಿಟ್ಟ ತಿಂದಾದ ಮೇಲೆ ಎಮಿಲಿಯ ಹೇಳಿದಳು. "ಸರಿ, ಇಬ್ಬರೂ ಆಟವಾಡಿಕೊಳ್ಳಿ". ಆದರೆ ಕೆಲವೇ ಕ್ಷಣಗಳಲ್ಲಿ ಬೆನೆಡಿಟ್ಟ ಹಿಂತಿರುಗಿ ಬಂದು ಹೇಳಿದಳು, "ಮಮ, ವ್ಯಾಲೆಂಟಿನ ವಾಂತಿ ಮಾಡಿಕೊಂಡಳು".

ಸಮಯ ೧೯೯೩ ರ ಜೂನ್ ತಿಂಗಳ ಪ್ರಾರಂಭದ ದಿನಗಳು. ಇಟಲಿಯ ಆಡ್ರಿಯಾಟಿಕ್ ತೀರದ ರೊಸೆಟೊ ಡೆಗ್ಲಿ ಅಬ್ರುಸಿ ಎಂಬ ಒಂದು ಚಿಕ್ಕ ಸ್ಥಳದಲ್ಲಿ ಈ ಕುಟುಂಬವು ವಾಸವಾಗಿತ್ತು. ಅಲ್ಲಿ ಎಮಿಲಿಯಳ ಪತಿ ಬೆಪ್ಪೆ ಕ್ಯಾಸಿಲೊ ಒಂದು ಬಟ್ಟೆ ಅಂಗಡಿ ಇಟ್ಟುಕೊಂಡಿದ್ದನು. ಆ ದಿನ ವ್ಯಾಪಾರದ ಮೇಲೆ ಬೇರೆ ಊರಿಗೆ ಹೋಗಿದ್ದನು. ಆ ಸಂಜೆ ಅವನು ಫೋನ್ ಮಾಡಿದಾಗ, "ಬಹುಶಃ ವ್ಯಾಲೆಂಟಿನಳಿಗೆ ನೆಗಡಿ ಬರಬಹುದು" ಎಂದು ಎಮಿಲಿಯ ಹೇಳಿದಳು.

ಮಾರನೆದಿನ ಆಹಾರವನ್ನು ವ್ಯಾಲೆಂಟಿನ ತಿರಸ್ಕರಿಸಿದಳು. ಅಲ್ಲದೆ ಮತ್ತೆ ವಾಂತಿ ಮಾಡಿಕೊಂಡಳು. ಎಮಿಲಿಯ ಅವಳನ್ನು ಒಬ್ಬ ಮಕ್ಕಳ ತಜ್ಞನ ಬಳಿಗೆ ಕರೆದುಕೊಂಡು ಹೋದಳು. ಶಾರೀರಕವಾಗಿ ಯಾವ ತೊಂದರೆಯೂ ಇಲ್ಲವೆಂದು ಕೇವಲ ಮಾನಸಿಕವೆಂದು ಆತನು ಹೇಳಿದನು. "ನಿಮ್ಮ ಭಯದಿಂದ ಅವಳು ಆ ರೀತಿ ವರ್ತಿಸುತ್ತಿದ್ದಾಳೆ" ಎಂದು ಒತ್ತಿ ಒತ್ತಿ ಹೇಳಿದನು.

೧೯೯೭ ರ ಜುಲೈ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಕ್ರಿಸ್ಟೋಫರ್ ಮ್ಯಾಥ್ಯೂಸ್ ಅವರ ಲೇಖನ.

ಸಾಮಾನ್ಯವಾಗಿ ಗುಲಾಬಿ ಬಣ್ಣಕ್ಕಿರುತ್ತಿದ್ದ ವ್ಯಾಲೆಂಟಿನಳ ಕೆನ್ನೆ ತತ್‌ಕ್ಷಣವೇ ಬಿಳಿಚಿಕೊಂಡಿತು. ಅವಳು ಮಲಗಿದಾಗ ಉಸಿರಾಡಲು ತೊಂದರೆಪಡುತ್ತಿದ್ದಳು. ಒಂದು ರಾತ್ರಿ ಅವಳು ಎಷ್ಟು ವಾಂತಿಮಾಡಿಕೊಂಡಳೆಂದರೆ ಅವಳಿಗೆ ಅಪಸ್ಮಾರ (ಎಳವು ವಾಯು) ಕಾಣಿಸಿಕೊಂಡಿತು. ಗಾಬರಿಗೊಂಡು ಎಮಿಲಿಯ ಒಂದು ಚಿಕಿತ್ಸಾಲಯಕ್ಕೆ ಕರೆದುಕೊಂಡು ಹೋದಳು. ಕರುಳಿನ ಸೋಂಕು ಆಗಿರುವುದೆಂದು ವೈದ್ಯರು ಪತ್ತೆ ಹಚ್ಚಿದರು.

ಮರುದಿನ ಬೆಳಿಗ್ಗೆ ವ್ಯಾಲೆಂಟಿನಳ ಚರ್ಮ ತಿಳಿಹಸಿರು ಬಣ್ಣಕ್ಕೆತಿರುಗಿತು. ಮುಖ ಕಣ್ಣು ಊದಿಕೊಂಡವು. ಅಲ್ಲಿನ ಸ್ಥಳೀಯ ಆಸ್ಪತ್ರೆಯ ವೈದ್ಯರು ಅವಳಿಗೆ ನಿಮೋನಿಯ ಆಗಿದೆಯೆಂದು ತಿಳಿಸಿದರು. ಹನಿ ಚುಚ್ಚುಮದ್ದಿನ ಮೂಲಕ ಗ್ಲೂಕೋಸ್ ಮತ್ತು ಜೀವನಿರೋಧಕಗಳನ್ನು ಕೊಡಲು ಪ್ರಾರಂಭಿಸಿದರು. ಆದರೆ ಅವಳ ದೇಹಸ್ಥಿತಿ ಸುಧಾರಿಸಲಿಲ್ಲ. ಇಡೀ ರಾತ್ರಿ ಅವಳ ಮಂಚದ ಪಕ್ಕದಲ್ಲೇ ನಿದ್ದೆಗೆಟ್ಟು ಕುಳಿತಿದ್ದ ಎಮಿಲಿಯುಗೆ ಅತೀವ ದುಃಖದಿಂದ ಕಿರುಚಿಕೊಳ್ಳುವಂತಾಯಿತು.

ಎರಡನೆಯ ರಾತ್ರಿ ವ್ಯಾಲೆಂಟಿನ ಅತಿ ವೇದನೆಯಿಂದ ಬಡಬಡಿಸಿದಳು. ನೋಡುತ್ತಿದ್ದಂತೆಯೇ ಶರೀರವೆಲ್ಲವೂ ಬಲೂನಿನಂತೆ ಊದಿಕೊಂಡು ಮೂರ್ಛೆ ತಪ್ಪಿ ಗಾಢ ನಿದ್ರೆಯಲ್ಲಿ ಮುಳುಗಿದಳು. ಅವಳ ದುಗ್ಧಗ್ರಂಥಿಗಳು ಅನುಮಾನಾಸ್ಪದ ರೀತಿಯಲ್ಲಿ ಊದಿಕೊಂಡಿರುವುದು ಸಿ.ಟಿ. ಸ್ಕ್ಯಾನ್ (ಕಂಪ್ಯೂಟರ್ ಮೂಲಕ ಅಂಗಾಂಗಗಳ ಅಡ್ಡಕೊಯ್ತ ದರ್ಶನ) ನಿಂದ ತಿಳಿಯಿತು.

ವಿಶಿಷ್ಟ ಚಿಕಿತ್ಸೆ: ಜೂನ್ ೨೩ ರಂದು ಅವಳನ್ನು ಮತ್ತು ಅವಳ ತಾಯಿಯನ್ನು ಹೆಲಿಕಾಪ್ಟರ್‌ನಲ್ಲಿ ಇಟಲಿಯ ಅತ್ಯುತ್ತಮ ವೈದ್ಯಕೀಯ ಸಂಸ್ಥೆಗಳಲ್ಲಿ ಒಂದಾದ ಬೊಲೊಗ್ನ ಸಂತ ಒರ್ಸೊಲ ಆಸ್ಪತ್ರೆಗೆ ವರ್ಗಾಯಿಸಲಾಯಿತು. ಕ್ಯಾನ್ಸರ್‌ಗಾಗಿ ಮಾಡಿದ ಪರೀಕ್ಷೆಗಳಲ್ಲಿ ನಕಾರಾತ್ಮಕ ಫಲಿತಾಂಶ ಬಂತು. ಆದರೆ ಹೃದಯದ ಪ್ರತಿಧ್ವನಿ ತರಂಗಗಳಿಂದಾಗಿ ತೆರೆಯ ಮೇಲೆ ಮೂಡಿಬಂದ ಚಿತ್ರವನ್ನು ಡಾ|| ಫರ್ಡಿನಾಂಡೊ ಪಿಕಿಯೊ ಮತ್ತು ಆತನ ತಂಡದವರು ನೋಡಿದ ತಕ್ಷಣವೇ ಕಾರಣವೇನೆಂದು ತಿಳಿಯಿತು.

"ನಿಮ್ಮ ಮಗಳು ಒಂದು ಅಪರೂಪದ ಹೃದಯರೋಗದಿಂದ ನರಳುತ್ತಿದ್ದಾಳೆ—ಹೃದಯಸ್ನಾಯುಗಳು ವಿಸ್ತೃತಗೊಳ್ಳುವಿಕೆ". ಪ್ರೊಫೆಸರ್ ಮಾರ್ಕೊ ಬಾಂಬಿಸಿನಿ ಎಮಿಲಿಯಗೆ ಹೇಳಿದರು.

"ವ್ಯಾಲೆಂಟಿನಳ ಹೃದಯ ಎಷ್ಟು ಉಬ್ಬಿದೆಯೆಂದರೆ ಅದು ರಕ್ತವನ್ನು ಪಂಪ್ ಮಾಡಲು ಕೇವಲ ಅರ್ಧದಷ್ಟು ಶಕ್ತಿಯನ್ನು ಮಾತ್ರ ಹೊಂದಿದೆ. ಇದರ ಪರಿಣಾಮವಾಗಿ ರಕ್ತ ಸಂಚಾರಕ್ಕೆ ಅತೀವ ಧಕ್ಕೆ ತಗುಲಿದೆ. ಅವಳ ಮೂತ್ರಕೋಶಗಳು, ಪಿತ್ತಕೋಶ ಮತ್ತು ಶ್ವಾಸಕೋಶಗಳ ಮೇಲೆ ಇದರ ಪ್ರಭಾವ ಬಿದ್ದಿದೆ. ಅವಳ ಮೆದುಳು ಆಕ್ಸಿಜನ್ ಅಭಾವದಿಂದ ನಿಷ್ಕ್ರಿಯವಾಗಿದೆ. ಅವಳ ಶರೀರದಲ್ಲಿ ದ್ರವವು ಸಂಗ್ರಹವಾಗುತ್ತಾ ಇರುವುದರಿಂದ ಊದಿಕೊಂಡಿದೆ" ಎಂದು ವೈದ್ಯರು ವಿವರಿಸಿದರು.

"ಈ ಸ್ಥಿತಿಯು ಸೋಂಕಿನಿಂದ ಉಂಟಾಗಿದ್ದರೆ ಔಷಧಗಳಿಂದ ಗುಣಪಡಿಸಬಹುದು.

ಇಲ್ಲವಾದಲ್ಲಿ ಬದಲೀ ಜೋಡಣೆಯೊಂದೇ ಮಾರ್ಗ." ವೈದ್ಯರು ತಮ್ಮ ತೀರ್ಮಾನವನ್ನು ತಿಳಿಸಿದರು.

ಹತ್ತು ದಿನಗಳ ಅನಂತರ ಅಂಗಾಂಶ ಚೂರಿನ ತಪಾಸಣೆಯ ಫಲಿತಾಂಶ ಬಂತು. ಯಾವ ಸೋಂಕೂ ಇರಲಿಲ್ಲ. "ವ್ಯಾಲೆಂಟಿನಳಿಗೆ ಹೊಸ ಹೃದಯದ ಅವಶ್ಯಕತೆ ಇದೆ" ಎಂದು ಪಿಕಿಯೊ ಮತ್ತು ಅವರ ತಂಡದವರು ಎಮಿಲಿಯಗೆ ತಿಳಿಸಿದರು.

ಸಂತ ಒರ್ಸೊಲ ಆಸ್ಪತ್ರೆಯಲ್ಲಿ ವ್ಯಾಲೆಂಟಿನಳಿಗೆ ಅವಳಲ್ಲಿ ಸಂಗ್ರಹವಾಗಿದ್ದ ನೀರನ್ನು ತೆಗೆಯಲು ಡೈಯುರೆಟಿಕ್ಸ್ ಔಷಧವನ್ನೂ ಮತ್ತು ಅವಳ ಹೃದಯವನ್ನು ಬಲಗೊಳಿಸಲು 'ಹೃದಯ ಶಕ್ತಿ ವರ್ಧಕವನ್ನು ಕೊಡಲಾಯಿತು. ಅವಳು ಎಷ್ಟು ಚೆನ್ನಾಗಿ ಪ್ರತಿಕ್ರಿಯಿಸಿದಳೆಂದರೆ ಜುಲೈ ಪ್ರಾರಂಭದ ವೇಳೆಗೆ ಮೊದಲಿನಂತೆಯೇ ಆದಳು. ವ್ಯಾಲೆಂಟಿನಳು ಆಸ್ಪತ್ರೆಯಲ್ಲಿ ತನ್ನ ಹಾಸಿಗೆಯ ಮೇಲೆ ಹಾಡುತ್ತಾ ನಗುತ್ತಾ ಸಂತೋಷದಿಂದ ಆಟವಾಡುತ್ತಿದ್ದುದನ್ನು ನೋಡಿ ಎಮಿಲಿಯ ಮತ್ತು ಪೆಪ್ಪಿಗೆ ತಡೆಯಲಾರದಷ್ಟು ಸಂತೋಷವಾಯಿತು. ಯಾವಾಗಲೂ ನಿಷ್ಠುರ ಕಾರ್ಯತತ್ಪರತೆಯ ತೆರೆಯ ಹಿಂದೆಯೇ ತನ್ನ ಭಾವನೆಗಳನ್ನು ಹಿಡಿದಿಡುತ್ತಿದ್ದ ಮುಖ್ಯ ನರ್ಸ್ ಮರಿಯ ಹೊಸಲಾನ್ಸೊನಿಯನ್ನು ಸೇರಿದಂತೆ ಆ ವಾರ್ಡಿನ ಹದಿನೈದು ನರ್ಸ್‌ಗಳೂ ವ್ಯಾಲೆಂಟಿನಳಿಂದ ಆಕರ್ಷಿತರಾಗಿದ್ದರು.

ಜುಲೈ ೯ ರ ವೇಳೆಗೆ ವ್ಯಾಲೆಂಟಿನ ಮನೆಗೆ ಹೋಗುವಷ್ಟು ಚೇತರಿಸಿಕೊಂಡಿದ್ದಳು. ಬದಲೀ ಜೋಡಣೆಗೆ ಮೊದಲು ಮಾಡುವ ಪರೀಕ್ಷೆಗಳಿಗಾಗಿ ಅವಳು ಕಾಯಬೇಕಿತ್ತು. ಆದರೆ ಸ್ವಲ್ಪ ದಿನಗಳ ನಂತರವೇ ಅವಳ ಸ್ಥಿತಿ ಕ್ರಮೇಣ ಕೆಡುತ್ತಾ ಬಂತು. ಮತ್ತೆ ಆಸ್ಪತ್ರೆಗೆ ದಾಖಲಾದಳು. ಅವಳ ಹೃದಯವು ದುರ್ಬಲವಾಗುತ್ತಾ ಇತ್ತು. ವ್ಯಾಲೆಂಟಿನ ಎಷ್ಟು ದಿನ ಬದುಕುಳಿಯಬಹುದೆಂದು ಕ್ಯಾಸಿಲೊ ದಂಪತಿಗಳು ವೈದ್ಯರನ್ನು ಕೇಳಿದರು. "ಬದಲೀ ಜೋಡಣೆಯಾಗದಿದ್ದರೆ ಬಹುಶಃ ಇನ್ನು ಆರು ತಿಂಗಳಲ್ಲಿ ಅವಳು ಸಾಯಬಹುದೆಂದು ವೈದ್ಯರು ಉತ್ತರಿಸಿದರು.

ಶಾಶ್ವತ ಬಾಯಾರಿಕೆ : ಮಕ್ಕಳ ಬದಲೀ ಜೋಡಣೆಗೆ ಹೃದಯಗಳು ಸಿಗುವುದೇ ದುರ್ಲಭ. ದುರದೃಷ್ಟಕರವೆಂದರೆ ವ್ಯಾಲೆಂಟಿನಳಿಗೆ 'ಯಾವುದಾದರೂ' ಹೃದಯವನ್ನು ಜೋಡಿಸುವಂತಿರಲಿಲ್ಲ. ಅದರ ಗಾತ್ರ ಒಂದೇ ರೀತಿಯದಾಗಿರಬೇಕಿತ್ತು ಮತ್ತು 'O' ಪಾಸಿಟಿವ್ ರಕ್ತದ ಗುಂಪಿನದಾಗಿರಬೇಕಿತ್ತು.

ಸುಮಾರು ನಾಲ್ಕು ವರ್ಷದ 'O' ಪಾಸಿಟಿವ್ ರಕ್ತದ ಗುಂಪಿಗೆ ಸೇರಿದ ಹೃದಯವು ಬೇಕಾಗಿದೆಯೆಂದು ಉತ್ತರ ಇಟಲಿ ಬದಲೀಜೋಡಣಾ ಜಾಲದ ಮೂಲಕ ಪಿಕಿಯೊ ಒಂದು ಅಂತರರಾಷ್ಟ್ರೀಯ ಬಿನ್ನಪವನ್ನು ಕೊಟ್ಟನು. ಈ ಜಾಲದ ಮುಖ್ಯ ಕೇಂದ್ರವಾದ ಮಿಲನ್ ಎಲ್ಲಾ ಆಸ್ಪತ್ರೆಗಳ ಹಾಗೂ ಉತ್ತರ ಇಟಲಿಯ ಸೋದರಿ ಸಂಸ್ಥೆಗಳ ಸಂಪರ್ಕವನ್ನು ಯಾವಾಗಲೂ ಇಟ್ಟುಕೊಂಡಿತ್ತು.

ಸಂತ ಒರ್ಸೂಲದ ಸಣ್ಣ ಕೊಠಡಿಯಲ್ಲಿ ಎಮಿಲಿಯ ಮತ್ತು ವ್ಯಾಲೆಂಟಿನಳ ಜೀವನವು ದಯನೀಯ ದಿನಚರಿಯಲ್ಲಿ ನಡೆಯತೊಡಗಿತು. ವ್ಯಾಲೆಂಟಿನಳ ದೇಹದಲ್ಲಿ ದ್ರವ ಸಂಗ್ರಹವಾಗುವುದನ್ನು ತಡೆಗಟ್ಟಲು

ಕುಡಿಯಲು ನೀರು ಕೊಡುವುದನ್ನು ಕಟ್ಟು ನಿಟ್ಟಾಗಿ ನಿಲ್ಲಿಸಿದರು. ಆಗಾಗ ಮಂಜುಗೆಡ್ಡೆಯನ್ನು ಚೀಪಬಹುದಿತ್ತು. ಆದರೆ ಶಾಶ್ವತ ನೀರಿನ ದಾಹ ಉಂಟುಮಾಡಿದ್ದರು.

"ಮನು ನಾನು ಕೈತೊಳೆಯಬೇಕು" "ಮನು ನಾನು ಮುಖ ತೊಳೆಯಬೇಕು" ನೀರನ್ನು ಪಡೆಯುವ ಎಲ್ಲಾ ಉಪಾಯಗಳನ್ನು ಅವಳು ಪ್ರಯತ್ನಿಸಿದಳು. ಒಂದು ಸಲ ಅವಳು ಪುಟ್ಟ ಸೀಸೆಯಲ್ಲಿರುವ ಪರಿಮಳ ದ್ರವ್ಯವನ್ನೇ ಕುಡಿಯಲು ಪ್ರಯತ್ನಿಸಿದ್ದಳು. ಒಬ್ಬ ದಪ್ಪನೆಯ ಹಸನ್ಮುಖಿ ದಾದಿ ಕ್ಯಾಟಿಯು ಬಿವಾಟಿ ಅವಳಿಗೆ ಕಥೆಗಳನ್ನು ಹೇಳುತ್ತಾ ಅವಳ ಬೊಂಬೆಗಳಿಗೆ ಟೀಪಾರ್ಟಿಯನ್ನು ಏರ್ಪಡಿಸುತ್ತಾ ಅವಳ ದಾಹವನ್ನು ಮರೆಸತೊಡಗಿದಳು.

ವ್ಯಾಲೆಂಟಿನಳ ಊದಿಕೊಂಡ ಹೃದಯವು ದಿನೇ ದಿನೇ ದುರ್ಬಲವಾಗುತ್ತಿತ್ತು. ಆದರೆ ಅವಳು ಅಕ್ಟೋಬರ್ ತಿಂಗಳನ್ನು ಕಳೆದಳು. ನವೆಂಬರ್ ಬಂತು. "ನಮಗೆ ಇನ್ನೆಷ್ಟು ದಿನ ಉಳಿದಿದೆ?" ಕ್ಯಾಸಿಲೊ ದಂಪತಿಗಳು ಕೇಳಿದರು. "ಬಹುಶಃ ಇನ್ನು ಮೂರು ತಿಂಗಳು" ಡಾ॥ ಪಿಕಿಯೊ ಉತ್ತರ ಇಟಲಿಯ ಬದಲೀ ಜೋಡಣಾ ಜಾಲಕ್ಕೆ ಆದ್ಯತೆಯ ಮೇರೆಗೆ ಇವಳ ಹೆಸರು ತುರ್ತು ಪಟ್ಟಿಯಲ್ಲಿ ಪ್ರಾರಂಭದಲ್ಲೇ ಇರಬೇಕೆಂದು ಮತೊಮ್ಮೆ ವಿನಂತಿಸಿಕೊಂಡನು.

ಡಿಸೆಂಬರ್ ಹಿಂದನೇ ತಾರೀಕು ಮಧ್ಯ ರಾತ್ರಿ ಬೆಪ್ಪೆ ತನ್ನ ಮಗಳನ್ನು ನೋಡುತ್ತಾ ಮಂಚದ ಪಕ್ಕದಲ್ಲಿ ನಿಂತಿದ್ದನು. ವ್ಯಾಲೆಂಟಿನ ಕಣ್ಣು ತೆರೆದು ಕೇವಲ ಕಣ್ಣಿನ ಬಿಳಿಯ ಭಾಗವೇ ಕಾಣುವಂತೆ ಗುಡ್ಡೆಗಳನ್ನು ತಿರುಗಿಸಿದಳು.

ಅದೇ ಕ್ಷಣದಲ್ಲಿ ಅವಳ ಮಂಚದ ಪಕ್ಕದಲ್ಲಿಟ್ಟಿದ್ದ ನಿಯಂತ್ರಕದಿಂದ ಬರುತಿದ್ದ 'ಬೀಪ್' ಶಬ್ದವೂ ನಿಂತುಹೋಯಿತು. ಬದಲಾಗಿ ಆ ಯಂತ್ರದಿಂದ ಒಂದೇ ಸಮನಾಗಿ ಕೀರಲು ಶಬ್ದ ಬರತೊಡಗಿತು. ಹೃದಯಘಾತ! ರಾತ್ರಿ ಕೆಲಸದ ನರ್ಸ್ ಸಾಮಾನ್ಯ ಎಚ್ಚರಿಕೆ ಗಂಟೆಯನ್ನು ಒತ್ತಿ ವೈದ್ಯರುಗಳನ್ನು ಕರೆದೊಡನೆ ಅವರು ಹಾಸಿಗೆ ಬಳಿ ಧಾವಿಸಿ ಬಂದರು.

ಆ ಹೊತ್ತಿಗೆ ಪುನಃಶ್ಚೇತನ ನೀಡುವ ಅರಿವಳಿಕೆ ತಜ್ಞೆ ಕ್ರಿಸ್ಟಿನ ಸಾಂಟೊರೆಲ್ಲಿ ಬಂದಳು–ವ್ಯಾಲೆಂಟಿನ ಉಸಿರಾಡುವುದನ್ನು ನಿಲ್ಲಿಸಿದ್ದಳು. ಅವಳ ಮುಖ ನೀಲಿಯಾಗಿತ್ತು. ನಿಯಂತ್ರಕದ ಪ್ರಕಾಶಮಾನವಾದ ಹಸಿರು ರೇಖೆ ಅಲ್ಲಾಡದೆ ಇತ್ತು. ಸಾಂಟೊರೆಲ್ಲಿ ವ್ಯಾಲೆಂಟಿನಳ ಬಟ್ಟೆಯನ್ನು ಹರಿದುಹಾಕಿ ತಕ್ಷಣವೇ ಹುಡುಗಿಯ ಪುಟ್ಟ ಎದೆಯನ್ನು ಗುದ್ದತೊಡಗಿದಳು.

"ವಿದ್ಯುತ್ ಉತ್ತೇಜಕ ಬೇಗ ತನ್ನಿ" ಅವಳು ಕೂಗಿಕೊಂಡಳು. ಒಬ್ಬ ನರ್ಸ್ ಕೊಟ್ಟ ಎರಡು ವಿದ್ಯುದಾಗ್ರ ಸಿಂಬಿಗಳನ್ನು ವ್ಯಾಲೆಂಟಿನಳ ಎದೆಯ ಮೇಲೆ ಒತ್ತಿದಳು. ಒಮ್ಮೆಲೆ ಸಿಡಿದು ಬಂದ ವಿದ್ಯುತ್ ಅವಳ ದೇಹವನ್ನು ಬೊಂಬೆಯಂತೆ ಅಲ್ಲಾಡಿಸಿತು. "ವ್ಯಾಲೆಂಟಿನ ಏಳು ಏಳು" ಸಾಂಟೊರೆಲ್ಲಿ ಕೂಗಿಕೊಂಡಳು.

ಮತ್ತೊಂದು ಅದುರು ಪೆಟ್ಟು ಪುಟ್ಟ ಹುಡುಗಿಯ ಕೃಶವಾದ ಶರೀರವನ್ನು ಮತ್ತೊಮ್ಮೆ ನಡುಗಿಸಿತು. ಮೂರನೆಯ ಬಾರಿ. ಆಗ 'ಬೀಪ್, ಬೀಪ್' ಶಬ್ಧದೊಡನೆ ನಿಯಂತ್ರಕವು ನಡೆಯತೊಡಗಿತು.

ವ್ಯಾಲೆಂಟಿನಳ ಹೃದಯ ಮತ್ತೆ ಬಡಿಯ ತೊಡಗಿತು.

ಅರ್ಧ ಗಂಟೆಯ ಅನಂತರ ಅವಳಿಗೆ ಮತ್ತೊಂದು ಹೃದಯಾಘಾತವಾಯಿತು. ಮತ್ತೆ ಡಾ|| ಸಾಂಟೊರೆಲ್ಲಿ ಅವಳನ್ನು ಬದುಕುಳಿಸಿದಳು. ರಾತ್ರಿ ಎರಡುಗಂಟೆಗೆ ಮತ್ತೆ ಅವಳ ಹೃದಯಬಡಿತ ನಿಂತು ಹೋಯಿತು. ಬೆಳಗಿನ ಜಾವ ನಾಲ್ಕು ಗಂಟೆಗೆ ಅವಳ ನಾಡಿ ಮಿಡಿತ ಸಾಮಾನ್ಯ ಸ್ಥಿತಿಗೆ ಬಂತು. ವೈದ್ಯೆಳು ತನ್ನ ಹಣೆಯ ಬೆವರನ್ನು ಒರೆಸಿಕೊಂಡಳು, ಆ ರಾತ್ರಿ ಬಹಳ ದೀರ್ಘವೆನಿಸಿತು. ಆಯಾಸದ ಮುಗುಳ್ನಗೆಯನ್ನು ಬೀರುತ್ತಾ ವೈದ್ಯೆಳು, "ಬಹಳ ಚೆನ್ನಾಗಿ ಪ್ರತಿಕ್ರಿಯಿಸಿದೆ ವ್ಯಾಲೆಂಟೆನ". ಎಂದಳು.

ಈ ರೀತಿ ಬದುಕುಳಿಸುವ ಹೋರಾಟ ಎಷ್ಟುದಿನ ಮುಂದುವರೆಯಬಹುದು? ಈಗ ವಾರಗಳಲ್ಲಿ ಕೇವಲ ದಿನಗಳನ್ನು ಎಣಿಸ ಬೇಕೆಂದು ಪಿಕಿಯೊ ಅಂದಾಜು ಮಾಡಿದನು. ಅವನು ಮತ್ತೆ ಬದಲೀ ಜೋಡಣಾ ಜಾಲಕ್ಕೆ ಅಂತಾರಾಷ್ಟ್ರೀಯ ತುರ್ತು ಬಿನ್ನಪವನ್ನು ಕಳುಹಿಸಿದನು.

ಸಂಸ್ಥೆಯ ಅನುಭವೀ ಅರಿವಳಿಕೆ ತಜ್ಞರಲ್ಲಿ ಒಬ್ಬನಾದ ಹಾಗೂ ತನ್ನ ಕಾರ್ಯಕ್ಷೇತ್ರದಲ್ಲಿ ಪ್ರಮುಖನಾದ ನೀಲಿ ಕಣ್ಣಿನ, ವಯಸ್ಸಿಗೆ ಮಿರಿ ನರೆತ ಕೂದಲಿನ ನಲವತ್ತು ವರ್ಷದ ಡಾ|| ಗೈಡೊ ಫ್ರಾಸ್ಕ ರೊಲಿಯನ್ನು ಆಸ್ಪತ್ರೆಯವರು ಮಕ್ಕಳ ಉಸಿರಾಟದ ತೀವ್ರ ಸಮಸ್ಯೆಗಳಿಗೆ ಕರೆಸು ತ್ತಿದ್ದರು. ಬೆಳಗಿನ ಒಂದು ಸಮಾವೇಶದಲ್ಲಿ, "ವ್ಯಾಲೆಂಟಿನಳ ಹೃದಯವು ಅವಳ ದೇಹದ ಇತರ ಕ್ರಿಯೆಗಳನ್ನು ನಡೆಸುವಷ್ಟು ಪ್ರಬಲ ವಾಗಿಲ್ಲ ಅಲ್ಲವೇ?" ಎಂದು ಅವನು ಪಿಕಿಯೊನನ್ನು ಕೇಳಿದನು. ಪಿಕಿಯೊ ಹೌದೆಂದು ತಲೆಯಾಡಿಸಿದನು.

"ಅವಳಿಗೆ ಹೃದಯ ಕೊಡುವ ದಾನಿಗಳು ಯಾರೂ ಇಲ್ಲ" ಫಾಸ್ಕರೂಲಿ ಮುಂದುವರೆ ಯುತ್ತಾ, "ಅವಳ ಹೃದಯವು ಹೊರಬಹು ದಾದಷ್ಟು ಮಾತ್ರ ಶಕ್ತಿ ಇರುವಂತೆ ನಾವು ಅವಳ ಶಕ್ತಿ ಅವಶ್ಯಕತೆಯನ್ನು ಕಡಿಮೆ ಮಾಡಬೇಕು" ಎಂದು ತನ್ನ ಯೋಜನೆಯ ಒಂದು ರೂಪುರೇಷೆಯನ್ನು ವಿವರಿಸಿದನು— ಸಾಮಾನ್ಯವಾಗಿ ಅರಿವಳಿಕೆ ತಜ್ಞರು ತಾತ್ಕಾಲಿಕವಾಗಿ ಅಂಗ ನಿರುಪಯೋಗಪಡಿಸಿ ರೋಗಿಯ ಶರೀರದ ಮುಖ್ಯ ಕ್ರಿಯೆ (ಉಸಿರಾಟಕ್ರಿಯೆ, ಜೀರ್ಣಕ್ರಿಯೆ, ವಿಸರ್ಜನ ಕ್ರಿಯೆ)ಗಳನ್ನು ನಿಧಾನಗೊಳಿಸಲು ಸಣ್ಣ ಪ್ರಮಾಣದಲ್ಲಿ ಉಪಯೋಗಿಸುವ ಒಂದು ಔಷಧ-ಕ್ಯೂರೇರ್ ಇದನ್ನು ಉಪಯೋಗಿಸಿ ವ್ಯಾಲೆಂಟಿನಳ ಎಲ್ಲ ಸ್ನಾಯುಗಳನ್ನು, ಹೃದಯವನ್ನು ರಕ್ಷಿಸಲು, ನಿಷ್ಕ್ರಿಯ ಗೊಳಿಸುವುದು. ಆವಳು ಉಸಿರಾಡಲಾರಳು. ಆದ್ದರಿಂದ ಕೃತಕ ಶ್ವಾಸಕೋಶವನ್ನು ಅಳವಡಿಸಬೇಕಾಗುತ್ತದೆ. ಶಾಂತಿಪ್ರದ ಔಷಧವನ್ನು ಕೊಟ್ಟು ಕೃತಕವಾಗಿ ನಿಯಂತ್ರಿತ ಗಾಢ ನಿದ್ರಾಸ್ಥಿತಿಯಲ್ಲಿಡ ಬೇಕು.

"ಅವಳು ಆ ರೀತಿ ಎಷ್ಟುದಿನ ಇರಬಲ್ಲಳು?" ಪಿಕಿಯೊ ಕೇಳಿದನು. "ಸುಮಾರು ಎರಡು ವಾರಗಳು" ಫ್ರಾಸ್ಕರೋಲಿ ಉತ್ತರವಿತ್ತನು.

ಅದೇ ದಿನವೇ ವೈದ್ಯರು ಮತ್ತು ನರ್ಸ್ ಗಳು ಗಂಭೀರ ಮುಖಮುದ್ರೆಯುಳ್ಳವರಾ ವ್ಯಾಲೆಂಟನಳ ಪುಟ್ಟ ಮಂಚದ ಸುತ್ತ ನಿಂತರು, ಪಿಕಿಯೊ ಹೇಳಿದನು

"ಡಾ|| ಫ್ರಾಸ್ಕರೋಲಿ ಹೇಳಿದಂತೆ ಮಾಡೋಣ"

"ಒಂದು ಕಿಲೊ ತೂಕಕ್ಕೆ ೦.೧ ಮಿಲಿ ಗ್ರಾಮ್‌ನಂತೆ ಕ್ಯೂರೇರ್ ಔಷಧವನ್ನು ಅವಳಮೇಲೆ ಪ್ರಾರಂಭಿಸೋಣ" ಫ್ರಾಸ್ಕರೋಲಿ ಹೇಳಿದನು. ಮೊದಲು ವೇಲಿಯಮ್ ಔಷಧಿಯನ್ನು ಅಭಿಧಮನಿಯ ಮೂಲಕ ಚುಚ್ಚಿದನು. ಕೆಲವೇ ಕ್ಷಣಗಳಲ್ಲಿ ಅವಳು ಗಾಢನಿದ್ರೆಯಲ್ಲಿ ಮುಳುಗಿದಳು. ಅನಂತರ ಒಂದು ಮಿಲಿಗ್ರಾಮ್ ಕ್ಯುರೇರ್ ಚುಚ್ಚು ಮದ್ದನ್ನು ಕೊಟ್ಟನು.

ಕೆಲವೇ ಕ್ಷಣಗಳಲ್ಲಿ ವ್ಯಾಲೆಂಟಿನ ಉಸಿರಾಟ ನಿಲ್ಲಿಸಿದಳು. ಮುಖ್ಯ ನರ್ಸ್ ಲಾನ್ಸೊನಿಯ ಸಹಾಯದಿಂದ ಫ್ರಾಸ್ಕರೋಲಿ ವ್ಯಾಲೆಂಟಿನ ಮೂಗಿನ ಮೂಲಕ ಒಂದು ತೆಳುವಾದ ನಳಿಗೆಯನ್ನು ಶ್ವಾಸಕೋಶದವರೆಗೆ ಅಳವಡಿಸಿದನು. ನಳಿಗೆಯ ಮತ್ತೊಂದು ತುದಿಯನ್ನು ಕೃತಕ ಶ್ವಾಸಕೋಶಕ್ಕೆ ಬಂಧಿಸಲಾಯಿತು. ವ್ಯಾಲೆಂಟಿನಳ ಕೃಶವಾದ ಎದೆಯಲ್ಲಿ ಏರಿಳಿತ ಪ್ರಾರಂಭವಾಯಿತು. ತಕ್ಷಣವೇ ಅವಳ ಶರೀರವು ವಿದ್ಯುತ್ ತಂತಿಗಳು ಮತ್ತು ನಳಿಗೆಗಳಿಂದ ಆವರಿಸಲ್ಪಟ್ಟಿತು. ಅವಳ ಹೃದಯ, ಶ್ವಾಸಕೋಶಗಳು, ಮೂತ್ರ ಕೋಶಗಳು ಮತ್ತು ರಕ್ತಪರಿಚಲನೆ ಸತತ ನಿಯಂತ್ರಿಸಲ್ಪಟ್ಟವು. ಜೀವನಿರೋಧಕಗಳು, ಶಾಂತಿಪ್ರದ ಔಷಧಗಳು, ಪೋಷಕಾಂಶ ಮತ್ತು ೧.೨ ಮಿಲಿಗ್ರಾಂ ಕ್ಯುರೇರನ್ನು ಪ್ರತಿ ೨೪ ಗಂಟೆಗೆ ಒಂಭತ್ತು ವಿದ್ಯುತ್ ಪಂಪ್‌ಗಳು—ಸ್ವಯಂ ಚಾಲಿತ ಸಿರಿಂಜ್‌ಗಳು ವ್ಯಾಲೆಂಟಿನಳ ದೇಹಕ್ಕೆ ಸರಬರಾಜು ಮಾಡುತ್ತಿದ್ದವು. ವ್ಯಾಲೆಂಟಿನ ಸಾವು ಬದುಕಿನ ತೂಗುಯ್ಯಾಲೆಯಲ್ಲಿದ್ದಳು. ವೈದ್ಯರು ಏನನ್ನೂ ಊಹಿಸಲಾಗದ ಗಡಿಯಲ್ಲಿದ್ದರು. ವ್ಯಾಲೆಂಟಿನ ದೀರ್ಘ ನಿದ್ದೆಯಲ್ಲಿದ್ದಳು. ಅವಳು ಅದರಿಂದ ಹೊರಬಂದಮೇಲೆ ಹೇಗಿರಬಹುದು?

ಹೃದಯಕ್ಕಾಗಿ ಶೋಧ ನಡೆಯುತ್ತಲೇ ಇತ್ತು. ೩ ವಾರಗಳ ಅನಂತರ ವ್ಯಾಲೆಂಟಿನ ಮೂರನೇ ವರ್ಷದ ಹುಟ್ಟಿದ ದಿನವನ್ನು ತಲುಪಿದಳು. ವೈದ್ಯರಿಗೆ ಮುಂದುವರಿಯಲು ಯಾವ ದಾರಿಯೂ ಇರಲಿಲ್ಲ. ಬೆಪ್ಪೆ ಮತ್ತು ಎಮಿಲಿಯಗೆ ನಿರಾಸೆಯಾಗ ತೊಡಗಿತು. ರಾತ್ರಿ ಹಗಲೂ ಎಮಿಲಿಯ, ಮಗಳ ಹಾಸಿಗೆಯ ಬಳಿಯೇ ಸುಳಿದಾಡುತ್ತಿದ್ದಳು. ಮೊದಲು ಕೆಲವು ದಿನಗಳು ಅವಳು ತನ್ನ ಕೈ ಬೆರಳನ್ನು ವ್ಯಾಲೆಂಟಿನಳ ಕೈಯಲ್ಲಿಟ್ಟರೆ ಅವಳ ಪುಟ್ಟ ಮುಷ್ಠಿಯು ಹಿಡಿಯುತ್ತಿತ್ತು. ಆದರೆ ಕ್ರಮೇಣವಾಗಿ ಅವಳ ನಿದ್ದೆಯು ಗಾಢವಾದಂತೆ ಯಾವ ಪ್ರಚೋದನೆಗೂ ಅವಳು ಪ್ರತಿಕ್ರಿಯಿಸಲಿಲ್ಲ.

ಆದರೆ ತನ್ನ ಮಗಳು ಎಷ್ಟೇ ದೂರದ ಪ್ರಪಂಚದಲ್ಲಿದ್ದರೂ ಮಾತೃಪ್ರೇಮದ ಅಂಚಿನಿಂದಾಚೆಗೆ ಇರುವಳೆಂದು ಎಮಿಲಿಯಗೆ ಅನಿಸಲಿಲ್ಲ. ಅವಳ ಪುಟ್ಟ ಕೈಯನ್ನು ಮೃದುವಾಗಿ ತಟ್ಟುತ್ತಾ ಅವಳಿಗೆ ಇಷ್ಟವಾದ ಯಕ್ಷಿಣಿ ಕಥೆಗಳನ್ನು ಹೇಳುತ್ತಿದ್ದಳು. ಅವಳಿಗೆ ಇಷ್ಟವಾದ ಹಾಡನ್ನು ಮೆಲುದನಿಯಲ್ಲಿ ಹೇಳುತ್ತಿದ್ದಳು.

ವ್ಯಾಲೆಂಟಿನಳಿಗೆ ಎಡಬಿಡದ ಆರೈಕೆಯು ಅಗತ್ಯವಿತ್ತು. ಹಾಸಿಗೆ ಹುಣ್ಣನ್ನು ತಪ್ಪಿಸಲು ಪ್ರತಿ ಅರ್ಧ ಗಂಟೆಗೂ ಅವಳನ್ನು ಮಗ್ಗುಲು ಮಾಡಿ ಎಣ್ಣೆಯನ್ನು ಸವರಬೇಕಾಗಿತ್ತು. ದಿನ ದಿನಕ್ಕೂ ಅವಳು ತೆಳ್ಳಗಾಗುತ್ತಿದ್ದಳು.

ಮತ್ತು ಅವಳ ಸ್ನಾಯುಗಳು ಕರಗುತ್ತಿದ್ದವು. ಅವಳು ಮೊದಲಸಲ ಆಸ್ಪತ್ರೆಗೆ ಪ್ರವೇಶಿಸಿದಾಗ ೧೨ ಕಿಲೊಗ್ರಾಂ ಇದ್ದ ಅವಳ ತೂಕ ೯.೫ ಕಿ.ಗ್ರಾಂ.ಗೆ ಇಳಿಯಿತು. ಅವಳ ಅಸ್ಥಿಪಂಜರದ ಮೂಲಕ ಹೃದಯವು ಬಡಿಯುತ್ತಿರುವುದನ್ನು ಕಾಣಬಹುದಾದಷ್ಟು ಅವಳು ಕೃಶಳಾಗಿದ್ದಳು.

ಕ್ರಿಸ್‌ಮಸ್‌ಗಾಗಿ ಅವಳ ತಾಯಿತಂದೆಯರು ಒಂದು ಪುಟ್ಟ ತೊಟ್ಟಿಲನ್ನು ಮಾಡಿ ಸಣ್ಣ ವಿದ್ಯುದಾಗ್ರಗಳನ್ನು ಎದೆಯಲ್ಲಿ ಹೊಂದಿದ ಪುಟ್ಟ ಜೀಸಸ್‌ನನ್ನು ಅದರಲ್ಲಿ ಮಲಗಿಸಿದರು. ಎಮಿಲಿಯ ವ್ಯಾಲೆಂಟಿನಳ ಕಿವಿಯಲ್ಲಿ ಉಸುರಿದಳು, "ಕ್ರಿಸ್‌ಮಸ್ ಶುಭಾಶಯಗಳು ವ್ಯಾಲೆಂಟಿನ".

ಹೊಸ ವರ್ಷವು ಬಂತು ಮತ್ತು ಹೋಯಿತು. ವ್ಯಾಲೆಂಟಿನಳು ನಿದ್ರೆಯಲ್ಲಿದ್ದು ಒಂದು ತಿಂಗಳಿಗಿಂತ ಅಧಿಕವಾಗಿತ್ತು.

ಜನವರಿ ೨೬ ರಂದು ೫೭೦ ಕಿಲೋಮೀಟರಿನಾಚೆ ವಿಯನ್ನಾ ಬಳಿ ಕಾರಿನ ಅಪಘಾತದಲ್ಲಿ ಒಬ್ಬ ನಾಲ್ಕು ವರ್ಷದ ಹುಡುಗನು ಮೆದುಳಿನ ಸಾವಿಗೆ ಒಳಗಾದನೆಂದು ಪ್ರಮಾಣೀಕರಿಸಲ್ಪಟ್ಟನು. ಅವನ ಸ್ಥಿತಿಯು ಅಪರಾವರ್ತಿತವೆಂದು ಪತ್ತೆ ಮಾಡಿ ಅವನು ಸತ್ತಿದ್ದಾನೆಂದು ದೃಢೀಕರಿಸಿದರು.

ಆ ಹುಡುಗನ ತಂದೆಯು ಆಘಾತ ಸ್ಥಿತಿಯಲ್ಲಿದ್ದರೂ ಹುಡುಗನ ಅಂಗಾಂಗಗಳನ್ನು ಬದಲೀ ಜೋಡಣೆಗೆ ಉಪಯೋಗಿಸಿಕೊಳ್ಳಬಹುದೆಂದು ಒಪ್ಪಿಗೆ ಕೊಟ್ಟನು. ನಾಲ್ಕು ವರ್ಷದ 'O' ಪಾಸಿಟಿವ್ ಗುಂಪಿನ ರಕ್ತದ ಹೃದಯ ವಿಯನ್ನಾದಲ್ಲಿ ಸಿಗುವುದೆಂದು ಅಂತಾರಾಷ್ಟ್ರೀಯ ಬದಲೀ ಜೋಡಣಾ ಜಾಲವು ಫ್ಯಾಕ್ಸ್ ಸಂದೇಶವನ್ನು ಕಳುಹಿಸಿತು.

ಮಧ್ಯರಾತ್ರಿಯ ಸ್ವಲ್ಪ ಹೊತ್ತಿನ ಅನಂತರ ನಾಲ್ಕು ಜನಗಳ ವೈದ್ಯಕೀಯ ತಂಡವು ಒಂದು ಚಿಕ್ಕ ಶೀತಲ ಪೆಟ್ಟಿಗೆಯೊಂದಿಗೆ ಎರಡು ಎಂಜಿನ್‌ಗಳುಳ್ಳ ಒಂದು ಪುಟ್ಟ ವಿಮಾನವನ್ನು ಬೊಲೊಗ್ನದ ಬೋರ್ಗೊ ಸಾನಿಗೇಲ್ ನಿಲ್ದಾಣದಲ್ಲಿ ಹತ್ತಿದರು. ಒಂದು ಗಂಟೆಯ ಅನಂತರ ಅವರು ಆಸ್ಟ್ರಿಯದ ರಾಜಧಾನಿಯಲ್ಲಿದ್ದರು. ಜನವರಿ ೨೭ರ ಬೆಳಿಗ್ಗೆ ಏಳು ಗಂಟೆಗೆ ಡಾ||ಫ್ರಾಂಕೊ ಡೋಸ ಒಂದು ವಿದ್ಯುತ್ ಗರಗಸದಿಂದ ದಾನಿಯ ಎದೆಯನ್ನು ಕೊಯ್ದನು. ಇನ್ನೂ ಬಡಿಯುತ್ತಿದ್ದ ಹೃದಯವನ್ನು ತೆರೆದಿಟ್ಟನು. ಅಂತಹ ಸಂದರ್ಭ ಬಂದಾಗಲೆಲ್ಲಾ ಅವನಿಗೆ ಅತೀವ ವೇದನೆಯಾಗುತ್ತಿತ್ತು. ಅವನಿಗೆ ಕಂಡಂತೆ ಅವಕ್ಕೆ ಯಾವ ಧಕ್ಕೆಯೂ ಆಗಿರಲಿಲ್ಲ ಮತ್ತು ರೋಗಮುಕ್ತವಾಗಿತ್ತು. ಅವನು ಹೃದಯವನ್ನು ತೆಗೆದು ಅದನ್ನು ನಿಷ್ಕ್ರಿಯಗೊಳಿಸಲು ಒಂದು ದ್ರವವಿರುವ ಜಾಡಿಯಲ್ಲಿಟ್ಟನು.

ಅತ್ತ, ಸಂತ ಒರ್ಸೋಲದಲ್ಲಿ ವ್ಯಾಲೆಂಟಿನಳನ್ನು ಶಸ್ತ್ರಕ್ರಿಯೆಗೆ ಸಜ್ಜುಗೊಳಿಸುತ್ತಿದ್ದರು.

ಅನಂದಾತಿಶಯದ ಪರಿಹಾರ: ಅವಳಿಗೆ ಒಂದು ಹೃದಯ–ಶ್ವಾಸಕೋಶ ಯಂತ್ರವನ್ನು ಜೋಡಿಸಿದ್ದರು. ದೇಹದ ನಿರಾಕರಣ ಪ್ರತಿಕ್ರಿಯಾ ಸಾಮರ್ಥ್ಯವನ್ನು ಕಡಿಮೆಗೊಳಿಸುವ ಔಷಧವಾದ ಸೈಕ್ಲೊಸ್ಪೊರಿನ್ ಚುಚ್ಚಲಾಯಿತು. ಬೆಳಿಗ್ಗೆ ೧೧–೧೫ಕ್ಕೆ ಅವಳನ್ನು ಶಸ್ತ್ರಕ್ರಿಯಾ ಕೊಠಡಿಯೊಳಗೆ ಕರೆದೊಯ್ದರು. ಅವಳು ಒಳಗೆ ಹೋಗುವ

ಮೊದಲು ಕಣ್ಣು ಬಿಟ್ಟು ನೇರವಾಗಿ ಎಮಿಲಿಯ ಕಡೆ ನೋಡಿದಳು. ನಾನು ಹಿಂತಿರುಗಿ ಬರುವೆನು ಎಂಬಂತಿತ್ತು ಅವಳ ನೋಟ.

ಹೃದಯ ತಜ್ಞ ಪ್ರೊಫೆಸರ್ ಗೀಟನೊ ಗಾರ್ಗುಲೊ ಕುಶಲ ಕೈ ಚಳಕದಿಂದ ಒಂದೇ ಸಲಕ್ಕೆ ಹೃದಯಾವರಣ ಪೊರೆಯೊಳಗಿಂದ ವ್ಯಾಲೆಂಟಿನಳ ಹೃದಯವನ್ನು ತೆರೆದಿಟ್ಟದ್ದನ್ನು ಗಮನಿಸುತ್ತಾ ಇದ್ದ ಡಾ|| ಪಿಕಿಯೊ ಆತಂಕದಿಂದ ಮುಷ್ಟಿ ಬಿಗಿ ಹಿಡಿದನು. ಸಾಮಾನ್ಯವಾಗಿ ಹೃದಯವು ಟೆನಿಸ್ ಚೆಂಡಿನಷ್ಟಿರುತ್ತದೆ. ಆದರೆ ಈ ಹೃದಯವು ದ್ರಾಕ್ಷಿ ಗೊಂಚಲಿನಷ್ಟು ದೊಡ್ಡದಾಗಿ ಬೆಳೆದಿತ್ತು. ಮಹಾಪಧಮನಿ (ಅಯೋರ್ಟ)ಯ ಕೆಳಗಿನಿಂದ ಇಡೀ ಹೃದಯವನ್ನು ಗಾರ್ಗುಲೊ ಕತ್ತರಿಸಿ ತೆಗೆದನು. ಅನಂತರ ಎಚ್ಚರಿಕೆಯಿಂದ ಹೊಸ ಹೃದಯವನ್ನು ಜೋಡಿಸಿ ಮಹಾಪಧಮನಿ ಮತ್ತು ಇತರ ಪ್ರಮುಖ ಅಪಧಮನಿಗಳನ್ನು ಹೃದಯಕ್ಕೆ ಸೇರಿಸಿ ಹೊಲಿದನು.

ಐವತ್ತು ನಿಮಿಷಗಳ ಅನಂತರ ಪೂರ್ತಿ ಕೆಲಸ ಮುಗಿದಿತ್ತು. ಮಹಾಪಧಮನಿಯನ್ನು ಮುಚ್ಚಲು ಹಾಕಿದ್ದ ಚಿಪ್ಪುಳನ್ನು ಗಾರ್ಗುಲೊ ತೆಗೆದುಹಾಕಿದನು. ಹೀಗೆ ಹೊಸ ಹೃದಯದಲ್ಲಿ ತುಂಬಿದ ರಕ್ತವನ್ನು ಮುಂದೆ ಹರಿಯಲು ಬಿಟ್ಟನು, ತತ್ ಕ್ಷಣವೇ ಬಡಿತ ಪ್ರಾರಂಭವಾಯಿತು. ಆ ಕ್ಷಣವೇ ಪಿಕಿಯೊ ಮಿತಿಮೀರಿದ ಸಂತೋಷ ಮತ್ತು ಉದ್ಗಾರದಿಂದ ಗಾರ್ಗಿಲೊ ಕಣ್ಣುಗಳನ್ನು ಸಂಧಿಸಿ ಅವನಲ್ಲೂ ಅದೇ ಅನುಭವವನ್ನು ಕಂಡನು.

ಕೇವಲ ಒಂದೇ ಪದ: ವಾರ್ಡಿಗೆ ಹಿಂತಿರುಗುವಷ್ಟು ಸ್ಥಿತಿಗೆ ಬರುವ ಮೊದಲು ವ್ಯಾಲೆಂಟಿನ ಆರು ವಾರಗಳನ್ನು ತೀವ್ರ ಎಚ್ಚರಿಕಾ ಘಟಕದಲ್ಲಿ ಕಳೆದಳು. ಕೃತಕ ಶ್ವಾಸಕೋಶವನ್ನು ವೈದ್ಯರು ಭಯದಿಂದಲೇ ಬೇರ್ಪಡಿಸಿದರು. ಆದರೆ ಅದನ್ನು ತೆಗೆಯುತ್ತಿದ್ದಂತೆಯೇ ವ್ಯಾಲೆಂಟಿನ ಸ್ವಾಭಾವಿಕ ಉಸಿರಾಟವನ್ನು ತಾನೇ ತಾನಾಗಿ ಪ್ರಾರಂಭಿಸಿದಳು. ಅವಳ ಶ್ವಾಸಕೋಶಗಳಿಗೆ, ಧ್ವನಿ ತಂತುಗಳಿಗೆ ಮತ್ತು ಜೀರ್ಣವ್ಯೂಹಕ್ಕೆ ಯಾವ ಧಕ್ಕೆಯೂ ತಗುಲಿರಲಿಲ್ಲ.

ಎರಡು ತಿಂಗಳಿನಿಂದಲೂ ಕೊಡುತ್ತಿದ್ದ ಶಾಂತಿಪ್ರದ ಔಷಧವನ್ನು ಕ್ರಮೇಣ ನಿಲ್ಲಿಸಲಾಯಿತು. ಆದರೆ ವ್ಯಾಲೆಂಟಿನ ಉದಾಸಳಾಗಿ ಕಾಣಿಸಿದಳು. ಎಮಿಲಿಯ ಮಂಚದ ಬಳಿ ನಿಂತು ತನ್ನ ಮಗಳನ್ನು ಬಗ್ಗಿ ನೋಡಿದಾಗ ಭಯದಿಂದ ತಣ್ಣಗಾದಳು. ಕಣ್ಣನ್ನು ಅಗಲಿಸಿ ಪುಟ್ಟ ಹುಡುಗಿಯು ನೆಟ್ಟದೃಷ್ಟಿಯಿಂದ ಮೇಲೆ ದಿಟ್ಟಿಸುತ್ತಿದಳು. ಕಣ್ಣನ್ನು ಸ್ವಲ್ಪವೂ ಮಿಟುಕಿಸಲಿಲ್ಲ. ಯಾವ ಪ್ರಚೋದನೆಗೂ ಪ್ರತಿಕ್ರಿಯಿಸಲಿಲ್ಲ. ಎಮಿಲಿಯ ಗಂಟೆಗಟ್ಟಲೆ ವ್ಯಾಲೆಂಟಿನ ಬಳಿ ವಿವಿಧ ಆಟಗಳನ್ನು ಆಡುತ್ತಲೂ, ಅವಳ ಯಕ್ಷಿಣಿ ಕಥೆಗಳ ಧ್ವನಿ ಸುರುಳಿ ಹಾಕುತ್ತಲೂ ಮತ್ತು ಹಾಡುತ್ತಲೂ ಇದ್ದಳು. "ಅವಳ ಇಂದ್ರಿಯಗಳಿಗೆ ಆದಷ್ಟು ಪ್ರಚೋದನೆ ಕೊಡಬೇಕು" ಎಂದು ಡಾ|| ಫ್ರಾಸ್ಕರೊಲಿ ಹೇಳಿದನು.

ದಿನದಿನವೂ ಎಮಿಲಿಯ ಅವಳಿಗಾಗಿ ಮೃದುವಾಗಿ ಹಾಡುತ್ತಿದ್ದಳು ಮತ್ತು ಕೈಗಳನ್ನು ತಟ್ಟುತ್ತಿದ್ದಳು. ಆದರೆ ವ್ಯಾಲೆಂಟಿನಳಿಂದ ಯಾವ ಪ್ರತಿಕ್ರಿಯೆಯೂ ಬರಲಿಲ್ಲ.

ಕ್ಯಾಸಿಲೊ ದಂಪತಿಗಳು ಗಾಬರಿಗೊಂಡರು. ದೀರ್ಘ ನಿದ್ರೆಯು ಅವಳ ಮೆದುಳನ್ನು ಹಾನಿಗೊಳಿಸಿರಬಹುದೇ ?

“ಅದರ ಬಗ್ಗೆ ಚಿಂತಿಸಬೇಡಿ” ಪಿಕಿಯೊ ಹೇಳಿದನು, “ಮೆದುಳಿನ ಹಾನಿಯಾಗಿರುವುದಕ್ಕೆ ಯಾವ ಆಧಾರವೂ ಇಲ್ಲ” ಆದರೂ ಎಮಿಲಿಯಳಿಗೆ ಅನುಮಾನವು ಸಡಿಲಗೊಳ್ಳಲಿಲ್ಲ. “ಏನೋ ಅನಾಹುತ ಆಗಿರಬೇಕು” ಪ್ರತಿ ಸಂಜೆಯೂ ಅವಳು ಬಳಲಿದ ಮತ್ತು ಏರುತ್ತಿರುವ ನಿರಾಸೆಯ ಸ್ಥಿತಿಯಲ್ಲಿ ಆಸ್ಪತ್ರೆಯಿಂದ ಹೊರಬರುತ್ತಿದ್ದಳು.

ಆಗ ಒಂದು ರಾತ್ರಿ ಎನ್ರೊ ಗಾಮಿನೊ ಎಂಬ ಪುರುಷ ನರ್ಸ್ ವ್ಯಾಲೆಂಟಿನಳ ಆಹಾರ ಮತ್ತು ನೀರಿನ ನಳಿಗೆಗಳನ್ನು ಪರಿಶೀಲಿಸುತ್ತಿದ್ದಾಗ ಒಂದು ಕೀರಲು ಧ್ವನಿಯನ್ನು ಕೇಳಿದನು.

ಎಮಿಲಿಯ ಬೆಳಿಗ್ಗೆ ಆಸ್ಪತ್ರೆಗೆ ಬಂದೊಡನೆ ಎನ್ರೊ ಓಡಿಬಂದು, “ನಾನು ನಿನಗಾಗಿ ಒಂದು ಸಿಹಿ ಸುದ್ದಿಯನ್ನು ತಂದಿದ್ದೇನೆ. ವ್ಯಾಲೆಂಟಿನ ಮಾತನಾಡಿದಳು”. ಎಂದನು.

ಎಮಿಲಿಯಳ ಹೃದಯ ಬಡಿತ ಹೆಚ್ಚಾಯಿತು. “ಏನೆಂದು ಹೇಳಿದಳು?”

ಎನ್ರೊ ಮಂದಸ್ಮಿತನಾಗಿ ಹೇಳಿದನು, “ಮಮ”.

ಒಂದೇ ಬಂದು ಪದ! ಆದರೆ ಎಮಿಲಿಯಳಿಗೆ ಏನೆಲ್ಲಾ ತಿಳಿಯಬೇಕಿತ್ತೋ ಅವೆಲ್ಲವನ್ನು ಆ ಒಂದು ಪದ ತಿಳಿಸಿತ್ತು.

ವ್ಯಾಲೆಂಟಿನಳು ಬೇಗ ಗುಣಮುಖಳಾದಳು. ಫೆಬ್ರುವರಿಯ ಕೊನೆಯಹೊತ್ತಿಗೆ ಹಾಸಿಗೆಯ ಮೇಲೆ ಎದ್ದು ಕುಳಿತಳು. ನರ್ಸ್‌ಗಳ ಕಡೆ ನೋಡಿ ಮುಗುಳ್ನಕ್ಕಳು. ಮಾರ್ಚ್ ತಿಂಗಳ ಪ್ರಾರಂಭದಲ್ಲಿ ಮೊದಲ ಕೆಲವು ಹೆಜ್ಜೆಗಳನ್ನು ನೆಲದ ಮೇಲಟ್ಟಳು.

೧೯೯೪ರ ಮಾರ್ಚ್ ಏಳರಂದು ವ್ಯಾಲೆಂಟಿನ ಆಸ್ಪತ್ರೆ ಬಿಟ್ಟು ಹೊರಟಳು. ಕತ್ತಲಿನ ನಿಡಿದಾದ ಪಯಣದ ಕೊನೆಯಲ್ಲಿದ್ದಳು. ಈ ದಿನ ಎಮಿಲಿಯ ಮತ್ತು ಅವಳ ಪತಿ ಬೆಪ್ಪೆ ಸುಖವಾದ ಆರೋಗ್ಯವಾದ ತಮ್ಮ ಪುಟ್ಟ ಹುಡುಗಿಗಾಗಿ ವಂದನೆಯನ್ನು ಸಲ್ಲಿಸುತ್ತಾರೆ.

ಭಾರತದ ಜನಸಂಖ್ಯೆ ಈಗ ೯೭,೯೮,೬೦,೪೧೧ ಮುಟ್ಟಿ ಶೀಘ್ರದಲ್ಲಿಯೇ ನೂರು ಕೋಟಿಯ ಗಡಿಯನ್ನು ತಲುಪುವ ಹಂತಕ್ಕೆ ಬಂದಿದೆ.

ರಾಷ್ಟ್ರದಲ್ಲಿ ಪ್ರತಿ ನಿಮಿಷಕ್ಕೆ ಜನಸಂಖ್ಯೆ ೩೦ರಷ್ಟು ಹಾಗೂ ಪ್ರತಿ ದಿನ ಸರಾಸರಿ ೪೩,೦೦೦ದಂತೆ ಹೆಚ್ಚುತ್ತಿರುವುದೇ ಈ ಆತಂಕಕ್ಕೆ ಕಾರಣವಾಗಿದೆ.

ಪ್ರಪಂಚದ ಒಟ್ಟು ಭೂ ಪ್ರದೇಶದಲ್ಲಿ ಭಾರತದ ಪಾಲು ಶೇ. ೨.೪ ಮಾತ್ರ. ಆದರೆ ಜನಸಂಖ್ಯೆ ಶೇ. ೧೬ ಆಗಿದೆ. ೨೦೧೬ರ ವೇಳೆಗೆ ಈ ಸಂಖ್ಯೆ ೧೨೬.೪ ಕೋಟಿ ಆಗಲಿದೆ ಎಂದು ಅಂದಾಜು.

—ಜುಲೈ ೧೩, ೧೯೯೮, ಪ್ರಜಾವಾಣಿ

ಚಿಕಿತ್ಸೆಗಿಂತ ರೋಗ ನಿರೋಧ ಉತ್ತಮ

ಟಿ. ವಿ. ಅನ್ನಪೂರ್ಣಮ್ಮ
ಎಂ.ಐ.ಜಿ ೫, 'ಶ್ರೀಕರ'
ಹುಡ್ಕೊ ಮೊದಲ ಹಂತ
ಕುವೆಂಪು ನಗರ, ಮೈಸೂರು-೨೩

ಆಧುನಿಕ ಔಷಧಿ ಇಂದು ಅಪರಾಧಿ ಸ್ಥಾನದಲ್ಲದೆಯೇ? ಕಾರಣವೇನು? ರೋಗ ನಿವಾರಕ ಔಷಧಿ ಸ್ವತಃ ರೋಗಕಾರಕವಾದರೆ ಆ ತಪ್ಪಿನ ಮೂಲ ಎಲ್ಲಿ?

ಚಿಕಿತ್ಸೆ ಎಂದರೇನು? ಒಬ್ಬ ರೋಗಿಯನ್ನು ರೋಗ ಮುಕ್ತನನ್ನಾಗಿ ಮಾಡಿ ಆತ ಆರೋಗ್ಯವಂತನಾಗಲು ಹೂಡುವ ಎಲ್ಲಾ ವಿಧಾನಗಳನ್ನೂ ಚಿಕಿತ್ಸೆ ಸೂಚಿಸುತ್ತದೆ. ಯುಕ್ತ ಆಹಾರ ಸೇವನೆ, ಆರೋಗ್ಯಕರ ಜೀವನ ಪದ್ಧತಿ, ಆರೈಕೆ ಮತ್ತು ಔಷಧಿಗಳ ನಿರ್ವಹಣೆ, ಇವೆಲ್ಲವೂ ಚಿಕಿತ್ಸೆಯಲ್ಲಿ ಸೇರಿರುತ್ತವೆ.

ರೋಗಗ್ರಸ್ತರಾದ ಕೂಡಲೇ ಔಷಧಿಗಳ ಕಡೆ ನೋಡುವುದು ಆಧುನಿಕ ಪ್ರವೃತ್ತಿಯಾಗಿದೆ. ರೋಗಿಗಳ ವಿಷಯದಲ್ಲಿ ಮಾತ್ರವಲ್ಲ ವೈದ್ಯರ ವಿಷಯದಲ್ಲೂ ಇದು ನಿಜ. ಚಿಕಿತ್ಸೆಯ ಇತರ ಅಂಶಗಳಿಗೆ ಗಮನ ಕೊಡುವುದೇ ಇಲ್ಲ.

ಇತ್ತೀಚಿನ ದಿನಗಳಲ್ಲಿ ಜನರು ಔಷಧಿ ಸೇವನೆಗೆ ಹೊಂದಿಕೊಂಡುಬಿಟ್ಟಿದ್ದಾರೆಂದು ನಿಸ್ಸಂಶಯ. ನಿಜವಾಗಿ ಹೇಳುವುದಾದರೆ ಆರೋಗ್ಯವಂತರಾಗಿರಲು ಔಷಧಿಗಳೀ ಬೇಕಿಲ್ಲ. ಬೇಕಾಗಿರುವುದು ಆರೋಗ್ಯಕರ ಜೀವನ ಕ್ರಮ ಮತ್ತು ಯುಕ್ತ ಆಹಾರ.

ಆಧುನಿಕ ಇಂಗ್ಲಿಷ್ (ಅಲೋಪತಿ) ಔಷಧಿಗಳ ಸೇವನೆ ದಿನೇ ದಿನೇ ಹೆಚ್ಚಾಗುತ್ತಿದೆ. ಏಕೆಂದರೆ ಅವು ತಕ್ಷಣ ಪರಿಣಾಮ ಕೊಡುವಂತೆ ಭಾಸವಾಗುತ್ತದೆ. ಈ ಔಷಧಿಗಳಿಂದಾಗುವ ಹಾನಿಯ ಬಗ್ಗೆ ಹೆಚ್ಚು ಜನಗಳಿಗೆ ತಿಳುವಳಿಕೆಯಿಲ್ಲ. ವರ್ತಮಾನ ಪತ್ರಿಕೆಗಳು, ರೇಡಿಯೋ ಮತ್ತು ದೂರದರ್ಶನದ ಮೂಲಕ ವ್ಯಾಪಕವಾಗಿ ತೋರಿಸುವ ಜಾಹಿರಾತುಗಳೂ ಕೆಲವು ವೇಳೆ ವೈದ್ಯರಿಂದ ವಿಧಿಸಲ್ಪಟ್ಟ ಔಷಧಿಗಳೂ ತೊಂದರೆಗೆ ಕಾರಣವಾಗುತ್ತದೆಂಬ ತಿಳುವಳಿಕೆ ಜನರಿಗೆ ಇಲ್ಲ.

೧೯೭೭ನೇ ಇಸವಿ ಜನವರಿ ೪ರಂದು ಭಾರತೀಯ ವಿಜ್ಞಾನ ಕಾಂಗ್ರೆಸ್, ಭುವನೇಶ್ವರದಲ್ಲಿ ಒಂದು ವಿಚಾರ ಸಂಕೀರ್ಣ ಏರ್ಪಡಿಸಿತ್ತು. ಕಲ್ಕತ್ತೆಯ ನ್ಯಾಷನಲ್ ಮೆಡಿಕಲ್ ಕಾಲೇಜಿನ ಪ್ರೊಫೆಸರ್ ಎಂ. ಆರ್. ದಾಸ್‌ಗುಪ್ತರವರು ಈ ರೀತಿ ಹೇಳಿದ್ದರು. "ಆಧುನಿಕ ಔಷಧಿ

(ಮೂಲ : ಡಾ|| ಸುರೇಶ್ ಕುಮಾರ್‌ರವರ ಇಂಗ್ಲಿಷ್ ಲೇಖನ.

ಗಳಿಂದುಂಟಾಗುವ ಅಪಾಯುಗಳಿಂದ ವೈದ್ಯಕೀಯ ವೃತ್ತಿಯೇ ಒಂದು ಶಾಪವಾಗಿಬಿಟ್ಟಿದೆ." ಆತನ ಪ್ರಕಾರ ಮಾತ್ರೆಗಳ ರೂಪದಲ್ಲಿ ಸೇವಿಸುವ ಅನೇಕ ಔಷಧಿಗಳ ಸೇವನೆ ಅನಂತರದ ಪರಿಣಾಮಗಳು ವಾಂತಿ ಮತ್ತು ಹೊಟ್ಟೆಯಲ್ಲಿ ಅಲ್ಪ ರಕ್ತಸ್ರಾವಕ್ಕೆ ಕಾರಣವಾಗುತ್ತವೆ. ಆವಶ್ಯಕತೆಗಿಂತ ಹೆಚ್ಚು ಪ್ರಮಾಣದಲ್ಲಿ ಸೇವಿಸುವ ನೋವು ನಿವಾರಕ ಮಾತ್ರೆಗಳು ಹೊಟ್ಟೆಯಲ್ಲಿನ ರಕ್ತಸ್ರಾವಕ್ಕೆ ಕಾರಣವಾಗುವ ಘಟನೆಗಳು ನಡೆದಿವೆ.

ಟೆಟ್ರಾಸೈಕ್ಲಿನ್, ಹಲ್ಲುಗಳಿಗೆ ಅಪಾಯ-ವನ್ನುಂಟುಮಾಡಿದರೆ, ಪ್ರತ್ಯಾಮ್ಲ ಮಲಬದ್ಧತೆಯನ್ನುಂಟುಮಾಡುತ್ತದೆ. ಶರೀರದೊಳಗೆ ಕೆಲಸ ಮಾಡುವ ಎಲ್ಲಾ ಔಷಧಿಗಳೂ ಯಕೃತ್ತಿನ ಮೂಲಕವೇ ಸಂಚರಿಸಬೇಕಾಗಿರುವುದರಿಂದ, ಔಷಧಿಯ ವಿಪರೀತ ಪರಿಣಾಮಗಳಿಂದ ಶರೀರ ತಪ್ಪಿಸಿಕೊಳ್ಳಲಾರದು.

ಇಂದು ಪೇಟೆಯಲ್ಲಿ ಇಂತಹ ಸಾವಿರಾರು ಔಷಧಿಗಳು ಇವೆ. ಇವು ನಿದ್ರಾಹೀನತೆ, ವಾಂತಿ, ಕಳವಳವನ್ನುಂಟುಮಾಡುವ ಕಾಮಾಲೆಯ ವಿವಿಧ ಬಗೆಗಳು ಮುಂತಾದ ದುಷ್ಪರಿಣಾಮಗಳನ್ನುಂಟುಮಾಡುವಂತಹ-ವುಗಳು. ವಾಸ್ತವವಾಗಿ ಅನೇಕ ಔಷಧಿಗಳು ಹೃದಯದ ಕಾಯಿಲೆಗಳಿಗೆ ಕಾರಣವಾಗುತ್ತವೆ. ದುರಾದೃಷ್ಟವೆಂದರೆ, ಅಂತಹ ಔಷಧಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಅನಾಲಿಜಿನ್ ಮತ್ತು ಪೆನ್ಸಿಲಿನ್ ಔಷಧಿಗಳ ದುಷ್ಪರಿಣಾಮಕ್ಕೆ ವೈದ್ಯರೇ ಹೆದರಿಬಿಟ್ಟಿದ್ದಾರೆ. ಅನಾಲಿಜಿನ್ ಮಿಶ್ರಣ ಬೇರೆ ಯಾವುದೇ ಔಷಧಿಯಲ್ಲಿ ಬೆರೆಸಬಾರದೆಂದು ಜಾಗತಿಕ ಆರೋಗ್ಯ ಸಂಸ್ಥೆ ಸೂಚಿಸಿ ಇದನ್ನು ನಿಷೇಧಿಸಿದೆ. ಅವರು ಹೇಳುವ ಪ್ರಕಾರ ಕೆಲವು ಔಷಧಿಗಳು ಕ್ಯಾನ್ಸರ್ ಕಾಯಿಲೆಗೆ ಕಾರಣವಾಗಬಹುದು. ಉದಾ-ಹರಣೆಗೆ ಮೆಟ್ರೊನಿಡಜಾಲ್ ಔಷಧಿಯನ್ನು ಇಲಿಗಳ ಮೇಲೆ ಪ್ರಯೋಗ ಮಾಡಿ ನೋಡಿದಾಗ, ಈ ಔಷಧಿಯು ದೀರ್ಘಕಾಲದ ಸೇವನೆ ಕ್ಯಾನ್ಸರ್‌ಗೆ ಕಾರಣವಾಗಬಹುದೆಂದು ಸಾಬೀತಾಗಿದೆ. ಅತಿ ಹೆಚ್ಚಿನ ರಕ್ತದೊತ್ತಡವನ್ನು ಕಡಿಮೆ ಮಾಡುವ ಔಷಧಿಗಳು ಮೂಗಿನ ಉಸಿರಾಟಕ್ಕೆ ತೊಂದರೆ ಉಂಟುಮಾಡುತ್ತವೆ. ಕೆಲ ಔಷಧಿಗಳು ರಕ್ತಸ್ರಾವ ಕಾಯಿಲೆಯನ್ನು ಉಂಟುಮಾಡುತ್ತವೆಯೆಂಬುದು ಸಾಬೀತಾಗಿದೆ. ಸಾವಿಗೆ ಕಾರಣವಾಗುವಂತಹ ಕೆಲವು ಔಷಧಿಗಳೂ ಇವೆ. ಗರ್ಭದಲ್ಲಿರುವ ಮಗುವಿನ ಮೇಲೂ ಇಂತಹ ದುಷ್ಪರಿಣಾಮಗಳು ಬೀಳಬಹುದು.

ವಿಶ್ವ ಆರೋಗ್ಯ ಸಂಸ್ಥೆಯು ಪ್ರಕಟಿಸುವ, ೧೯೭೭ಳನೇ, ಇಸವಿ ಏಪ್ರಿಲ್, ತಿಂಗಳ ಔಷಧಿಯ ವಿಶೇಷ ನಿಯತ ಕಾಲಿಕ ಪತ್ರಿಕೆ 'ವಿಶ್ವ ಆರೋಗ್ಯ'ದಲ್ಲಿ ಔಷಧಿಗಳ ದುಷ್ಪರಿಣಾಮಗಳ ಬಗ್ಗೆ ಅತಿ ಹೆಚ್ಚಿನ ಮಾಹಿತಿ ಕೊಡಲ್ಪಟ್ಟಿದೆ.

ಲಂಡನ್ 'ಟೈಮ್ಸ್' ಪತ್ರಿಕೆಯ ಪ್ರಕಾರ, ಒಬ್ಬ ಹೆಂಗಸಿನ ಒಸಡುಗಳಲ್ಲಿ ರಕ್ತಸ್ರಾವವಾಗುತ್ತಿತ್ತು. ಆಕೆ ಆರೋಗ್ಯವಂತಳಾದ ಮಹಿಳೆಯಾಗಿದ್ದಳು. ಆಕೆ ಒಬ್ಬ ವೈದ್ಯರಲ್ಲಿಗೆ ಹೋದಳು. ಆತ 'ಕ್ಲೋರೋಫಿನಿಕಾಲ್' ತೆಗೆದುಕೊಳ್ಳಲು ಸೂಚಿಸಿದ. ಆರು ವಾರಗಳ ನಂತರ ಆಕೆಗೆ ಕೆಮ್ಮು ಪ್ರಾರಂಭವಾಯಿತು. ಆಗಲೂ ಆತ ಅದೇ ಔಷಧಿಯನ್ನು ಮುಂದುವರಿಸಲು

ಹೇಳಿದ. ಇದರ ಪರಿಣಾಮವಾಗಿ ಆಕೆಯ ಮುಖದ ಮೇಲೆ ಮೊಡವೆಗಳು ಪ್ರಾರಂಭವಾದುವು. ಆಕೆಯ ಮುಖ ಕೆಂಪಾಯಿತು. ಮುಖದ ಮೇಲೆ ಕೂದಲು ಬೆಳೆಯಲಾರಂಭಿಸಿತು. ಆಕೆ ಪ್ರತಿ ನಿತ್ಯ ಮುಖಕ್ಷೌರ ಮಾಡಿಕೊಳ್ಳಬೇಕಾಯಿತು. ಆಕೆಯ ಮಾಂಸಖಂಡಗಳು ಪುರುಷರ ಮಾಂಸಖಂಡಗಳಂತಾದುವು. ಆಕೆ ತನ್ನ ವೈದ್ಯರ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದಳು. ಅಷ್ಟು ಸಣ್ಣ ಕಾಯಿಲೆಗೆ ಅಷ್ಟೊಂದು ಪರಿಣಾಮಕಾರಿಯಾದ ಔಷಧಿಯನ್ನು ಕೊಡಬಾರದಿತ್ತೆಂದು ನ್ಯಾಯಾಲಯ ಹೇಳಿ, ಆಕೆಗೆ ಆ ವೈದ್ಯ ೩,೪೪೪,೧೪೬ ಡಾಲರುಗಳನ್ನು ಕೊಡಬೇಕೆಂದು ತೀರ್ಪು ಕೊಟ್ಟಿತು.

ಇಲ್ಲಿ ನಿಜವಾದ ಪ್ರಶ್ನೆಯೆಂದರೆ, ತಪ್ಪು ಯಾರದು ? ವೈದ್ಯರದ್ದೆ ? ಅಥವಾ ಆ ಔಷಧಿಯನ್ನು ತಯಾರಿಸುವ ಘಟಕದ್ದೇ ? ಈ ಪ್ರಶ್ನೆಗೆ ಉತ್ತರ ಸುಲಭವಲ್ಲ.

ಔಷಧಿ ತಯಾರಿಕೆ ಈಗ ಜಗತ್ತಿನಲ್ಲೇ ಒಂದು ದೊಡ್ಡ ಉದ್ಯಮವಾಗಿ ಬೆಳೆದಿದೆ. ಆದರ ಬಂಡವಾಳಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಹೂಡಲಾಗುತ್ತಿದೆ. ಇದಲ್ಲದೆ ಈ ಉದ್ಯಮ ಒಂದು ವ್ಯವಸ್ಥಿತ ಸಂಸ್ಥೆ. ಇದಕ್ಕೆ ತನ್ನದೇ ಆದ ಪ್ರಯೋಗಶಾಲೆಗಳಿವೆ. ಸ್ವಂತ ರಸಾಯನ ವಿಜ್ಞಾನಿಗಳು ಮತ್ತು ವಿಶ್ಲೇಷಕರೂ ಇದ್ದಾರೆ. ತತ್‌ಕ್ಷಣ ಇಲ್ಲದಿದ್ದಲ್ಲಿ ಆದಷ್ಟು ಶೀಘ್ರವಾಗಿ ನೋವನ್ನು ನಿವಾರಿಸುವ ಔಷಧಿ ತಯಾರಿಕೆಯೇ ಇವರ ಗುರಿ. ಆ ಔಷಧಿಗಳ ಪ್ರತಿಪರಿಣಾಮ ಮತ್ತು ನಂತರದ ಪರಿಣಾಮಗಳು ಎಷ್ಟು ಗಂಭೀರವಾಗಿವೆಯೆಂಬುದರ ಬಗ್ಗೆ ಅವರಿಗೆ ಕಾಳಜಿ ಇದ್ದಂತೆ ತೋರುವುದೇ ಇಲ್ಲ.

ಅವರ ಪ್ರಕಟಣಾವಿಭಾಗಗಳು ಮೇಲ್ಮಟ್ಟದಲ್ಲಿ ವ್ಯವಸ್ಥಿತವಾಗಿವೆ. ರೇಡಿಯೋ, ದೂರದರ್ಶನ, ವರ್ತಮಾನ ಪತ್ರಿಕೆಗಳು, ನಿಯತ ಕಾಲಿಕೆ ಪತ್ರಿಕೆಗಳು ಮುಂತಾದುವುಗಳ ಮುಖಾಂತರ ಇವು ಜಾಹಿರಾತುಗಳನ್ನು ಕೊಡುತ್ತವೆ. ಅತಿ ಹೆಚ್ಚಿನ ಔಷಧಿಗಳ ಸಂಗ್ರಹವೇ ಇವರಲ್ಲಿರುತ್ತವೆ. ತರಬೇತಿ ಪಡೆದ ಪ್ರತಿನಿಧಿಗಳನ್ನು ಪ್ರತಿ ಮಂಡಳಿಯೂ ವೈದ್ಯರಲ್ಲಿಗೆ ಕಳುಹಿಸುವುದು.

ಹಿಂದೆ ರೋಗಿಯೊಬ್ಬ ವೈದ್ಯರಲ್ಲಿಗೆ ಹೋದರೆ, ಆತ ಆ ವ್ಯಕ್ತಿಯನ್ನು ಬಹಳ ಎಚ್ಚರಿಕೆಯಿಂದ ಪರೀಕ್ಷಿಸುತ್ತಿದ್ದ. ಚೆನ್ನಾಗಿ ಯೋಚಿಸಿ ಆತ ಒಂದು ಕಷಾಯವನ್ನು ಸೇವಿಸಲು ಸೂಚಿಸುತ್ತಿದ್ದ. ಅದರ ಜೊತೆಗೆ ಆತನ ಆಹಾರ ಮತ್ತು ಜೀವನ ಕ್ರಮದ ಬಗ್ಗೆ ವಿವರವಾದ ನಿರ್ದೇಶನಗಳನ್ನು ಕೊಡುತ್ತಿದ್ದ. ನಾನು ಇದನ್ನು ನೋಡಿದ್ದೇನೆ. ನನ್ನ ಪೂಜ್ಯ ಗುರು ಬ್ರಹ್ಮಾತ್ಮಾನಂದರ ಆಶೀರ್ವಾದದಿಂದ ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ೧೯೪೧ ರಿಂದ ೧೯೪೩ರ ವರೆಗೆ ಡಾ|| ಯು. ಎಸ್. ಕಿಣಿಯವರಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಇದರ ಅನುಭವ ನನಗಾಗಿದೆ.

ಆದರೆ, ಇಂದು ಪರಿಸ್ಥಿತಿ ಬದಲಾಗಿದೆ. ಇಂದು ಒಬ್ಬ ಉತ್ತಮ ವೈದ್ಯನಿಗಾಗಲೀ ಅಥವಾ ವೈದ್ಯಕೀಯ ಕ್ಷೇತ್ರದ ಒಬ್ಬ ಉತ್ತಮ ಪರಿಣಿತನಿಗಾಗಲಿ, ಔಷಧಿ ತಯಾರಿಕಾ ಕ್ಷೇತ್ರದಲ್ಲಿನ ಬೆಳವಣಿಗೆ, ಔಷಧಿಗಳ, ಆದರ ಪರಿಣಾಮಗಳ ಬಗ್ಗೆ ಅಧ್ಯಯನ ಮಾಡಲು ಕಾಲಾವಕಾಶವಿರುವಂತೆ ಕಾಣು

ವುದೇ ಔಷಧಿ ತಯಾರಿಸುವ ಅನೇಕ ಕಂಪನಿಗಳ ಪ್ರತಿನಿಧಿಗಳು ಮತ್ತು ಏಜೆಂಟರೇ ಇಂದು ವೈದ್ಯರುಗಳಾಗಿಬಿಟ್ಟಿದ್ದಾರೆ. ಹೊಸ ಔಷಧಿಗಳ ಬಗ್ಗೆ ಪೂರ್ಣಮಾಹಿತಿ ಕೊಡುಗೆ ಏಕಮಾತ್ರ ಆಕರವಾಗಿದ್ದಾರೆ. ಈ ಏಜೆಂಟರು ತಮ್ಮ ಔಷಧಿಗಳನ್ನು ಮಾರಲು ಮಾತ್ರ ಪ್ರಯತ್ನ ಪಡುತ್ತಾರೆ. ತಮ್ಮ ಔಷಧಿಗಳ ದುಷ್ಪರಿಣಾಮಗಳ ಬಗ್ಗೆ ಅವರು ಸೂಚನೆಯನ್ನೂ ಕೊಡುವುದಿಲ್ಲ. ನಿರರ್ಗಳವಾಗಿ ಇಂಗ್ಲಿಷಿನಲ್ಲಿ ಮಾತನಾಡಿ ವೈದ್ಯರ ಮೇಲೆ ಪ್ರಭಾವ ಬೀರುತ್ತಾರೆ. ರಂಗುರಂಗಿನ ಪ್ರಕಟಣಾ ಸಾಮಗ್ರಿಗಳನ್ನು ಅವರ ಮೇಜಿನ ಮೇಲಿಡುತ್ತಾರೆ. ಉಚಿತವಾಗಿ ಮಾದರಿಗಳನ್ನು ಕಾಣಿಕೆಗಳನ್ನು ಕೊಡುತ್ತಾರೆ. ಪ್ರಭಾವಿತನಾದ ವೈದ್ಯ ತನ್ನ ಕರ್ತವ್ಯ ಮಾಡುತ್ತಿದ್ದೇನೆಂಬಂತೆ ಆ ಹೊಸ ಔಷಧಿಗಳನ್ನು ಸೇವಿಸಲು ಸೂಚಿಸುತ್ತಾನೆ. ಆ ಔಷಧಿಗಳ ರೋಗ ಲಕ್ಷಣಗಳನ್ನು, ರೋಗ ವಿವರಗಳನ್ನೂ ಆಳವಾಗಿ ಪರೀಕ್ಷಿಸುವ ಪ್ರಯತ್ನವನ್ನೇ ಮಾಡುವುದಿಲ್ಲ. "ಎಚ್ಚರಿಕೆಯಿಂದ ಯೋಚಿಸಿ, ಚೆನ್ನಾಗಿ ವಿಚಾರಿಸಿ ಔಷಧಿ ಸೂಚಿಸುವುದು ನಿಜವಾಗಿಯೂ ಗತಕಾಲದ ವಿಷಯವಾಯಿತು." ವಾಸ್ತವವಾಗಿ, ಜಗತ್ತಿನಲ್ಲಿ ಔಷಧ ತಯಾರಿಕಾ ಉದ್ಯಮ ತಮ್ಮ ಅವಿವೇಕಯುಕ್ತ ಸಾಹಿತ್ಯ ಹಾಗೂ ಮಾದರಿಗಳಿಂದ ವೈದ್ಯರನ್ನು ಪ್ರಭಾವಿತರನ್ನಾಗಿ ಮಾಡಿ, ಅವರ ಹೃದಯ ಮತ್ತು ಮಸ್ತಿಷ್ಕವನ್ನೇ ಕೊಂಡುಕೊಂಡಿರುವಂತೆ ಕಾಣುತ್ತದೆ.

ಈ ಔಷಧಿಗಳ ಮಿತಿಮೀರಿದ ಸೇವನೆಗಳಿಗೆ ಕಾರಣಗಳೇನು? ಔಷಧಿಗಳ ಸೇವನೆ ದಿನೇ ದಿನೇ ಹೆಚ್ಚುತ್ತಿರುವುದು ಒಂದು ಬೃಹತ್ ಸಮಸ್ಯೆಯಾಗಿದೆ. ಜಾಗತಿಕ ಆರೋಗ್ಯ ಸಂಸ್ಥೆ ಮಾಡಿದ ಒಂದು ಸಮೀಕ್ಷೆಯ ಪ್ರಕಾರ ಈ ಔಷಧಿಗಳ ಸೇವನೆಯನ್ನು ಸೂಚಿಸುವ ವೈದ್ಯರ ಚೀಟಿಗಳು ದಿನೇ ದಿನೇ ಹೆಚ್ಚುತ್ತಾ ಲಕ್ಷಾಂತರದವರೆಗೂ ಹೋಗಿವೆ. ಹೆಚ್ಚು ಅಭಿವೃದ್ಧಿ ಹೊಂದಿದ ದೇಶಗಳು ಹೆಚ್ಚು ಹೆಚ್ಚು ಔಷಧಿಗಳನ್ನು ಸೇವಿಸುತ್ತವೆ. ಈ ಹೆಚ್ಚಳಕ್ಕೆ, ಪ್ರಕಟನೆಯು ಜೊತೆ ಜೊತೆಗೆ ಇನ್ನೂ ಅನೇಕ ಕಾರಣಗಳಿವೆ.

ಇಂದಿನ ಜೆಟ್ ಯುಗದಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿ ತಲೆನೋವು, ಹೊಟ್ಟೆನೋವು ಅಥವಾ ಜ್ವರದಿಂದ, ಸಾಧ್ಯವಾದಷ್ಟು ಶೀಘ್ರವಾಗಿ ಮುಕ್ತನಾಗಬೇಕೆಂದು ಇಚ್ಛಿಸುತ್ತಾನೆ. ಇದಕ್ಕೋಸ್ಕರ ಆತ ಒಂದು 'ಮ್ಯಾಜಿಕ್' ಮಾತ್ರೆಯ ಕಡೆ ನೋಡುತ್ತಾನೆ. ಇದನ್ನು ಸೇವಿಸುವ ಮೊದಲು ಒಬ್ಬ ವೈದ್ಯರ ಸಲಹೆ ಪಡೆಯಬೇಕೆಂದು ಆತ ಯೋಚಿಸುವುದೇ ಇಲ್ಲ. ಜಾಹಿರಾತುದಾರ ಆತನಿಗೆ ಈಗಾಗಲೇ ಮಾರಾಟ ಮಾಡಿರುವ ಮಾತ್ರೆ ತೆಗೆದುಕೊಳ್ಳುತ್ತಾನೆ ಅಥವಾ ಆತನ ಸ್ನೇಹಿತ ಒಂದು ವಿಶಿಷ್ಟ ಮಾತ್ರೆ ಸೇವಿಸಲು ಸಲಹೆ ಕೊಡುತ್ತಾನೆ. ಇನ್ನೊಬ್ಬರ ಕಾಯಿಲೆಗೆ ಮಾತ್ರೆ ಸೇವಿಸುವ ಸಲಹೆ ಕೊಡುವುದು, ಸೂಚಿಸುವುದು ಇಂದು ಅಂತರರಾಷ್ಟ್ರೀಯ ಮಟ್ಟದಲ್ಲೇ ಒಂದು ಹವ್ಯಾಸವಾಗಿ ಹೋಗಿದೆ. ಕಾಯಿಲೆ ಬಗ್ಗೆ ಸ್ವಲ್ಪ ಮಾತ್ರ ಹೇಳಿದರೆ ಸಾಕು. ತಕ್ಷಣವೇ ಕಾಯಿಲೆಯನ್ನು ಹೊಡೆದೋಡಿಸುವ ಔಷಧಿಗಳ, ಮನೆ ಮದ್ದುಗಳ, ವ್ಯಕ್ತಿಗತ ಸೂಚನೆಗಳ ಪ್ರವಾಹವೇ ನಿಮ್ಮಲ್ಲಿಗೆ ಬರುವುದು ಖಂಡಿತ.

ಸ್ವಯಂವೈದ್ಯ ಬಹಳ ಅಪಾಯಕಾರಿ ಯಾಗುವ ದಿನ ದೂರವಿಲ್ಲ. ಜಗತ್ತಿನ ಆರೋಗ್ಯ ಸಂಸ್ಥೆ ಪತ್ರಿಕೆಯ ಸಂಪಾದಕರು ಈ ರೀತಿ ಬರೆಯುತ್ತಾರೆ. "ಮಿತಿಮೀರಿದ ಔಷಧಿ ಸೇವನೆಯಿಂದುಂಟಾಗುವ ಅಪಾಯದ ಬಗ್ಗೆ ಮತ್ತು ಅನಾವಶ್ಯಕವಾಗಿ ಮಾಡುವ ಸ್ವಯಂ ವೈದ್ಯರ ಬಗ್ಗೆ ಸಾಮಾನ್ಯ ಮನುಷ್ಯನಿಗೆ ಎಚ್ಚರಿಕೆ ಕೊಡಬೇಕು.

ಇಂದು ನೋವು ನಿವಾರಕ ಔಷಧಿ, ಭೇದಿ ಮಾತ್ರೆ, ಪ್ರತ್ಯಾಮ್ಲ ಗುಳಿಗೆಗಳು, ಕೆಮ್ಮಿನ ಸಿರಪ್ಪುಗಳು, ಶಾಂಪೂ ಪೊಟ್ಟಣ ಗಳಂತೆ, ದಿನಸಿ ಅಂಗಡಿಗಳಲ್ಲಿ, ಹೋಟೆಲು ಗಳಲ್ಲಿ, ಅಡಿಕೆಎಲೆ ಮಾರುವವರಲ್ಲೂ ಕೊಂಡುಕೊಳ್ಳಬಹುದು.

ಜ್ವರಬಂದಾಗ ವೈದ್ಯರನ್ನು ಕಾಣದೆಯೇ ಕ್ಯಾಪ್ಸಲ್‌ಗಳನ್ನು ನುಂಗುವುದನ್ನು ನಾನು ನೋಡಿದ್ದೇನೆ. ಅನೇಕರು ನಿದ್ರೆಮಾತ್ರೆ ಗಳನ್ನು ಒಂದುಚೂರೂ ಸಂಕೋಚವಿಲ್ಲದೆ ನುಂಗುತ್ತಾರೆ. ವೈದ್ಯರು ಇಂಥ ಸ್ವಯಂವೈದ್ಯ ಪ್ರಕರಣಗಳನ್ನು ಪ್ರತಿ ನಿತ್ಯ ನೋಡುತ್ತಿರು ತ್ತಾರೆ. ಸ್ವಯಂವೈದ್ಯರಿಂದಾಗುವ ಅವಘಡ ಗಳ ಬಗ್ಗೆ ವರ್ತಮಾನಪತ್ರಿಕೆಗಳೂ ಸುದ್ದಿ ಯನ್ನು ಪ್ರಕಟಿಸುತ್ತವೆ.

ಆಧುನಿಕ ಔಷಧಿಗಳಲ್ಲಿ ಅನೇಕ ವರ್ಗ ಗಳಿವೆ. ಉದಾಹರಣೆಗೆ, ಸಲ್ಫಾದ್ರವ್ಯಗಳು, ಕಾರ್ಟಿಸೋನ್ಸ್, ನಿದ್ರೆಮಾತ್ರೆಗಳು, ಈ ಎಲ್ಲಾ ಔಷಧಿಗಳು ಮಿತಿಮೀರಿ ತೆಗೆದು ಕೊಂಡಾಗ ಅಪಾಯಕಾರಿಗಳಾಗಿ ಪರಿಣಮಿ ಸುತ್ತವೆ. ಆದ್ದರಿಂದ ಈ ಔಷಧಿಗಳ ಮೇಲೆ ಒಂದು ನಿರ್ಬಂಧವನ್ನು ವಿಧಿಸಿ ವೈದ್ಯರ ಸೂಚನೆಯ ಮೇರೆಗೆ ಮಾತ್ರ ಮಾರ ಬೇಕೆಂದು ಬರೆಯಲಾಗಿರುತ್ತದೆ.

ವೈದ್ಯರಿಂದ ಸೂಚಿಸಲ್ಪಟ್ಟ ಔಷಧಿಗಳು ಸರಿಯಿಲ್ಲವೆಂದೂ, ತಾವೇ ವಿಧಿಸಿಕೊಂಡಿರುವ ಔಷಧಿಯೇ ಸರಿಯೆಂದೂ ಬಹಳಷ್ಟು ಮಂದಿ ತಿಳಿದಿರುತ್ತಾರೆ ಇಂಥ ಜನರು ಇನ್ನೂ ಹೆಚ್ಚು ಅಪಾಯಕಾರಿಗಳು.

ಏನೇ ಆದರೂ ಆಧುನಿಕ ಔಷಧಿಗಳ ಸೇವನೆ ದಿನೇ ದಿನೇ ಹೆಚ್ಚಾಗುತ್ತಿದೆ ಯೆಂಬುದು ಸ್ಪಷ್ಟ ಮತ್ತು ನಿಜ. ಸೂಕ್ಷ್ಮ ವಾಗಿ ಪರಿಶೀಲಿಸಿದರೆ, ಈ ಹೆಚ್ಚಿನ ಸೇವನೆಗೆ ಮೂಲತಃ ಆಧುನಿಕ ಔಷಧಿಯೇ ಕಾರಣ. "ಈ ಔಷಧಿಗಳು ರೋಗ ಮುಕ್ತರನ್ನಾಗಿಸು ವುದಿಲ್ಲ. ಅವು ಕೇವಲ ರೋಗ ಲಕ್ಷಣಗಳನ್ನು ದಮನಮಾಡುತ್ತವೆ. ರೋಗ ಲಕ್ಷಣಗಳು ಮಾಯವಾಗುತ್ತವೆ. ಶರೀರದ ಶಕ್ತಿ ಕುಂದು ತ್ತದೆ. ದಮನಮಾಡಿದ ರೋಗದ ವಿಷ ಶರೀರದಲ್ಲೇ ಉಳಿಯುತ್ತದೆ. ಸ್ವಲ್ಪ ಕಾಲದ ನಂತರ ಕೆಮ್ಮು, ಯಕೃತ್ತಿನ ನೋವು, ಆಮ್ಲ ಪಿತ್ತ ಮತ್ತು ಇತರ ಜೀರ್ಣಾಂಗಗಳಿಗೆ, ಮೂತ್ರಪಿಂಡಕ್ಕೆ, ಚರ್ಮಕ್ಕೆ ಸಂಬಂಧಿಸಿದ ರೋಗಗಳು, ಹೆಚ್ಚಿದ ರಕ್ತದೊತ್ತಡ, ಅಭಿದಮನಿ ಮತ್ತು ಅಪಧಮನಿಯನ್ನು ಗಡಸುಗೊಳಿಸುವಿಕೆ, ಸಂಕುಚಿತಗೊಳಿಸು ವಿಕೆ ಮುಂತಾದುವಕ್ಕೆ ಈ ವಿಷ ಕಾರಣ ವಾಗುತ್ತದೆ.

ಆಗ ರೋಗಿ ಪುನಃ ಪುನಃ ಮಾತ್ರೆಗಳನ್ನು ತೆಗೆದುಕೊಳ್ಳಲಾರಂಭಿಸುತ್ತಾನೆ. ಆಧುನಿಕ ಔಷಧಿಗಳನ್ನೇ ಅವಲಂಬಿಸಿರುವವರು, ಔಷಧಿ ಸೇವನೆ ವಿಷಮ ಚಕ್ರವಾಗುವ ವರೆಗೂ ಔಷಧಿ ಸೇವನೆ ಮಾಡುತ್ತಲೇ ಹೋಗುತ್ತಾರೆ. ಗಾಂಧೀಜಿಯವರ ಮಾತು ಎಷ್ಟು ಸರಿ. ಅವರು ಹೇಳಿದ್ದರು "ಔಷಧಿಯ ಶೀಷೆ ಒಮ್ಮೆ ಮನೆ ಹೊಕ್ಕರೆ ಸಾಕು ಎಂದೆಂದಿಗೂ ಅದು ಅಲ್ಲೇ ಇದ್ದುಬಿಡು ತ್ತದೆ." ಈ ಕಾರಣದಿಂದಲೇ ಅವರು ತಮ್ಮ

ಅನುಯಾಯಿಗಳಿಗೆ ಪ್ರಕೃತಿ ಚಿಕಿತ್ಸೆಯನ್ನು ಸಮರ್ಥಿಸಿದ್ದರು.

ಗಾಂಧೀಜಿಯವರ ಈ ಹೇಳಿಕೆಯನ್ನು ಆಧುನಿಕ ಔಷಧಿಕ್ಷೇತ್ರದಲ್ಲಿ ಸುಪ್ರಸಿದ್ಧರಾದ ಡಾ|| ಕುಮಾರ ಸ್ವಾಮಿಯವರು ಸಮರ್ಥಿಸುತ್ತಾರೆ. "ರೋಗಿಗಳನ್ನು ರೋಗ ಮುಕ್ತರನ್ನಾಗಿ ಮಾಡಲು ಅತ್ಯಂತ ಪರಿಣಾಮಕಾರಿ ಔಷಧಿಗಳನ್ನು ಕೊಡುವ ಪ್ರವೃತ್ತಿ ಹೆಚ್ಚುತ್ತಿದೆ. ರೋಗಮುಕ್ತಿಗೋಸ್ಕರ ಸೇವಿಸಿದ ಔಷಧಿಯ ದುಷ್ಪರಿಣಾಮ ಒಂದು ಹೊಸ ರೋಗೋತ್ಪತ್ತಿಗೆ ಕಾರಣವಾಗಬಹುದು.

ನಿಜವಾಗಿ ಹೇಳಬೇಕೆಂದರೆ, ನಮ್ಮ ಅಜಾಗರೂಕತೆಯೇ ನಮ್ಮ ಕಾಯಿಲೆಗೆ ಕಾರಣ. ಇಂದು ಅನೇಕ ರೀತಿಯ ಚಿಕಿತ್ಸಾಪದ್ಧತಿಗಳಿವೆ. ಉದಾಹರಣೆಗೆ, ಹೋಮಿಯೋಪತಿ, ಇಂಗಿಷ್ ಔಷಧಿ (ಆಲೋಪತಿ) ಆಯುರ್ವೇದ, ಜೀವರಸಾಯನ ವಿಜ್ಞಾನ, ಗ್ರೀಕ್ ಪದ್ಧತಿ, ಮುಂತಾದುವು. ಇವುಗಳು ತಮ್ಮದೇ ಆದ ಭಿನ್ನಭಿನ್ನ ಮೂಲಭೂತ ಸೂತ್ರಗಳನ್ನು, ತತ್ವಗಳನ್ನು ಹೊಂದಿವೆ.

ಇವೆಲ್ಲವುಗಳಿಗಿಂತ 'ಆಯುರ್ವೇದ ಪದ್ಧತಿ' ಅತ್ಯಂತ ಸರಳವೂ, ತರ್ಕಬದ್ಧವೂ ಆಗಿದೆ. ಸರೀರದಲ್ಲಿ ಅಪ್ರಯೋಜಕ ಹಾಗೂ ಅನಾವಶ್ಯಕ ಸರಕಿನ ಸಂಗ್ರಹದಿಂದ ರೋಗೋತ್ಪತ್ತಿಯಾಗುತ್ತದೆ.

ಕುಪಿತಾನಾಂ ಹಿ ದೋಷಾನಾಂ ಶರೀರೆ
ಪರಿಧಾವಿತಮ್
ಯತ್ರಸಂಗ ಖವೈಗುಣ್ಯಾತ್ ವ್ಯಾಧಿಸ್ತ
ತ್ರೋಪಜಾಯತೇ ||
ಸರ್ವೆ ರೋಗಾಃ ಮಂದಾಗ್ನಿಷ್ಟ ||

ಈ ಪದ್ಧತಿಯ ಪ್ರಕಾರ ಶರೀರದಲ್ಲಿ ಅತಿ ಹೆಚ್ಚಿನ ವಿಷ ಶೇಖರಣೆ ಆಗಿದೆಯೆಂಬುದನ್ನು ರೋಗದ ಆರಂಭ ಸೂಚಿಸುತ್ತದೆ. ಅದನ್ನು ಹೊರದೂಡುವ ಕಾಲ ಬಂದಿದೆ. ಇಲ್ಲವಾದಲ್ಲಿ ಶರೀರ ರೋಗಗ್ರಸ್ತವಾಗುತ್ತದೆ ಎಂಬ ಸೂಚನೆಯನ್ನು ಕೊಡುತ್ತದೆ. ಶರೀರವನ್ನು ಶುದ್ಧಗೊಳಿಸುವ ಪ್ರಕ್ರಿಯೆಯಲ್ಲಿ ವಿವಿಧ ರೀತಿಯ ಸ್ನಾನ, ಪಥ್ಯ ಮತ್ತು ಉಪವಾಸ ಪ್ರಕೃತಿಗೆ ಸಹಾಯಮಾಡುವುದು.

ಆದರೆ ಇಂದಿನ ದಿನಗಳಲ್ಲಿ ಔಷಧಿಸೇವನೆಯಿಂದ ಸೋತುಹೋದಾಗ ಮಾತ್ರ ಜನ ಆಯುರ್ವೇದದ ಸಹಾಯ ಪಡೆಯಲು ಬರುತ್ತಾರೆ. ನಾವು ಸ್ವಾಭಾವಿಕ ಜೀವನವನ್ನು ನಡೆಸುತ್ತಾ ಆರೋಗ್ಯದ ಮೂಲ ನಿಯಮಗಳಾದ ದಿನಚರ್ಯೆ, ಋತುಚರ್ಯೆಗಳನ್ನು ಅನುಸರಿಸಿದರೆ ನಾವು ಎಂದಿಗೂ ರೋಗಗ್ರಸ್ತರಾಗುವುದೇ ಇಲ್ಲ.

ಯಾರಲ್ಲಿ ತ್ರಿದೋಷ (ವಾತ, ಪಿತ್ತ, ಕಫ)ಗಳು ಸಮವಾಗಿರುತ್ತವೋ, ಸಮಾಗ್ನಿಯಿರುತ್ತದೋ, ಸಪ್ತಧಾತುಗಳು (ರಸ, ರಕ್ತ, ಮಾಂಸ, ಮೇಧ, ಅಸ್ತಿಮಜ್ಜ ಮತ್ತು ಶುಕ್ರ) ಸಮನಾಗಿರುತ್ತದೋ ಮತ್ತು ಮಲಕ್ರಿಯ (ಸ್ವೇದ, ಮೂತ್ರ ಮಲ ವಿಸರ್ಜನೆ) ಸರಿಯಾಗಿರುತ್ತದೆಯೋ, ಯಾರಲ್ಲಿ ಆತ್ಮ, ಇಂದ್ರಿಯ, ಮನಸ್ಸು ಸೌಮ್ಯವಾಗಿರುತ್ತದೋ ಅಂತಹ ವ್ಯಕ್ತಿಯನ್ನು ಮಾತ್ರ ಸ್ವಸ್ಥ ಎನ್ನಬಹುದು.

ಆದುದರಿಂದಲೇ "ಚಿಕಿತ್ಸೆಗಿಂತ ರೋಗ ನಿರೋಧ ಉತ್ತಮ".

ಜಗತ್ಪ್ರಸಿದ್ಧ ನೀತಿಕಥೆಗಳ ಕರ್ತೃ ಈಸೋಪ್

ವಿ. ಶ್ರೀನಿವಾಸ

ನಂ. ೮/೪೫೫, ಜಕ್ಕಸಂದ್ರ ಬಡಾವಣೆ
೧ ನೇ ಬ್ಲಾಕ್, ೧ ನೇ ಮೇನ್, ಕೋರಮಂಗಲ
ಬೆಂಗಳೂರು–೫೬೦ ೦೩೪

"ತೋಳ ಮತ್ತು ಕುರಿಮರಿ", "ಚಿನ್ನದ ಮೊಟ್ಟೆ ಇಡುತ್ತಿದ್ದ ಬಾತುಕೋಳಿ," "ತೋಳ ಬಂತು, ತೋಳ ಬಂತು ಎಂದು ಸುಳ್ಳು ಹೇಳುತ್ತಿದ್ದ ಹುಡುಗ", "ಇರುವೆ ಮತ್ತು ಮಿಡತೆ," "ಬಾಯಾರಿದ ಮೇಕೆ ಬಾವಿಗೆ ಧುಮುಕಿದ್ದು" ಇವೇ ಮುಂತಾದ ಸುಂದರ ನೀತಿ ಕಥೆಗಳನ್ನು ಕೇಳದವರಾರು?

ಶತ–ಶತಮಾನಗಳಿಂದಲೂ ಆಬಾಲ ವೃದ್ಧರಾಗಿ ಎಲ್ಲರೂ ಎಲ್ಲ ದೇಶಗಳ ಜನರೂ ಈ ನೀತಿ ಕಥೆಗಳನ್ನು ಓದಿ, ಕೇಳಿ ಆನಂದಿಸಿದ್ದಾರೆ; ಮನರಂಜನೆ ಮತ್ತು ಮನೋವಿಕಾಸಗಳನ್ನು ಪಡೆದಿದ್ದಾರೆ. ಮಕ್ಕಳಿಗಂತೂ ಈ ಕಥೆಗಳು ಅಚ್ಚು-ಮೆಚ್ಚು ಅತ್ಯಂತಪ್ರಿಯ, ಇಂತ ನೂರಾರು ಲೋಕ ವಿಖ್ಯಾತ, ಚಿರಪರಿಚಿತ ನೀತಿ ಕಥೆಗಳ ಕರ್ತೃ ಈಸೋಪ್.

ಕಟ್ಟು ಕಥೆಗಳ ಕಂತೆ:

ವಿಶ್ವಸಾಹಿತ್ಯದಲ್ಲಿ ಅಜರಾಮರನಾಗಿರುವ ಈ ಮಹಾನ್ ಕಥೆಗಾರನ ಜೀವಿತದ ಬಗ್ಗೆ ನಮಗೆ ತಿಳಿದಿರುವುದು ಅತ್ಯಲ್ಪ. ಈ ಅತ್ಯಲ್ಪವೂ ಖಚಿತವಾದ, ನಿಖರವಾದ ಮಾಹಿತಿಯಲ್ಲ. ಈಸೋಪ್ ಒಬ್ಬ ಕಾಲ್ಪನಿಕ ವ್ಯಕ್ತಿ ಎಂದು ಹೇಳುವವರೂ ಇಲ್ಲದಿಲ್ಲ. ಈಸೋಪನ ಜೀವನ, ಜೀವನಚರಿತ್ರೆ ಕಟ್ಟು ಕಥೆಗಳ ಅಂತೆ–ಕಂತೆಗಳ ಬೊಂತೆ! ವಿವರಗಳು, ವಿವಾದಗಳು ಏನೇ ಇರಲಿ, ಒಂದು ಮಾತಂತೂ ಸತ್ಯ, ನಿರ್ವಿವಾದ. ಈಸೋಪ್‌ನ ನೀತಿಕಥೆಗಳ ಕರ್ತೃ ಯಾರೇ ಆಗಿರಲಿ, ಆತ ಪ್ರಚಂಡ ಬುದ್ಧಿಶಾಲಿ, ಅದ್ವಿತೀಯ ಮೇಧಾವಿ ಮತ್ತು ಅಸಾಮಾನ್ಯ ಪ್ರತಿಭಾವಂತ. ಜಗತ್ತಿನಲ್ಲಿ ಇಂತ ಪ್ರತಿಭಾವಂತರು ಬಹುಮಂದಿ ಹುಟ್ಟಿಲ್ಲ!

ಜನನ:

ಈ ಅಸಾಧಾರಣ ವ್ಯಕ್ತಿ– ಈಸೋಪ್– ಪ್ರಾಚೀನ ಗ್ರೀಸ್ ದೇಶದ ಫ್ರೀಜಿಯ ಪ್ರಾಂತದ ಮುಖ್ಯ ಪಟ್ಟಣವಾಗಿದ್ದ ಕಾಟಿಯಾಮ ಎಂಬಲ್ಲಿ ಈಗ ೨೫ ಶತಮಾನಗಳಿಗೂ ಹಿಂದೆ ಜನಿಸಿದನು. ಈತನ ಕಾಲ ಕ್ರಿ. ಪೂ. ೬೨೦ ರಿಂದ ಕ್ರಿ. ಪೂ. ೫೬೪ ಎಂದು ವಿದ್ವಾಂಸರ ಅಭಿಪ್ರಾಯ.

ಬಡ, ಕುರೂಪಿ ಗುಲಾಮ:

ಮನುಷ್ಯ ಕುಲವು ಉಳಿದಿರುವಷ್ಟು ಕಾಲವೂ ಉಳಿದಿರುವ ಈ ಅಮರ ನೀತಿಕಥೆಗಳ ಕರ್ತೃ ಈಸೋಪ್ ಕವಿಯಲ್ಲ, ಸಾಹಿತಿ

ಯಲ್ಲ, ರಾಜ-ಮಹಾರಾಜನಂತೂ ಮೊದಲೇ ಅಲ್ಲ. ಆತನೊಬ್ಬ ಗುಲಾಮ ಮಾತಾ-ಪಿತೃಗಳಿಗೆ ಜನಿಸಿದ ಗುಲಾಮ. ಪ್ರಾಚೀನ ಗ್ರೀಸ್‌ನಲ್ಲಿ ಶ್ರೀಮಂತರು ಗುಲಾಮರನ್ನು ದನ-ಕರುಗಳಂತೆ, ಪಶು-ಪ್ರಾಣಿಗಳಂತೆ ಮಾರಾಟ ಮಾಡುತ್ತಿದ್ದರು. ಇತರ ಗುಲಾಮರಂತೆಯೇ ಈಸೋಪನೂ ಒಡೆಯನಿಂದ ಒಡೆಯನಿಗೆಮಾರಲ್ಪಟ್ಟವನು.

ನಿಕೃಷ್ಟ ಗುಲಾಮಗಿರಿ. ಸಾಲದ್ದಕ್ಕೆ ಈಸೋಪ್ ಅತ್ಯಂತ ಕುರೂಪಿ, ಬಲಹೀನ. ಆತನ ಅಸಹ್ಯಾಕೃತಿಯನ್ನು ಕಂಡು, ಹೆಂಗಸರು-ಮಕ್ಕಳು ಕಣ್ಣು ಮುಚ್ಚಿಕೊಳ್ಳುತ್ತಿದ್ದರೆಂದು ಹೇಳಿಕೆ ಇದೆ. ಅವನ ಕಡೆಯ ಒಡೆಯ ತತ್ವಜ್ಞಾನಿ ಝಾಂತಸ್ ತನ್ನನ್ನು ಖರೀದಿಸಲು ಹಿಂದೆ-ಮುಂದೆ ನೋಡುತ್ತಿದ್ದಾಗ ಈಸೋಪ್ "ನನ್ನಿಂದ ಮತ್ತೇನು ಕೆಲಸವಾಗದಿದ್ದರೂ ನಾನು ನಿಮ್ಮ ಮಕ್ಕಳನ್ನು ಅಂಜಿಸಬಲ್ಲೆ" ಎಂದಿದ್ದನಂತೆ.

ಅಸಾಧಾರಣ ಬುದ್ಧಿಮತ್ತೆ :

ಈಸೋಪನ ಅಸಾಧಾರಣ ಬುದ್ಧಿಮತ್ತೆ, ಪ್ರಚಂಡ ಮೇಧಾಶಕ್ತಿ ಮತ್ತು ಅಪೂರ್ವ ಪ್ರತಿಭೆಯ ಬಗ್ಗೆ ಅಸಂಖ್ಯಾತ ಪ್ರಸಂಗಗಳು, ಸ್ವಾರಸ್ಯಪೂರ್ಣ ಕಥೆಗಳು ಪ್ರಚಲಿತವಾಗಿವೆ. ಅಂಥ ಕಥೆಗಳ ಪೈಕಿ ಒಂದೆರಡನ್ನು ಮಾತ್ರ ಸಂಕ್ಷಿಪ್ತವಾಗಿ ಗಮನಿಸಬಹುದು.

ಈಸೋಪ್ ತನ್ನ ಮೊದಲನೆಯ ಒಡೆಯನ ಗುಲಾಮನಾಗಿದ್ದಾಗ ಆತನ ಅಂಜೂರದ ತೋಟದಲ್ಲಿ ಕೆಲಸ ಮಾಡುತ್ತಿದ್ದ. ಅವನ ಜೊತೆಯಲ್ಲಿ ಕೆಲಸ ಮಾಡುತ್ತಿದ್ದ ಮತ್ತೊಬ್ಬ ಗುಲಾಮ ಅಂಜೂರದ ಹಣ್ಣುಗಳನ್ನೆಲ್ಲ ತಾನೇ ಕಿತ್ತು ತಿಂದು, ನಿರಪರಾಧಿ ಈಸೋಪನ ಮೇಲೆ ಆರೋಪ ಹೊರಿಸಿದ. ಒಡೆಯನಿಗೆ ಈಸೋಪನ ಮೇಲೆ ಸಿಟ್ಟು ಬಂತು. ಅವನನ್ನು ದಂಡಿಸಲು ಸಿದ್ಧನಾದ.

ಅಷ್ಟರಲ್ಲಿ ಈಸೋಪ್ "ಒಡೆಯ, ನನಗೆ ಸ್ವಲ್ಪ ಕಾಲಾವಕಾಶ ಕೊಡಿ. ನಾನು ನಿರಪರಾಧಿಯೆಂಬುದನ್ನು ಸಾಬೀತುಪಡಿಸುತ್ತೇನೆ. ನಾನು ತಪ್ಪಿತಸ್ಥನೆಂದು ಸಿದ್ಧವಾದರೆ, ತಾವು ನನಗೆ ಬೇಕಾದ ಶಿಕ್ಷೆ ಕೊಡಬಹುದು" ಎಂದು ಅಂಗಲಾಚಿದ. ಒಡೆಯ ಒಪ್ಪಿದ.

ಈಸೋಪ್ ಒಂದು ಪಾತ್ರೆಯಲ್ಲಿ ಬಿಸಿನೀರು ತಂದು, ಅದಕ್ಕೆ ಒಂದು ಹಿಡಿ ಉಪ್ಪು ಹಾಕಿ ಗಟಗಟನೆ ಕುಡಿದುಬಿಟ್ಟ. ಕೂಡಲೆ ಬಾಯಿಗೆ ಬೆರಳುಹಾಕಿ ವಾಂತಿ ಮಾಡಿಬಿಟ್ಟ! ವಾಂತಿಯಲ್ಲಿ ಹಣ್ಣಿನ ತುಣುಕುಗಳು ಇರಲಿಲ್ಲ. ಈಸೋಪ್ ನಿರಪರಾಧಿಯೆಂಬುದು ದೃಢಪಟ್ಟಿತು. ಒಡೆಯ ತನ್ನ ಗುಲಾಮನ ಅಸಾಧಾರಣ ಬುದ್ಧಿ ಶಕ್ತಿಯನ್ನು ಮೆಚ್ಚಿದ!

ಈಸೋಪನ ಕಡೆಯ ಮಾಲೀಕ ಝಾಂತಸ್‌ನಂತೂ ತತ್ವಜ್ಞಾನಿ. ಅವನು ತನ್ನ ಅಸಾಮಾನ್ಯ ಗುಲಾಮನ ಅಸಾಧಾರಣ ಬುದ್ಧಿಶಕ್ತಿಯನ್ನು, ಪ್ರತಿಭೆಯನ್ನು ಸುಲಭವಾಗಿ ಗುರುತಿಸಿದ. ಅವನನ್ನು ಹೊರಗಿನ ಕೆಲಸಗಳಿಗೆ ಕಳುಹಿಸದೆ ಮನೆಕೆಲಸಕ್ಕಷ್ಟೇ ನೇಮಿಸಿದ. ಒಮ್ಮೆ ಝಾಂತಸ್ ಕುಡಿದ ಅಮಲಿನಲ್ಲಿ ಒಂದು ಪಂದ್ಯ ಕಟ್ಟಿದ. ತಾನು ಸಮುದ್ರದ ನೀರನ್ನೆಲ್ಲ ಕುಡಿದುಬಿಡುವುದಾಗಿಯೂ ಒಂದು ವೇಳೆ ಪಂದ್ಯದಲ್ಲಿ ತಾನು ಸೋತರೆ ತನ್ನ ಎದುರಾಳಿಗೆ ತನ್ನ ಆಸ್ತಿ

ಸಾಸ್ತಿಗಳನ್ನೆಲ್ಲ ಬಿಟ್ಟುಕೊಡುವುದಾಗಿಯೂ ಸವಾಲು ಹಾಕಿದ. ಅವನ ಉನ್ಮತ್ತ ಪಂಥಾಹ್ವಾನವನ್ನು ಸ್ವೀಕರಿಸಲು ಮೊದಮೊದಲು ಯಾರೂ ಮುಂದೆ ಬರಲಿಲ್ಲವಾದರೂ, ಕಡೆಗೆ ಒಬ್ಬ ಒಪ್ಪಿಯೇಬಿಟ್ಟ!

ಮಾರನೆಯ ದಿನ ಪಂದ್ಯ–ಸಮುದ್ರವನ್ನು ಕುಡಿಯುವ ಪಂದ್ಯ! ಠ್ಷಾಂತಸ್‌ನ ಮನೆ ಮಂದಿಯೆಲ್ಲ ದಿಗ್ಭ್ರಮೆಗೊಂಡು, ಜಾಣ ಈಸೋಪನ ಮೊರೆಹೊಕ್ಕು, ಈ ಮನೆಹಾಳು ಪಂದ್ಯವನ್ನು ಹೇಗಾದರೂ ಮಾಡಿ ತಪ್ಪಿಸಬೇಕೆಂದು ಅಂಗಲಾಚಿದರು. ಈಸೋಪ್ ಒಪ್ಪಿದ.

ಪಂದ್ಯವನ್ನು ವೀಕ್ಷಿಸಲು ನೆರೆದಿದ್ದ ಜನರ ಮುಂದೆ ಈಸೋಪ್ ಬಂದು ನಿಂತು "ಅಯ್ಯಾ, ನಿಮಗೆಲ್ಲ ತಿಳಿದಿರುವಂತೆ ಸಮುದ್ರಕ್ಕೆ ಹಲವಾರು ನದಿಗಳು ಬಂದು ಸೇರುತ್ತವೆ. ನನ್ನ ಒಡೆಯ ಸವಾಲು ಕಟ್ಟಿರುವುದು ಸಮುದ್ರವನ್ನು ಕುಡಿಯಲು ಮಾತ್ರ. ಸಮುದ್ರಕ್ಕೆ ಬಂದು ಸೇರುವ ನದಿಗಳ ನೀರನ್ನೆಲ್ಲ ಕುಡಿಯಲು ಅಲ್ಲ. ಆದ್ದರಿಂದ, ನದಿಗಳ ನೀರು ಸಮುದ್ರಕ್ಕೆ ಹರಿಯದಂತೆ ನದಿಗಳನ್ನು ಬೇರೆ ಕಡೆಗೆ ತಿರುಗಿಸಿ" ಎಂದುಬಿಟ್ಟ.

ಪಂದ್ಯ ರದ್ದಾಯಿತೆಂದು ಪ್ರತ್ಯೇಕವಾಗಿ ಹೇಳಬೇಕೇ? ಅಂದಿನಿಂದಲೇ ಈಸೋಪನ ದಾಸ್ಯ ವಿಮೋಚನೆ ಆಯಿತು. ಆತ ನಾಗರಿಕ ಹಕ್ಕು–ಬಾಧ್ಯತೆಗಳನ್ನು ಪಡೆದು ಸ್ವತಂತ್ರ ಪ್ರಜೆಯಾದ.

ಅಡಿಯ ದೇಶಕ್ಕೆ ರಾಯಭಾರಿ :

ತನ್ನ ಸ್ವಪ್ರತಿಭೆಯಿಂದಲೇ, ಅಸಾಧಾರಣ ಮೇಧಾಶಕ್ತಿಯಿಂದಲೇ ಸ್ವತಂತ್ರ ಪ್ರಜೆಯಾದ ಈಸೋಪನು ಆ ವೇಳೆಗಾಗಲೇ ಗ್ರೀಸ್ ದೇಶದಲ್ಲೆಲ್ಲ ಮನೆಮಾತಾಗಿದ್ದ. ಈತನ ಅಸಾಧಾರಣ ಬುದ್ಧಿಶಕ್ತಿಯ ಬಗ್ಗೆ ಕೇಳಿದ್ದ ಅಡಿಯ ದೇಶದ ದೊರೆ ಕ್ರೀಸಸ್ ಈತನನ್ನು ಒತ್ತಾಯ ಪೂರ್ವಕವಾಗಿ ತನ್ನ ಆಸ್ಥಾನಕ್ಕೆ ಕರೆಸಿಕೊಂಡ.

ಕ್ರೀಸಸ್ ದೊರೆಯ ಆಸ್ಥಾನದಲ್ಲಿದ್ದಾಗಲೇ ಈಸೋಪ್ ತನ್ನ ಅತ್ಯಂತ ಪ್ರಸಿದ್ಧ ಕಥೆಗಳನ್ನು ರಚಿಸಿದ. ಈ ಕಥೆಗಳು ಗ್ರೀಸ್ ದೇಶದಲ್ಲೆಲ್ಲ ಹರಡಿದುವು. ರಾಜನ ಆಸ್ಥಾನದಲ್ಲಿ ಈಸೋಪ್ ಆಸ್ಥಾನ ಪಂಡಿತರನ್ನು ಮತ್ತು ತತ್ವಜ್ಞಾನಿಗಳನ್ನು ವಾದದಲ್ಲಿ ಸೋಲಿಸಿ, ತನ್ನ ಅಸಾಧಾರಣ ಬುದ್ಧಿ ಚಾತುರ್ಯಕ್ಕಾಗಿ ಎಲ್ಲರ, ಇಡೀ ದೇಶದ ಮೆಚ್ಚುಗೆ ಗಳಿಸಿದ.

ರಾಯಭಾರ ಮತ್ತು ದುರಂತ ಮರಣ

ದೊರೆ ಕ್ರೀಸಸ್ ಜಾಣ ಈಸೋಪನಿಗೆ ಕೆಲವು ಅತಿಮುಖ್ಯವಾದ ರಾಯಭಾರ ಕಾರ್ಯಗಳನ್ನು ವಹಿಸುತ್ತಿದ್ದ.

ಒಮ್ಮೆ ದೊರೆ ಆತನನ್ನು ಡೆಲ್ಫಿಗೆ ಕಳುಹಿಸಿದ. ಅಲ್ಲಿ ಅಪೋಲೋ ದೇವಮಂದಿರದ ಪೂಜಾರಿಗಳಿಗೆ ರಾಜನು ಕೊಟ್ಟು ಕಳುಹಿಸಿದ್ದ ಭಾರಿ ಮೊತ್ತದ ಹಣವನ್ನು ಹಂಚುವ ವಿಷಯದಲ್ಲಿ ಈಸೋಪನಿಗೂ ಪೂಜಾರಿಗಳಿಗೂ ಮನಸ್ತಾಪವುಂಟಾಯಿತು. ರೊಚ್ಚಿಗೆದ್ದ ಪೂಜಾರಿಗಳು ಈಸೋಪನ ಮೇಲೆ ಬಿದ್ದು, ಆತನ ಬಳಿ ಇದ್ದ ಹಣವನ್ನೆಲ್ಲ ಕಸಿದುಕೊಂಡು, ಆತನು ಎಷ್ಟೆಷ್ಟು ಪರಿಯಲ್ಲಿ ಮನವಿ ಮಾಡಿಕೊಂಡರೂ ಕಿವಿಗೊಡದೆ, ಆತನನ್ನು ಒಂದು ಗುಡ್ಡದ ತುದಿ

ಯಿಂದ ಪ್ರಪಾತಕ್ಕೆ ತಳ್ಳಿ ಕೊಂದುಹಾಕಿದರು. ಇದು ಪ್ರಾಚೀನ ಗ್ರೀಕ್ ಇತಿಹಾಸಕಾರರ ಹೆರೊಡೋಟಸ್‌ನ ಹೇಳಿಕೆ.

ಬದುಕಿನುದ್ದಕ್ಕೂ ಈಸೋಪನನ್ನು ರಕ್ಷಿಸಿ ಕಾಪಾಡಿ, ಗುಲಾಮಗಿರಿಯಿಂದ ರಾಯಭಾರಿ ಪದವಿಗೆ ಏರಿಸಿದ ಅವನ ಅಸಾಧಾರಣ ಬುದ್ಧಿಶಕ್ತಿ ಅಂತ್ಯಕಾಲದಲ್ಲಿ ಪ್ರಯೋಜನಕ್ಕೆ ಬಾರದೆ ಹೋದದ್ದು ಎಂತಹ ದುರಂತ! ಈ ದುರಂತ ಸಂಭವಿಸಿದ್ದು ಕ್ರಿ.ಪೂ. ೫೬೪ರ ಸರಿಸುಮಾರಿನಲ್ಲಿ. ಆಗ ಈಸೋಪನಿಗೆ ೬೦ ವರ್ಷ ಕೂಡ ತುಂಬಿರಲಿಲ್ಲ.

ಈಸೋಪನ ನೀತಿಕಥೆಗಳು

ಈಸೋಪ್ ಹೇಳಿದ ನೀತಿಕಥೆಗಳನ್ನು ಮೊದಲಿಗೆ ಗ್ರೀಕ್ ಭಾಷೆಯಲ್ಲಿ ಬರೆದಿಟ್ಟವನು ಅಥೆನ್ಸಿನ ಫೆಲರೂಸ್ ಎಂಬಾತ. ಅವನ ಕಾಲ ಕ್ರಿ. ಪೂ. ೩೨೦. ಅಂದರೆ, ಈಸೋಪನ ನೀತಿಕಥೆಗಳು ಆತನು ಕಾಲವಾದ ಎರಡು ಶತಮಾನಗಳ ನಂತರ ಗ್ರಂಥಸ್ಥವಾದುವೆಂದಾಯಿತು. ಅಲ್ಲಿಯವರೆಗೆ ಅವು ಜನರ ನೆನಪಿನ ಉಗ್ರಾಣದಲ್ಲಿಯೂ ಜನರ ನಾಲಗೆಗಳ ಮೇಲೆಯೂ ಇದ್ದುವು! ಈ ಕಾರಣದಿಂದಲೇ ಈಸೋಪನ ನೀತಿಕಥೆಗಳು ಹಲವಾರು ರೂಪಾಂತರಗಳನ್ನು ಪಡೆದಿರಬಹುದು.

ಮುಂದೆ, ಕ್ರಿ.ಶ. ಒಂದನೆಯ ಶತಮಾನದಲ್ಲಿ ರೋಮ್ ಪಟ್ಟಣಕ್ಕೆ ಗುಲಾಮನಾಗಿ ಬಂದು ವಿಮೋಚನೆ ಪಡೆದ ಫೇಡರಸ್ ಎಂಬುವವನು ಈಸೋಪನ ನೀತಿಕಥೆಗಳನ್ನು ಲ್ಯಾಟಿನ್ ಭಾಷೆಗೆ ಅನುವಾದಿಸಿದ. ಈ ನೀತಿಕಥೆಗಳನ್ನು ಅವು ಈಗ ಇರುವ ರೂಪದಲ್ಲಿ ಸಿದ್ಧಪಡಿಸಿದವನು ೧೪ನೆಯ ಶತಮಾನದ ಓರ್ವ ಕ್ರೈಸ್ತಗುರು. ಈಗಂತೂ ಈ ನೀತಿಕಥೆಗಳು ಜಗತ್ತಿನ ಎಲ್ಲ ಪ್ರಮುಖ ಭಾಷೆಗಳಿಗೆ ಅನುವಾದಿಸಲ್ಪಟ್ಟಿವೆ.

ಪ್ರಾಚೀನ ಪ್ರಸಿದ್ಧಿ

ಪ್ರಾಚೀನ ಗ್ರೀಸ್‌ನಲ್ಲಿಯೇ ಈಸೋಪನ ನೀತಿಕಥೆಗಳು ತುಂಬ ಪ್ರಸಿದ್ಧವಾಗಿದ್ದುವು. ಪ್ರಾಚೀನ ಗ್ರೀಕ್ ನಾಟಕಕಾರ ಅರಿಸ್ಟೋಫೇನೀಸ್ (ಸುಮಾರು ಕ್ರಿ. ಪೂ. ೪೫೦–೩೮೮) ತನ್ನ ನಾಟಕದ ಪಾತ್ರಗಳ ಬಾಯಿಂದ ಈಸೋಪನ ನೀತಿಕಥೆಗಳನ್ನು ಹೇಳಿಸುತ್ತಿದ್ದ. ಮಹಾಜ್ಞಾನಿ ಸಾಕ್ರೆಟಿಸ್ ಈಸೋಪನ ಹಲವು ನೀತಿಕಥೆಗಳನ್ನು ಪದ್ಯರೂಪದಲ್ಲಿ ಬರೆದ. ತತ್ವಜ್ಞಾನಿ ಪ್ಲೇಟೊ ಕೂಡ ಈಸೋಪನ ಕಥೆಗಳ ಬಗ್ಗೆ ಪ್ರಸ್ತಾಪಿಸಿದ್ದಾನೆ. ಮಾರ್ಟಿನ್ ಲೂಥರ್ ಈ ಕಥೆಗಳನ್ನು ಬೈಬಲ್ ಅನಂತರದ ಶ್ರೇಷ್ಠ ಗ್ರಂಥವೆಂದು ಹೊಗಳಿದ್ದಾನೆ.

ಈಸೋಪನ ಪ್ರತಿಮೆ

ಈಸೋಪ್ ಕಾಲವಾದ ಎರಡು ಶತಮಾನಗಳ ನಂತರ, ಅಥೆನ್ಸ್ ನಗರದ ಮಹಾಜನರು ನಗರದ ಪ್ರಮುಖ ಭಾಗವೊಂದರಲ್ಲಿ ಆತನ ಶಿಲಾಮೂರ್ತಿಯೊಂದನ್ನು ಪ್ರತಿಷ್ಠಾಪಿಸಿದರು. ಆಗಿನ ಕಾಲದ ಪ್ರಸಿದ್ಧ ಶಿಲ್ಪಿಯೊಬ್ಬ ಈ ಶಿಲಾಮೂರ್ತಿಯನ್ನು ಕಡೆದಿದ್ದನು.

ಈಸೋಪನ ನೀತಿಕಥೆಗಳ ವೈಶಿಷ್ಟ್ಯ

ಈಸೋಪ್ ಉದಾತ್ತ ನೀತಿತತ್ವಗಳನ್ನು, ಜೀವನ ವಿವೇಕವನ್ನು, ವ್ಯವಹಾರಜ್ಞಾನ

ವನ್ನು, ಸೋದಾಹರಣವಾಗಿ, ಪಶು-ಪ್ರಾಣಿ-ಪಕ್ಷಿ-ಕೀಟಗಳನ್ನೊಳಗೊಂಡ ಪುಟ್ಟ,ಪುಟ್ಟ ಸ್ವಾರಸ್ಯಪೂರ್ಣ ಕಥೆಗಳ ಮೂಲಕ ಮನಸ್ಸಿಗೆ ನಾಟುವಂತೆ ಬೋಧಿಸಿದ್ದಾನೆ. ಕ್ರಿ. ಶ. ೧೪೮೪ರಲ್ಲಿ ಈಸೋಪನ ನೀತಿಕಥೆಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿದ ವಿಲಿಯಂ ಕ್ಯಾಕ್ಸ್‌ಟನ್ ಬರೆದಿರುವಂತೆ "ಎಲ್ಲ ತರದ ಜನರ ರೀತಿ-ನೀತಿ, ಜೀವನಕ್ರಮ, ಆಚರಣೆಗಳನ್ನು ಪಶುಪಕ್ಷಿ ಕ್ರಿಮಿಕೀಟಾದಿಗಳ ಸಂಕೇತದಿಂದ ಈಸೋಪ್ ಬಹಳ ನೈಪುಣ್ಯದಿಂದ ತಿಳಿಸಿ, ಜನರು ಹೇಗೆ ನಡೆಯಬೇಕೆಂದು ದಾರಿ ತೋರಿಸಿದ್ದಾನೆ."

ಮೂಕಪ್ರಾಣಿಗಳ ಸಂಕೇತ

ಈಸೋಪ್ ಮೂಕಪ್ರಾಣಿಗಳ ಸಂಕೇತವನ್ನು ಬಳಸಿಕೊಂಡಿರುವ ರೀತಿ ಅಸ್ವಾದೃಶವಾದದ್ದು, ಅನನ್ಯ ಅಸಾಧಾರಣವಾದದ್ದು. ಈಸೋಪನ ಕಥೆಗಳು ಭಾರತೀಯ ಮೂಲದವೆಂಬ ಅಭಿಪ್ರಾಯವೂ ಇದೆ. ಆತನ ಕಥಾಸಾಮ್ರಾಜ್ಯದಲ್ಲಿ ಮೂಕಪಶು-ಪಕ್ಷಿ-ಕ್ರಿಮಿ-ಕೀಟ ಮತ್ಸ್ಯಾದಿ ಜಲಚರ ಜೀವಿಗಳದ್ದೇ ಪ್ರಮುಖ ಪಾತ್ರ. ಆತ ಮೂಕಜೀವಿಗಳಿಗೆ ಮನುಷ್ಯರ ಆಲೋಚನಾಶಕ್ತಿಯನ್ನೂ, ವಾಕ್ಚಾತುರ್ಯವನ್ನೂ ಕೊಟ್ಟಿದ್ದಾನೆ!

ಪಶು-ಪಕ್ಷಿಗಳ ಸ್ವಭಾವಜ್ಞಾನ

ಈಸೋಪನ ಪ್ರಾಣಿ ಪ್ರಪಂಚದ ಜ್ಞಾನ ಆತನ ಮನುಷ್ಯ ಲೋಕದ ಜ್ಞಾನದಷ್ಟೇ ಅದ್ಭುತವಾದದ್ದು. ಆತ ವಿವಿಧ ಪಶು-ಪಕ್ಷಿ-ಕ್ರಿಮಿ-ಕೀಟ ಜಲಚರಾದಿಗಳ ಗುಣವಿಶೇಷಗಳನ್ನು, ಸ್ವಭಾವಜನ್ಯ ದೋಷ-ದೌರ್ಬಲ್ಯಗಳನ್ನು ನೀತಿಬೋಧನೆಯ, ತತ್ವಪ್ರತಿಪಾದನೆಯ ಸಾಧನಗಳನ್ನಾಗಿ ತುಂಬ ಪರಿಣಾಮಕಾರಿಯಾದ ರೀತಿಯಲ್ಲಿ ಬಳಸಿಕೊಂಡಿದ್ದಾನೆ. ಸಿಂಹದ ಪೌರುಷ ಮತ್ತು ಗಾಂಭೀರ್ಯ, ತೋಳದ ಕ್ರೌರ್ಯ ಮತ್ತು ಹೊಟ್ಟೆಬಾಕತನ, ನರಿಯ ಜಾಣತನ, ಹೋರಿಯ ಬಲ, ಕತ್ತೆಯ ಸಹನಶೀಲತೆ, ಕುರಿ-ಆಡು-ಕಪ್ಪೆಗಳ ಬಲಹೀನತೆ ಮತ್ತು ದಡ್ಡತನ, ಕೋತಿಗಳ ಅಂಧಾನುಕರಣಶೀಲತೆ, ಡೊಂಬಕಾಗೆಗಳ ಒಣಪ್ರತಿಷ್ಠೆ, ಇರುವೆಗಳ ದೂರದೃಷ್ಟಿ ಮತ್ತು ವ್ಯವಹಾರಜ್ಞಾನ, ಜೇನ್ನೊಣದ ಹಿಂಸಾಪ್ರವೃತ್ತಿ, ಹಾವು-ಚೇಳುಗಳ ವಿಷಪೂರಿತ ದುಷ್ಟತನ ಮತ್ತು ಕೃತಘ್ನತೆ-ಇವೇ ಮುಂತಾದ ಗುಣವಿಶೇಷಗಳು ಮತ್ತು ದೋಷ ದೌರ್ಬಲ್ಯಗಳು ನಮ್ಮ ಮನಸ್ಸಿನ ಮೇಲೆ ಗಾಢವಾದ ಪ್ರಭಾವವನ್ನು ಬೀರಿ, ಈಸೋಪ್ ಬೋಧಿಸುವ ನೀತಿ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವಂತೆ, ನೆಲೆಯೂರಿ ನಿಲ್ಲುವಂತೆ ಮಾಡುತ್ತವೆ. ನೀತಿಬೋಧನೆಗೆ ಇದಕ್ಕಿಂತಲೂ ಮಿಗಿಲಾದ ಹೆಚ್ಚು ಪರಿಣಾಮಕಾರಿಯಾದ ವಿಧಾನ, ತಂತ್ರ ಇನ್ನಾವುದಿದೆ? ಇದೇ ಈಸೋಪನ ಕಥೆಗಳ ವೈಶಿಷ್ಟ್ಯವೂ ಅಹುದು.

ಇವು ಕೇವಲ ಮಕ್ಕಳ ಕಥೆಗಳಲ್ಲ

ಈಸೋಪನು ತನ್ನ ನೀತಿಕಥೆಗಳಲ್ಲಿ ಮೂಕಪ್ರಾಣಿಗಳ ಸಂಕೇತವನ್ನು ವಿಶೇಷವಾಗಿ ಬಳಸಿರುವುದರಿಂದ, ಅವುಗಳನ್ನು ಮಕ್ಕಳ ಕಥೆಗಳೆಂದೇ ಪರಿಭಾವಿಸುವುದು ರೂಢಿಯಾಗಿಬಿಟ್ಟಿದೆ. ಪ್ರಾಣಿಸಂಕೇತದ ಬಳಕೆಯಿಂದ ಈ ನೀತಿಕಥೆಗಳು ಮಕ್ಕಳಿಗೆ

ತುಂಬ ಪ್ರಿಯವಾಗಿರಬಹುದು. ಈ ಕಥೆಗಳು ಮಕ್ಕಳ ಮನೋವಿಕಾಸಕ್ಕೆ, ವ್ಯಕ್ತಿತ್ವದ ಬೆಳವಣಿಗೆಗೆ ತುಂಬ ಸಹಕಾರಿಯಾಗಿರಲೂ ಬಹುದು. ಆದರೆ, ಈ ನೀತಿಕಥೆಗಳನ್ನು ಕೇವಲ ಮಕ್ಕಳಿಗಾಗಿ ರಚಿಸಿದ, ಮಕ್ಕಳ ಕಥೆಗಳೆಂದು ಪರಿಗಣಿಸುವುದು ಸರಳೀಕರಣ ವೆನಿಸುವುದಲ್ಲದೆ, ಈಸೋಪನಂಥ ಮಹಾನ್ ಮೇಧಾವಿಗೆ ಅಪಚಾರವನ್ನೆಸಗಿದಂತೆಯೂ ಆಗುವುದು.

ಬದುಕಿನ ನಿತ್ಯ–ನೂತನ ಸತ್ಯಗಳ ಪ್ರತಿಪಾದನೆ

ಬದುಕಿನ ನಿತ್ಯನೂತನ ಸತ್ಯಗಳ, ಸಾರ್ವಕಾಲಿಕ ಮೌಲ್ಯಗಳ ಉದಾತ್ತ ನೀತಿತತ್ವಗಳ ಪ್ರತಿಪಾದನೆಯನ್ನೇ ತಮ್ಮ ಮೂಲ, ಮೇರು ಗುರಿಯನ್ನಾಗಿಟ್ಟುಕೊಂಡಿರುವ ಈ ನೀತಿಕಥೆಗಳು ಜನರು 'ಬದುಕಲೆಂದು,' ನೀತಿವಂತರಾಗಿ ಬಾಳಲೆಂದು, ವಿವೇಕಿಗಳಾಗಿ, ಜಾಣರಾಗಿ ವ್ಯವಹರಿಸಲೆಂದು ರಚಿತವಾದುವು. ಇವು ಸಮಸ್ತಜನಸಮುದಾಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳಿದ ನೀತಿಕಥೆಗಳು. ಇವು ಮನುಷ್ಯ ಜೀವನದ ಎಲ್ಲ ಕ್ಷೇತ್ರಗಳನ್ನು ತಮ್ಮ ವ್ಯಾಪ್ತಿಯಲ್ಲಿ ಒಳಗೊಂಡಿವೆ. ಈ ನೀತಿಕಥೆಗಳಿಂದ ಮಕ್ಕಳಿಗಿಂತ ಮಿಗಿಲಾಗಿ ವಯಸ್ಕರೇ ಕಲಿಯಬೇಕಾದದ್ದು ಯಥೇಚ್ಛವಾಗಿದೆ, ಅಪಾರವಾಗಿದೆ ಎಂದರೆ ಅತಿಶಯೋಕ್ತಿಯಲ್ಲ.

ಈಸೋಪನ ನೀತಿ ಬೋಧನೆಯ ಸಾರ

ಈಸೋಪ್ ತನ್ನ ನೂರಾರು ಕಥೆಗಳ ಮೂಲಕ ಬೋಧಿಸಿರುವ ನೀತಿ ತತ್ವಗಳನ್ನು ಜೀವನ ವಿವೇಕವನ್ನು, ವ್ಯವಹಾರ ಜ್ಞಾನವನ್ನು ಹೀಗೆ ಸಂಗ್ರಹಿಸಬಹುದು.

ಬದುಕಿನ ಹೋರಾಟದಲ್ಲಿ ಬಾಹುಬಲಕ್ಕಿಂತಲೂ ಬುದ್ಧಿಬಲವೇ ಮಿಗಿಲು. ಶಕ್ತಿಗಿಂತ ಯುಕ್ತಿ ಲೇಸು. ತೋಳ್ಬಲದಿಂದ ಸಾಧಿಸಲಾಗದ್ದನ್ನು ಬುದ್ಧಿಬಲದಿಂದ ಸಾಧಿಸಬಹುದು. ಬುದ್ಧಿಶಕ್ತಿಯಿಂದ ಎಂಥ ಪ್ರಬಲ ವ್ಯಕ್ತಿಯನ್ನಾದರೂ ಸೋಲಿಸಬಹುದು ; ಎಂತಹ ಅಪಾಯದಿಂದಲಾದರೂ ಉಪಾಯವಾಗಿ ಪಾರಾಗಬಹುದು ! ಆದ್ದರಿಂದ ನಾವು ನಮ್ಮ ಬುದ್ಧಿಶಕ್ತಿಯನ್ನು ಬೆಳೆಸಿಕೊಂಡು ವಿವೇಕಿಗಳಾಗಬೇಕು, ಜಾಣರಾಗಬೇಕು.

ನಾವು ಬುದ್ಧಿಶಕ್ತಿಯನ್ನು ಬೆಳೆಸಿಕೊಂಡರಷ್ಟೇ ಸಾಲದು. ಅದನ್ನು ಬಳಸಿಕೊಳ್ಳುವ ಕೌಶಲ್ಯವನ್ನು ಕರಗತಮಾಡಿಕೊಳ್ಳಬೇಕು. ಸಮಯ–ಸಂದರ್ಭಗಳಿಗೆ ಅನುಸಾರವಾಗಿ, ನಮ್ಮ ಬುದ್ಧಿಚಾತುರ್ಯವನ್ನು ಪ್ರಯೋಗಿಸಿ ಕಾರ್ಯಸಾಧನೆ ಮಾಡಿಕೊಳ್ಳಬೇಕು.

ಯಾವುದೇ ಕೆಲಸವನ್ನು ಕೈಗೆತ್ತಿಕೊಳ್ಳುವುದಕ್ಕೆ ಮುಂಚೆ ಚೆನ್ನಾಗಿ, ಸಾವಕಾಶವಾಗಿ ಆಲೋಚಿಸಬೇಕು. ಇಲ್ಲವಾದರೆ, ನೀರನ್ನು ಕಂಡೊಡನೆಯೇ ಭಾವಿಗೆ ಧುಮುಕಿದ ಆಡಿನಂತೆ ಆಗುತ್ತದೆ. ದುಡುಕಿನಿಂದ ಕೆಡಕು. ನಾವು ಇತರರ ಅನುಭವದ ಲಾಭವನ್ನೂ ಪಡೆದುಕೊಳ್ಳಬೇಕು.

ನಮ್ಮ ಶಕ್ತಿ–ಸಾಮರ್ಥ್ಯಗಳನ್ನು, ನಮ್ಮ ಇತಿ–ಮಿತಿಗಳನ್ನು ಸರಿಯಾಗಿ ಗುರುತಿಸಿ, ಅರ್ಥಮಾಡಿಕೊಂಡು ನಾವು ಕಾರ್ಯೋನ್ಮುಖರಾಗಬೇಕು. ನಮ್ಮ ಸ್ವಭಾವಕ್ಕೆ ವಿರುದ್ಧವಾದ, ನಮ್ಮ ಅಳವಿಗೆ ಮೀರಿದ ಸಾಹಸಗಳಿಗೆ ಕೈಹಾಕುವುದರಿಂದ ಅನಾಹುತ

ವಾಗುತ್ತದೆ; ಕೇಡು ಕಟ್ಟಿಟ್ಟ ಬುತ್ತಿ. ಹದ್ದಿನಂತೆ ತಾನೂ ಹಾರಬಯಸಿ, ಆಕಾಶದಿಂದ ಬಂಡೆಯ ಮೇಲೆ ಬಿದ್ದು ಚೂರು-ಚೂರಾದ ಆಮೆಯ ಕಥೆಯೇ ಈ ಮಾತಿಗೆ ನಿದರ್ಶನ. ಸಿಂಹದಂತೆ ತಾನೂ ಬೇಟೆಯಾಡಲು ಹೊರಟ ನರಿ ತಾನೇ ಮೊದಲು ಬೇಟೆಗಾರನ ಬಲೆಗೆ ಸಿಕ್ಕಿಬಿದ್ದ ಕಥೆಯನ್ನು ನೆನಪಿಸಿಕೊಳ್ಳಬಹುದು.

ನಮ್ಮ ಬುದ್ಧಿಶಕ್ತಿಯನ್ನು ದುರಪಯೋಗಪಡಿಸಿಕೊಂಡು ಇತರರಿಗೆ ಕೇಡನ್ನುಂಟು ಮಾಡಲೆಳಸುವುದು ಸಲ್ಲ. ಪರರಿಗೆ ಕೇಡು ಬಗೆದರೆ ತನಗೆ ಕೇಡು ತಪ್ಪದು. ತನ್ನನ್ನು ನಂಬಿದ ಇಲಿಯನ್ನು ನೀರಿನಲ್ಲಿ ಮುಳುಗಿಸಿ ಕೊಂದ ಕಪ್ಪೆ ತಾನೇ ಹದ್ದಿನ ಬಾಯಿಗೆ ತುತ್ತಾಯಿತು!

ನಾವು ಯಾರನ್ನೂ ಯಾವುದನ್ನೂ ತಿರಸ್ಕರಿಸಬಾರದು, ತುಚ್ಛೀಕರಿಸಬಾರದು. ನಾವು ನಿಕೃಷ್ಟವಾದದ್ದೆಂದು ಪರಿಗಣಿಸಿ ಉಪೇಕ್ಷಿಸಿದ ವಸ್ತುವೇ ನಮ್ಮ ಸಮಯಕ್ಕೆ ಒದಗಿಬರುತ್ತದೆ. ಈ ಮಾತು ವ್ಯಕ್ತಿಗಳಿಗೂ ಅನ್ವಯಿಸುತ್ತದೆ.

ಒಳ್ಳೆಯ ಹವ್ಯಾಸ ಬೆಳೆಸಿಕೊಂಡು ದುರ್ಗುಣಗಳನ್ನು ವರ್ಜಿಸಬೇಕು. ಸೋಮಾರಿತನ, ದುಂದುಗಾರಿಕೆ, ದುರಾಸೆ, ಅಸೂಯೆ ಇವೇ ಮುಂತಾದ ದುರ್ಗುಣಗಳೇ ದುಃಖದ ಮೂಲಗಳು. ಸುಳ್ಳಿನಿಂದ ಹಾನಿ. ಆದ್ದರಿಂದ, ಸತ್ಯವನ್ನೇ ನುಡಿಯಬೇಕು. ಪ್ರಾಮಾಣಿಕತೆಗಿಂತ ಮಿಗಿಲಾದ ನೀತಿ ಬೇರೊಂದಿಲ್ಲ. ಹರ್ಮೆಸ್ ದೇವರು ಮತ್ತು ಕಟ್ಟಿಗೆ ಕಡಿಯುವವನ ಕಥೆಯೇ ಈ ಮಾತಿಗೆ ನಿದರ್ಶನ.

ವ್ಯವಹಾರ ಜ್ಞಾನವಂತೂ ಎಲ್ಲಕ್ಕಿಂತಲೂ ಮುಖ್ಯ. ಅದಿಲ್ಲದವನ ಪಾಡು ತನ್ನ ಮಿತ್ರನಾದ ಸಾಕುನಾಯಿಯ ಆಹ್ವಾನದ ಮೇಲೆ ಭೋಜನಕೂಟಕ್ಕೆ ಹೋದ ಬೀದಿನಾಯಿಯ ಪಾಡು!

ನಾವು ನಮಗಿಂತ ಬಲಿಷ್ಠರಾದವರ ವಿರೋಧವನ್ನು ಕಟ್ಟಿಕೊಳ್ಳಬಾರದು.

ಶ್ರೀಮಂತರು ಬಡವರನ್ನು ಶೋಷಿಸಬಾರದು. ಬಡವರು ಶ್ರೀಮಂತರ ಅನುಕರಣೆ ಮಾಡಬಾರದು.

ಸ್ವಸ್ಥಾನ ಪ್ರಜ್ಞೆಯೂ ಅತಿಮುಖ್ಯ. ತನ್ನ ಒಡೆಯನ ಮುದ್ದಿನ ನಾಯಿ ಆತನ ಮೇಲೆ ಏರಿ ಮುದ್ದಿಸುವುದನ್ನು ನೋಡಿದ ಕತ್ತೆ ತಾನೂ ಒಡೆಯನನ್ನು ಮುದ್ದಿಸಲು ಹೋಗಿ ಪೆಟ್ಟುತಿಂದು ಸತ್ತದ್ದನ್ನು ನೆನಪಿಸಿಕೊಳ್ಳಬಹುದು.

ಕೆಳಗಿನ ಸ್ಥಾನಗಳಲ್ಲಿರುವವರು ಉಚ್ಚಸ್ಥಾನಗಳಲ್ಲಿರುವವರನ್ನು ಕಂಡು ಕರುಬಬಾರದು. ಎಷ್ಟೋ ವೇಳೆ ಸಣ್ಣ ಸ್ಥಾನಗಳೇ ದೊಡ್ಡ ಸ್ಥಾನಗಳಿಗಿಂತಲೂ ಹೆಚ್ಚು ಕ್ಷೇಮಕರ.

ಹೊಸ ಒಡೆಯನಿಗಿಂತಲೂ ಹಳೆಯ ಒಡೆಯನೇ ಮೇಲು. ಹೊಸ ಅಧಿಕಾರಿ ಹಳೆಯ ಅಧಿಕಾರಿಗಿಂತಲೂ ಹೆಚ್ಚು ಭ್ರಷ್ಟನಾಗಿರುವುದು ಅಪರೂಪವೇನಲ್ಲ. ಈ ಮಾತಿಗೆ ಬೇಲಿ ಹಂದಿ ಮತ್ತು ಚಿಕ್ಕಾಡುಗಳ ಕಥೆಯೇ ಸಾಕ್ಷಿ.

ಸಂಖ್ಯಾಬಲಕ್ಕಿಂತಲೂ ಗುಣವೇ ಮಿಗಿಲು. ಹತ್ತುಕಟ್ಟುವುದಕ್ಕಿಂತ ಒಂದು ಮುತ್ತು ಕಟ್ಟುವುದು ಲೇಸು. ಸಿಂಹಿಣಿ ಹೆರುವುದು ಒಂದೇ ಮರಿಯನ್ನು—ಅದು ಸಿಂಹ!

ಬದುಕಿನ ಯಾತ್ರೆಯಲ್ಲಿ ಎಚ್ಚರಿಕೆ ಅತ್ಯಗತ್ಯ. ಎಲ್ಲ ವಿಷಯಗಳಲ್ಲಿಯೂ, ಎಲ್ಲ ಸಂದರ್ಭಗಳಲ್ಲಿಯೂ ನಾವು ಎಚ್ಚರಿಕೆಯಿಂದಿರಬೇಕು. ಕೆಲವೊಮ್ಮೆ ನಾವು ನಿರೀಕ್ಷಿಸದಿದ್ದ ಮೂಲಗಳಿಂದಲೇ ಅಪಾಯ ಒದಗಿಬರುವುದೂ ಉಂಟು. ಕಡಲತೀರದಲ್ಲಿ ಮೇಯುತ್ತಿದ್ದ ಒಂದು ಕಣ್ಣಿನ ಹುಲ್ಲೆಗೆ ತಾನು ನಿರೀಕ್ಷಿಸದಿದ್ದ ಕಡೆಯಿಂದಲೇ, ಕಡಲ ಕಡೆಯಿಂದಲೇ, ಮೃತ್ಯು ಒದಗಿಬಂದ ಕಥೆಯೇ ಈ ಮಾತಿಗೆ ನಿದರ್ಶನ.

ಸಾವು ಭಯಾನಕವಲ್ಲ. ಬಿಡುಗಡೆಯ ದಾರಿ, ವಿಮೋಚನೆಯ ಹರಿಕಾರ, ಮರಣ ಸಮಯದಲ್ಲಿ ಹಾಡುತ್ತಿದ್ದ ಹಂಸಪಕ್ಷಿ ಕೊಕ್ಕರೆಗೆ ಹೇಳಿತು: "ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ನಾನು ವಿಮುಕ್ತನಾಗುತ್ತಿದ್ದೇನೆ. ಜಾಣ—ಬಲೆಗಳ ಭಯ, ಅಪಾಯ, ಹಸಿವಿನಬಾಧೆ ಇವೆಲ್ಲ ಕಷ್ಟ—ಕೋಟಲೆಗಳಿಂದ ನಾನು ದೂರವಾಗಿ ಬಿಡುತ್ತೇನೆ. ಇಂಥ ಬಿಡುಗಡೆಗಾಗಿ ಸಂತೋಷಪಡಬೇಡವೇ? ಸಂತೋಷದಿಂದ ಹಾಡಬೇಡವೇ?"

ಒಟ್ಟಿನ ಮೇಲೆ, ಜನರು ಬುದ್ಧಿವಂತರೂ, ಜಾಣರೂ, ವಿವೇಕಿಗಳೂ, ನೀತಿವಂತರೂ, ಒಳ್ಳೆಯವರೂ ಆಗಿ, ಸುಖವಾಗಿ ಬಾಳಿ, ಬದುಕನ್ನು ಸಾರ್ಥಕಪಡಿಸಿಕೊಳ್ಳಲೆಂದು ಈಸೋಪ್ ಹೇಳಿದ ನೀತಿ ಕಥೆಗಳು ಮಾನವ ಕುಲಕ್ಕೆ ಎಂದೆಂದಿಗೂ ದಾರಿದೀಪಗಳು.



ಮತವಿಚಾರದಲ್ಲಿ ಬಲಾತ್ಕಾರ ಕೂಡದು. ನಂಬಿಕೆ ದೇವರಿಂದಲೇ ಬರಬೇಕಾದ್ದು. ಆದುದರಿಂದ ಜನರಲ್ಲಿ ಬಲಾತ್ಕಾರದಿಂದ ನಂಬಿಕೆಯನ್ನು ಹುಟ್ಟಿಸಲು ಪ್ರಯತ್ನ ಮಾಡಬೇಡಿರಿ.

—ಮುಹಮ್ಮದ್ ಪೈಗಂಬರ್

ಪುಸ್ತಕ ಪರಿಚಯ

"ತೆರೆ" (ಕಥಾಸಂಕಲನ) ಲೇಖಕಿ ಲೀಲಾ ಮಣ್ಣಾಲ, ಪ್ರಕಾಶನ : ನಿಸರ್ಗ ಪ್ರಕಾಶನ ೮೬ ಗುರುರಾಜ ಲೇಔಟ್ ಅಂಚೆ: ಸಿದ್ಧಾರ್ಥನಗರ ಮೈಸೂರು-೫೭೦೯೧೧. ಪುಟಗಳು viii+೧೯೪, ಪ್ರಥಮ ಮುದ್ರಣ ೧೯೯೪ ಬೆಲೆ ರೂ. ೪೮.

೧೯೭೧-೯೭ರ ಅವಧಿಯಲ್ಲಿ ಬರೆದು ಪ್ರಕಟವಾದ ೨೨ ಕತೆಗಳ ಸಂಗ್ರಹ.

ಈ ಪುಸ್ತಕ ಎರಡು ಬಗೆಯಲ್ಲಿ ಬರೆದು ಪ್ರಕಟವಾದ ೨೨ ಕತೆಗಳ ಸಂಗ್ರಹ.

ಈ ಪುಸ್ತಕ ಎರಡು ಬಗೆಯಲ್ಲಿ ಚೆನ್ನಾಗಿದೆ. (೧) ಕಥೆಗಳೆಲ್ಲ ವಿಭಿನ್ನ ಕಥಾ ವಸ್ತುವನ್ನು ಹೊಂದಿರುವುದು, (೨) ಲೇಖಕಿಯ ಕಥಾಧೋರಣೆ ಸಹಜ ಶೈಲಿಯಲ್ಲಿದೆ ಮತ್ತು ವಾಚಕ ಈ ಕತೆಗಳನ್ನು ಓದುವಾಗ ಸಹಜವಾಗಿ ಅಂತರ್ಗತ ನೀತಿ ಅರಿವಿಗೆ ಬಂದು ವಿಷಯಗಳ ಬಗ್ಗೆ ಚಿಂತಿಸುವಂತೆ ಮಾಡುತ್ತವೆ.

"ತೆರೆ" ಎಂಬ ಶೀರ್ಷಿಕೆಗೆ ಲೇಖಕಿ ನೀಡಿರುವ ವಿವರಣೆ: 'ತೆರೆ' ಎಂಬ ಕತೆ ಈ ಸಂಕಲನದಲ್ಲಿ ಇರುವುದಾದರೂ ಈ ಶೀರ್ಷಿಕೆ ಒಟ್ಟಂದದಲ್ಲಿ ಅನ್ವಯವಾಗುವುದೆಂದು ನನ್ನ ಭಾವನೆ. ಏಕೆಂದರೆ ಕತೆಗಳು ಬದುಕಿಗೆ ಹಿಡಿಯುವ ಕನ್ನಡಿ. ತೆರೆ ಕಥಾಸಂಕಲನದ ಪುಟ ತೆರೆಯುತ್ತಿದ್ದಂತೆಯೇ ಜೀವನ ನಾಟಕದ ತೆರೆಯೂ ಮೇಲೇಳುತ್ತದೆ. ಆದರೆ 'ತೆರೆ'ದ ಪುಟಗಳು ಮುಚ್ಚಿಕೊಂಡಾಗ ಬದುಕಿನ ತೆರೆ ಕೆಳಗಿಳಿಯುವುದಿಲ್ಲ? 'ತೆರೆ' ಕಥಾ ಸಂಕಲನ ಓದಿದ ನಂತರ ಇದು ನಿಜ ಅನ್ನಿಸುತ್ತದೆ.

ಸಾಮಾಜಿಕ ಜೀವನದಲ್ಲಿ ಕಂಡುಬರುವ ತಾಯಿ ಮಗನ ಸಂಬಂಧ, ಸಹೋದರ ಸಂಬಂಧ, ರಾಜಕೀಯ, ಭಾಷಾಭಿಮಾನ, ಮಕ್ಕಳ ಮನೋಭಾವ, ವಂಚನೆ, ಪ್ರಾಣಿದಯೆ, ಮುಂತಾದ ವಿವಿಧ ಅಂಶಗಳ ಸುತ್ತ ಇಲ್ಲಿಯ ಕತೆಗಳ ರಚನೆ ಇದೆ. 'ಹೊಳೆ ದಾಟಿದ ಮೇಲೆ' ಕತೆ ಈಗಿನ ರಾಜಕೀಯ ವ್ಯಕ್ತಿಗಳ ಮನೋಭಾವಕ್ಕೆ ಕನ್ನಡಿ ಹಿಡಿದಂತಿದೆ. 'ಕವಲುಗಳು' ಕತೆಯಲ್ಲಿ ಸಂಬಂಧಗಳು (ಅಪ್ಪ, ಅಮ್ಮ, ಅಣ್ಣ ತಮ್ಮ, ತಂಗಿ ಇತ್ಯಾದಿ) ನಾವು ಬೆಳೆದಂತೆ ಬೇರೆ ಬೇರೆ ಕವಲುಗಳಾಗಿ ಒಡೆಯುವುದನ್ನು ಮತ್ತು ಅಣ್ಣತಮ್ಮಂದಿರು ಬೆಳೆದಂತೆ ಅವರ ನಡುವೆ ಅನ್ಯೋನ್ಯತೆ ಕಡಿಮೆ ಆಗುವುದರ ಚಿತ್ರಣವಿದೆ. 'ಡೈಮಂಡ್ ನೆಕ್ಲೆಸ್' ಕತೆಯಲ್ಲಿ ಪರಿಚಿತ ಸುಶಿಕ್ಷಿತರೇ ಹೇಗೆ ನಮ್ಮನ್ನು

ವಂಚಿಸುತ್ತಾರೆ ಎಂಬ ಎಚ್ಚರ ನಮ್ಮನ್ನು ತಟ್ಟುತ್ತದೆ. 'ಸುಳಿ' ಮತ್ತು 'ಆವಶ್ಯಕ' ಕತೆಗಳು ಅಷ್ಟೇನೂ ಪರಿಣಾಮಕಾರಿಯಾಗಿಲ್ಲ.

'ದರ್ಶನ' ಕತೆ ಮುಪ್ಪಿನಲ್ಲಿತಾಯಿಯನ್ನು ಮಗ ನೋಡಿಕೊಳ್ಳದಿರುವ ಬಗ್ಗೆ, ಮಗನಿಗೆ ಸಂಪಾದನೆಯೇ ಮುಖ್ಯವಾಗಿ, ತಾಯಿ ಕಾಯಿಲೆ ಬಿದ್ದರೂ ನೋಡಲು ಬರಲು ಸಮಯವಿಲ್ಲ ಎಂಬ ನೆಪ, ತನಗೇ ಕಾಯಿಲೆ ಬಂದಾಗ ತಾಯಿಯ ನೆನಪು ಬಂದು ತಾಯಿಯನ್ನು ನೋಡುವ ಕಾತುರ ಆತುರ. ಈ ಕತೆಯನ್ನು ಓದಿದ ವಾಚಕನಲ್ಲಿ ತಾಯಿಯ ಬಗ್ಗೆ ತನ್ನ ಕರ್ತವ್ಯವೇನೆಂದು ಜಾಗೃತಿ ಮೂಡುತ್ತದೆ. 'ಗೋಡೆಗಳ ನಡುವೆ' ಇದರಲ್ಲಿ ಒಬ್ಬ ಹುಡುಗನಿಗೆ ಇಡೀ ದಿನ ಓದಿಕೊಂಡೇ ಇರಬೇಕೆಂಬ ಕಟ್ಟಪ್ಪಣೆ, ಶಾಲೆಯಿಂದ ಮನೆಗೆ ಬಂದಮೇಲೆ ಟ್ಯೂಷನ್ ಎಂಬ ಶಿಕ್ಷೆ. ಇದರಿಂದ ಅವನು ಮಾನಸಿಕವಾಗಿ ಹೇಗೆ ಬಳಲುತ್ತಾನೆ, ಮಕ್ಕಳಿಗೆ ಓದಿನ ಜೊತೆಗೆ ಇತರ ಚಟುವಟಿಕೆಗಳೂ ಎಷ್ಟು ಮುಖ್ಯ ಎಂಬುದರ ಬಗ್ಗೆ ಮನಸ್ಸಿಗೆ ತಟ್ಟುವಂಥ ಉಲ್ಲೇಖವಿದೆ.

ನಮ್ಮ ದೇಶ, ನಮ್ಮ ಭಾಷೆಯ ಬಗ್ಗೆ ಕೀಳರಿಮೆ ಸಲ್ಲದು, ಅಭಿಮಾನವಿರಬೇಕೆಂಬುದನ್ನು 'ನೆಲಮುಗಿಲು' ಕತೆಯಲ್ಲಿ ಚಿತ್ರಿಸಲಾಗಿದೆ. 'ಜೀವಕ್ಕೆ ಜೀವ' ಇದರಲ್ಲಿ ಸಾಕುಪ್ರಾಣಿ ಕಾಯಿಲೆ ಬಿದ್ದಾಗ ಮನೆಯಲ್ಲಿ ಒಬ್ಬೊಬ್ಬರದು ವಿಭಿನ್ನ ಮನೋಭಾವ. ಅದಕ್ಕೆ 'ದಯಾಮರಣ' ಕೊಡುವತನಕ ಹೋಗುತ್ತದೆ. ಕೊನೆಗೆ ಮಾನವೀಯತೆಗೇ ಜಯ. ನಾಯಿ ಗುಣ ಹೊಂದಿ ಮನೆಯಲ್ಲಿ ಒಬ್ಬರ ಪ್ರಾಣ ಕಾಪಾಡಲು ಸಹಾಯ ಮಾಡುತ್ತದೆ. ಅನಂತರ ಮನೆಯವರೆಲ್ಲರೂ ನಾಯಿಯ ಬಗ್ಗೆ ಅಭಿಮಾನ ತಾಳುತ್ತಾರೆ. ಇಲ್ಲಿ ಸಾಕುಪ್ರಾಣಿ ಎಷ್ಟು ವಿಧೇಯವಾಗಿರುತ್ತದೆ ಮತ್ತು ಮಾನವೀಯತೆಯನ್ನು ಎತ್ತಿಹಿಡಿಯುವ ಚಿತ್ರಣವಿದೆ.

ಈ ಹೊತ್ತಗೆಯಲ್ಲಿ ಕೆಲವು ದೋಷಗಳೂ ಇವೆ. ಪ್ರತಿ ಕತೆಯನ್ನೂ ಪುಟದ ಅರ್ಧಭಾಗದಿಂದ ಪ್ರಾರಂಭಿಸಿದ್ದಾರೆ. ಇದರಿಂದ ಹದಿದಾರು ಪುಟಗಳು ದಂಡವೆಂದೇ ಹೇಳಬಹುದು. ಕರಡಚ್ಚು ತಿದ್ದಿದ್ದು ಸಾಲದು. ಅಲ್ಲಲ್ಲಿ ಮುದ್ರಾರಾಕ್ಷಸನಿಗೆ ನುಸುಳಲು ಅವಕಾಶವಿತ್ತಿದ್ದಾರೆ. ಪೂರ್ಣ ವಿರಾಮ ಚಿಹ್ನೆ ಬೇಡವಾದ ಕಡೆಗಳಲ್ಲೆಲ್ಲ ಬಿದ್ದಿವೆ. ಮುಖಪುಟ ಅರ್ಥವಿಸಲು ಸ್ವಲ್ಪ ಕಷ್ಟವೆಂದೇ ಹೇಳಬಹುದು. ಈ ದೋಷ ಬಿಟ್ಟರೆ 'ತೆರೆ' ಒಂದು ಉತ್ತಮ ಕಥಾಸಂಕಲನ ಎನ್ನಬಹುದು.

ರುಕ್ಮಿಣಿಮಾಲಾ
ಮನೆ ಸಂಖ್ಯೆ ೮ 'ಅತ್ರಿ'
ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತೀಪುರ, ಮೈಸೂರು ೫೭೦೦೦೯

ಓದುಗರ ಅನಿಸಿಕೆ

ಮಾನ್ಯರೆ,

ಕಾರಂತ ವಿಶೇಷ ಸಂಚಿಕೆ ಕೈಸೇರಿತು, ಕೃತಜ್ಞನು. ಸಂಚಿಕೆ ಚೆನ್ನಾಗಿ ಬಂದಿದೆ. ಲೇಖನಗಳೆಲ್ಲವೂ ವಾಚನೀಯವಾಗಿವೆ. ನಿಮಗೆ ಅಭಿನಂದನೆಗಳು.

ಪೆರಡಾಲ
ಕಾಸರಗೋಡು-೬೭೧೫೫೧

ಕಯ್ಯಾರ ಕಿಞ್ಞಣ್ಣರೈ

ಪ್ರಿಯರೆ,

ತಾವು ಪ್ರೀತಿಯಿಂದ ಕಳುಹಿಸಿದ 'ಪುಸ್ತಕ ಪ್ರಪಂಚ'ದ ಕಾರಂತ ವಿಶೇಷ ಸಂಚಿಕೆಯು ತಲಪಿದೆ. ಸಾಹಿತ್ಯ ಲೋಕದ ದಿಗ್ಗಜ, ಅಪರೂಪದ ಕಾರಂತರ ಬದುಕಿನ ವಿವಿಧ ಮುಖಗಳನ್ನು ವಿಶೇಷ ಸಂಚಿಕೆಯು ದರ್ಶಿಸುತ್ತದೆ. ೧೯೩೫ ರಲ್ಲಿ ಹಲಸಂಗಿಯ ಹಳ್ಳದ ದಂಡೆಯಲ್ಲಿ ನವಿಲುಗಳ ನರ್ತನ ವೀಕ್ಷಿಸಿ ತಾನೂ ನರ್ತಿಸಿದ ಕಾರಂತರು 'ಕವಿಮಧುರಚೆನ್ನ ರ ಸ್ನೇಹಿತರಾಗಿ ಸಖ್ಯ ಯೋಗ ಬೆಳೆಸಿದ್ದರು. ಜಿಲ್ಲಾ ಸಾಹಿತ್ಯ ಸಮ್ಮೇಳನ (೧೯೯೦) ಕ್ಕೆ ಇಲ್ಲಿಗೆ ಬರಮಾಡಿಕೊಂಡಿದ್ದೆ.

ತಮ್ಮ ಆತ್ಮೀಯ,
ಈಶ್ವರಚಂದ್ರ ಚಿಂತಾಮಣಿ

'ಪಾರ್ವತೀಶ' ಬಿ-೨೦
ಭಾವಸಾರ ನಗರ
ವಿಜಾಪುರ

ಮಾನ್ಯರೆ,

ಶಿವರಾಮ ಕಾರಂತ ವಿಶೇಷ ಸಂಚಿಕೆ ತಲಪಿತು. ಪುಸ್ತಕವು ತುಂಬಾ ಚೆನ್ನಾಗಿ ಬಂದಿದೆ.

ಡಾ|| ಎಂ. ಉಷಾ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾನಿಲಯ

ಹಂಪಿ, ಹೊಸಪೇಟೆ

ಸನ್ಮಾನ್ಯರೆ,

ತಾವು ಕಳುಹಿಸಿಕೊಟ್ಟಿರುವ ಪುಸ್ತಕ ಪ್ರಪಂಚದ ಕಾರಂತ ವಿಶೇಷ ಸಂಚಿಕೆ ತಲಪಿದೆ. ಇಂತಹ ಒಂದು ಅಮೂಲ್ಯ ಸಂಗ್ರಾಹ್ಯ ಸಂಚಿಕೆಯನ್ನು ಹೊರತಂದಿರುವುದಕ್ಕಾಗಿ ತಮಗೆ ನನ್ನ ಅನಂತಾನಂತ ಕೃತಜ್ಞತೆಗಳು.

ತಮ್ಮ ವಿಶ್ವಾಸಿ

ಕೋರಮಂಗಲ
ಬೆಂಗಳೂರು-೩೪

ವಿ. ಶ್ರೀನಿವಾಸ

ಪುಸ್ತಕ ಪ್ರಪಂಚ ಸಂಪಾದಕ ಮಂಡಳಿಗೆ ಅಭಿನಂದನೆಗಳು.

ಸನ್ಮಾನ್ಯ ಸದಸ್ಯರೆ,

ಸದ್ಯಕ್ಕೆ ದೆಹಲಿ ನಿವಾಸಿಯಾಗಿರುವ ಸಾಹಿತ್ಯಾಭಿಮಾನಿಯಾದ ನನಗೆ ನಿಮ್ಮ ಮಂಡಳಿ ಸಂಪಾದಿಸಿರುವ ಕಾರಂತ ವಿಶೇಷ ಸಂಚಿಕೆಯು ತಲಪಿತು. ೧೭೨ ಪುಟಗಳ ಈ ಕೃತಿಯಲ್ಲಿ ಕಾರಂತರ ದರ್ಶನವನ್ನೇ ಮಾಡಿದ್ದೀರಿ. ಈ ಸಂಚಿಕೆಗಾಗಿ ತಮ್ಮ ಅಮೂಲ್ಯ ಲೇಖನಗಳನ್ನು ಬರೆದುಕೊಟ್ಟ ಗೌರವಾನ್ವಿತ ಲೇಖಕರಿಗೆ, ಇದನ್ನು ಅಚ್ಚುಕಟ್ಟಾಗಿ ಸಂಪಾದಿಸಿರುವ ಸಂಪಾದಕ ಮಂಡಳಿಗೆ ಅತ್ಯಂತ ಕಡಿಮೆ ಬೆಲೆಗೆ ಮುದ್ರಿಸಿ ಒದಗಿಸಿರುವ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು ಇವರೆಲ್ಲರಿಗೂ ನನ್ನ ಹಾಗೂ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ಈ ಮೂಲಕ ಸಲ್ಲಿಸುತ್ತೇನೆ.

ನಿಮ್ಮ ವಿಶ್ವಾಸಿಗನಾದ

ಹಾಜ್ ಕಾಜ್, ನವದೆಹಲಿ

ಶ್ರೀನಿವಾಸ ಬಲ್ಲಾಳ

ಸಮಿತಿಯ ಹೊಸ ಪ್ರಕಟಣೆಗಳು

ಕಾರಂತ ದರ್ಶನ

ಕಾರಂತರ ಬದುಕು, ಬರಹ ಸ್ಮೃತಿಗಳನ್ನೊಳಗೊಂಡ ನಾಡಿನ ಗಣ್ಯರ, ಹೆಸರಾಂತ ಬರಹಗಾರರ, ಅಭಿಮಾನಿಗಳ ಲೇಖನಗಳ ಸಂಗ್ರಹ—**ಕಾರಂತ ದರ್ಶನ**

ಕಾರಂತರ ವಿಶಿಷ್ಟ ಚಿತ್ರಗಳೊಂದಿಗೆ ಡೆಮಿ ೧/೮, ೧೬೪ ಪುಟಗಳ ಅಪೂರ್ವಕೃತಿ.

ಸಂಪಾದಕೀಯ ಸಂಕಲನ

ಪುಸ್ತಕ ಪ್ರಪಂಚದಲ್ಲಿ ಈ ಹಿಂದೆ ಪ್ರಕಟಗೊಂಡ ಡಾ॥ ದೇಜಗೌ ಅವರ ಸಂಪಾದಕೀಯ ಲೇಖನಗಳ ಸಂಗ್ರಹ—**ಸಂಪಾದಕೀಯ ಸಂಕಲನ**

ನಾಡಿನ ಖ್ಯಾತ ಕಲಾವಿದರಾದ ಪಿ. ಆರ್. ತಿಪ್ಪೇಸ್ವಾಮಿ ಅವರ ಆಕರ್ಷಕ ಮುಖ ಚಿತ್ರದೊಂದಿಗೆ, ಡೆಮಿ ೧/೮, ೧೪೪ ಪುಟಗಳ ಡಿ.ಟಿ.ಪಿ ಮುದ್ರಣ. ವೈವಿಧ್ಯಮಯ ವಿಚಾರಪೂರಿತ ಚಿಂತನಾರ್ಹ ವಿಷಯಗಳ ಸಾರಸಂಗ್ರಹ.

ಈ ಕೃತಿಗಳು ಕಡಿಮೆದರದಲ್ಲಿ ಲಭ್ಯ. ಪ್ರತಿಗಳಿಗಾಗಿ ಸಂಪರ್ಕಿಸಿ:

ಪ್ರಧಾನ ಸಂಪಾದಕ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. ೫/೧, ವಿನೋಬಾ ರಸ್ತೆ
ಮಾನಸಗಂಗೋತ್ರಿ, ಮೈಸೂರು—೫೭೦ ೦೦೬

Reg. No. KRNN.29 / WPP 6

LICENCE No. 21
LICENCED TO POST WITH PAYMENT



೧೧-೦೭-೯೮ ವಿಶ್ವ ಜನಸಂಖ್ಯಾ ದಿನ : ಜನಸಂಖ್ಯಾ ಸ್ಫೋಟ

Edited by Chandrashekhararadhya, Printed by Papanna
Printed & Published by Karnataka State Adult Education Council,
5/1, Vinoba Road, Manasa Gangothri, Mysore-570 006.